SRI M. MOHAMED ALI.—Madam I beg to move :

"That the Karnataka Motor Vehicles (Taxation on Passengers and Goods) (Amendment) Bill 1976 be passed."

MADAM SPEAKER.—The question is :

"That the Karnataka Motor Vehicles (Taxation on Passengers and Goods) (Amendment) Bill 1976 be passed."

The motion was adopted
and Bill was passed.

THE KARNATAKA FOREST (AMENDMENT) BILL 1976

Motion to Consider

SRI C.N. PATIL.—(Minisier for Forests) : I beg to move :

"That the Karnataka Forest (Amendment) Bill 1976 be taken into consideration."

MADAM SPEAKER.—Motion moved.

"That the Karnataka Forest (Amendment) Bill 1976 be taken into consideration."

ಶ್ರೀ ಸಿ.ಎನ್, ಪಾಟೀಲ್.—ಮಾನ್ಯ ಅಧ್ಯಕ್ಷಣಿಯವರೇ, ಈ 1976 ನೇ ಕರ್ನಾಟಕ ರಾಜ್ಯದ ಅರಣ್ಯಕ್ಕೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕದ ಉದ್ದೇಶವೇನಿದೆ ಎಂದರೆ, ಅರಣ್ಯದಿಂದ ಬರತಕ್ಕ ವಿವಿಧವಾದ ಉತ್ಪನ್ನಗಳ ಮೇಲೆ ಶೇಕಡ 5ರಷ್ಟು ಟ್ಯಾಕ್ಸನ್ನು ಹಾಕಿ ಅದರಿಂದ ಬರತಕ್ಕ ಹಣದಿಂದ ಪ್ಲಾಂಟೇಷನ್ ಮತ್ತು ಪ್ರೊಟೆಕ್ಷನ್‌ಗೆ ಉಪಯೋಗಿಸುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದದ್ದು ಆಗಿದೆ.

ರಾಷ್ಟ್ರೀಯ ಸರಾಸರಿಯನ್ನು ತೆಗೆದುಕೊಂಡರೆ ಅರಣ್ಯ ಶೇಕಡ 23 ಇದೆ. ನಮ್ಮ ರಾಜ್ಯದಲ್ಲಿ ಶೇಕಡ 15 2 ಅರಣ್ಯವಿದೆ ಎಕ್ಸಪ್ಲಾಂಟೇಷನ್ ಆಫ್ ಟಿಂಬರ್ ಈ ವರ್ಷಕ್ಕೆ ಆಗುತ್ತಾ ಇರತಕ್ಕಂಥದು 1.18 ಮಿಲಿಯನ್ ಸಿ.ಎಂ.ಟಿ. ಪರ್ ಆನಂ. ಫೈರ್ ವುಡ್ 211.11 ಮಿಲಿಯನ್ ಸಿ.ಎಂ.ಟಿ. ಇನ್ನು 10–20 ವರ್ಷಗಳ ನಂತರ 1.18 ಮಿಲಿಯನ್‌ನಿಂದ ಸುಮಾರು 3 ಮಿಲಿಯನ್ ವರೆಗೆ ಏರಬಹುದು ಮತ್ತೆ ಉರುವಲು 211.11 ಮಿಲಿಯನ್ ಸಿ.ಎಂ.ಟಿನಿಂದ ಸುಮಾರು 4 ಮಿಲಿಯನ್‌ವರೆಗೆ ಏರಬಹುದು ಎನ್ನುವ ಅಂದಾಜು ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗ ನಮಗೆ ಮತ್ತೆ ಏನು ಕರಭಾರ ಹಾಕುತ್ತಿದ್ದೀರಿ ಸ್ವಾಮಿ ?

ಶ್ರೀ ಸಿ.ಎನ್. ಪಾಟೀಲ್.—ಶೇಕಡ 5 ಟ್ಯಾಕ್ಸನ್ನು ಏತಕ್ಕೆ ಹಾಕುತ್ತಿದ್ದೇವೆ, ಅದರ ಉದ್ದೇಶವೇನು ಎನ್ನುವುದನ್ನು ಹೇಳುತ್ತಿದೆ. ಈಗ ಬರತಕ್ಕಂಥ ಹಣದಿಂದ ಪ್ಲಾಂಟೇಷನ್ ಮತ್ತು ಪ್ರೊಟೆಕ್ಷನ್‌ಗೆ ಸಾಕಾಗುತ್ತಿರಲಿಲ್ಲವಾದುದರಿಂದ ನಾವು ಈ 5 ಪರ್ಸೆಂಟ್ ಟ್ಯಾಕ್ಸನ್ನು ಹಾಕುತ್ತಿದ್ದೇವೆ. ಈಗ ಇದಕ್ಕೆ ಕೇವಲ ಒಂದೂವರೆ ಕೋಟಿ ರೂಪಾಯಿ ಮಾತ್ರ ಉಪಯೋಗ ಮಾಡುತ್ತಿದ್ದೇವೆ. ಇನ್ನು 10–20 ವರ್ಷಗಳ ನಂತರ ಜನತೆಗೆ ಅವಶ್ಯಕವಾದಂಥ ಟಿಂಬರ್ ಆಗಲೀ ಮತ್ತೊಂದು ಆಗಲಿ ದೊರೆಯದೇ ಹೋಗಬಹುದಾದಂತ ಸಂದರ್ಭ ಬರಬಹುದೆನ್ನುವ ದೃಷ್ಟಿಯಿಂದ ನಾವು ಪ್ಲಾಂಟೇಷನ್ ಮತ್ತು ಪ್ರೊಟೆಕ್ಷನ್ ಪ್ರೋಗ್ರಾಂನ್ನು ಹಾಕಿಕೊಂಡಿದ್ದೇವೆ. ಈಗ ಸುಮಾರು 30 ಕೋಟಿ ರೂಪಾಯಿಗಳ ಉತ್ಪನ್ನ ಅರಣ್ಯದಿಂದ ಸ್ಟೇಟ್ ಎಕ್ಸಚೆಕರ್‌ಗೆ ಬರುತ್ತಿದೆ;

ಈ 5 ಪರ್ಸೆಂಟ್ ಹೆಚ್ಚಿಗೆ ಟ್ಯಾಕ್ಸ್ ಹಾಕುವುದರಿಂದ ಮುಂಬರುವ ವರ್ಷಗಳಲ್ಲಿ ಸುಮಾರು 1.25 ಕೋಟಿ ರೂಪಾಯಿಗಳಿಂದ 1.4 ಕೋಟಿ ರೂಪಾಯಿಗಳವರೆಗೆ ಹೆಚ್ಚಿಗೆ ಹಣ ಬರುವುದರಿಂದ ಇನ್ನು 50 ಸಾವಿರ ಎಕರೆ ಹೆಚ್ಚಿಗೆ ಪ್ಲಾಂಟೇಷನ್ ತಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ನಾವು ಒಂದು ಕೋಟಿ ರೂಪಾಯಿಗಳನ್ನು ಪ್ಲಾಂಟೇಷನ್‌ಗೋಸ್ಕರ ಉಪಯೋಗಿಸಿದ್ದೇ ಆದರೆ ಮುಂಬರುವ 20-30 ವರ್ಷಗಳಲ್ಲಿ ಪ್ರತಿಯೊಂದು ಕೋಟಿ ರೂಪಾಯಿಂದಲೂ ರಾಜ್ಯದ ಬೊಕ್ಕಸಕ್ಕೆ ಸುಮಾರು 20-30 ಕೋಟಿ ರೂಪಾಯಿಗಳ ಉತ್ಪತ್ತಿ ಬರುತ್ತದೆ ಮತ್ತು ನಮ್ಮ ಮುಂದಿನ ಅವಶ್ಯಕತೆಗಳನ್ನು ನೀಗಿಸುವಲ್ಲಿ ಸಹಾಯಕವಾಗಿರುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಮಸೂದೆಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—(ಸೊರಬ) ಮಾನ್ಯ ಅಧ್ಯಕ್ಷಣಿಯವರೇ ಮಾನ್ಯ ಅರಣ್ಯ ಸಚಿವರು ಮಂಡಿಸಿರತಕ್ಕಂಥ ಕರ್ನಾಟಕ ಫಾರೆಸ್ಟ್ ಅಮೆಂಡ್‌ಮೆಂಟ್ ಬಿಲ್, ಈ ತಿದ್ದುಪಡಿ ಮಸೂದೆಯ ಬಗ್ಗೆ ನನಗೆ ಅನೇಕ ಯೋಚನೆಗಳು ಬೆಳಿಗ್ಗೆನಿಂದ ಪ್ರಾರಂಭವಾಗಿದೆ. ನಿನ್ನೆ ನಾನು ಒಂದು ಭಾವನೆಯಲ್ಲಿದೆ. ಆಗ ನಾನು ಈ ಬಿಲ್‌ನ್ನು ಸಂಪೂರ್ಣವಾಗಿ ಓದಿರಲಿಲ್ಲ. ಆಗ ಒಂದು ಭಾವನೆ ನನ್ನ ಮನಸ್ಸಿನಲ್ಲಿತ್ತು, ಅದು ಏನೆಂದರೆ ಶೇಕಡ 5 ಪರ್ಸೆಂಟ್ ಟ್ಯಾಕ್ಸ್ ಹಾಕುತ್ತಾರೆ ಆದರಿಂದ ಹೆಚ್ಚಿಗೆ ಉಪಯೋಗವಾಗುತ್ತದೆ ಎನ್ನುವ ಭಾವನೆಯಲ್ಲಿದೆ. ಮತ್ತೆ ನಾನು ತಿಳಿದುಕೊಂಡಿದ್ದು ಏನೆಂದರೆ ಟಿಂಬರ್ ಇವತ್ತು ಅರಣ್ಯದಲ್ಲಿ ಉತ್ಪನ್ನವಾಗತಕ್ಕಂಥದು, ಮತ್ತೆ ಅಲ್ಲಿ ನಾನಾ ಬಗೆಯ ವಸ್ತುಗಳು ಏನಿದೆ ಅದರಲ್ಲೂ ನಾಟ ಕೂಡ ಒಂದು. ಅದರ ಮೇಲೆ ಶೇಕಡ 5 ಟ್ಯಾಕ್ಸನ್ನು ಹಾಕಿದರೂ ಕೂಡ ಬಹಳ ದೊಡ್ಡದೊಡ್ಡವರು, ದೊಡ್ಡದೊಡ್ಡ ಸೌಧಗಳನ್ನು ನಿರ್ಮಾಣಮಾಡತಕ್ಕಂಥವರ ಮೇಲೆ ಟ್ಯಾಕ್ಸ್‌ನ ಹೊರೆ ಬೀಳುತ್ತದೆ, ಅವರು ಬೇಕಾದರೆ ಹೆಚ್ಚಿಗೆ ಟ್ಯಾಕ್ಸ್‌ನ್ನು ಕೊಡಲಿ ಎನ್ನುವ ಸಮಾಧಾನ ನನಗಿತ್ತು. 5 ಪರ್ಸೆಂಟ್ ಟ್ಯಾಕ್ಸ್‌ನ್ನು ಏನು ಜಾಸ್ತಿ ಹಾಕುತ್ತಿದ್ದಾರೆ ಅದಕ್ಕೆ ನಮಗೇನೂ ಅಭ್ಯಂತರವಿಲ್ಲ. ನನ್ನ ಭಾವನೆಯಲ್ಲಿ ಏನಿದೆ ಎಂದರೆ ಮಾನ್ಯ ಅರಣ್ಯ ಸಚಿವರು ಬಂದು ಬಿಡುವುದು ಒಳ್ಳೆಯದು. ಫಾರೆಸ್ಟ್ ಆ್ಯಕ್ಟ್‌ಗೆ ತಾವು ಅಧ್ಯಾಯ 11 (ಎ) ಯನ್ನು ಸೇರಿಸುತ್ತಿದ್ದೀರಿ. 98 (ಎ) ಬಹಳ ಚೊಕ್ಕವಾಗಿ ನಮಗೆ ಅನುಮಾನ ಬರುವ ಹಾಗೆ ವಿವರಣೆಯನ್ನು ಕೊಟ್ಟಿದ್ದೀರಿ. Is says like this ;

> **98A. Levy of Forest Development Tax.**—(1) Not with standing anything contained in this Act, in respect of forest produce disposed of by the State Government by sale or other wise, there shall be levied and paid to the State Government a tax at the rate of five percent on the amount of consideration paid therefor''

ಮಾನ್ಯ ಅಧ್ಯಕ್ಷರೆ, ಇದರಲ್ಲಿ ಟಿಂಬರ್ ಇದ್ದು ಕೆಲವು ವಸ್ತುಗಳನ್ನು ಬಹಳ ಸ್ಪಷ್ಟವಾಗಿ ಉಲ್ಲೇಖ ಮಾಡಿದರೆ ಯಾವುದು ಒಪ್ಪಬೇಕು, ಯಾವುದು ಬಿಡಬೇಕು ಅದು ಗೊತ್ತಾಗುವುದಿಲ್ಲ. ಈಗ ಇದರಲ್ಲಿ ಏನು ಹೇಳಿದ್ದಾರೆ ಎಂದರೆ ಜನರಲ್ ಆಗಿ ಒಂದು ಪದವನ್ನು ಇಟ್ಟಿದ್ದಾರೆ, ಇನ್‌-ರೆಸ್ಪೆಕ್ಟ್ ಆಫ್ ಫಾರೆಸ್ಟ್ ಪ್ರೊಡ್ಯೂಸ್, ಫಾರೆಸ್ಟ್ ಪ್ರೊಡ್ಯೂಸ್ ಎಂದರೆ, ಈಗ ಸೌದೆ ತಂದರೆ ಅದು ಫಾರೆಸ್ಟ್ ಪ್ರೊಡ್ಯೂಸ್ ಆಗುತ್ತದೆ. ಮರದಿಂದ ಉದುರತಕ್ಕದ್ದು ಉರುವಲು ಕೂಡ ಫಾರೆಸ್ಟ್ ಪ್ರೊಡ್ಯೂಸ್ ಆಗುತ್ತದೆ. ಅಲ್ಲದೆ ಈಗಾಗಲೇ ನಮ್ಮ ಶಿವಮೊಗ್ಗದಲ್ಲಿ ಒಂದು ಡಿಪೋವನ್ನು ತೆಗೆದಿದ್ದೀರಿ. ಈಗ ನೀವು ಮಾಡುತ್ತಿರುವುದನ್ನು ನೋಡಿದರೆ ಈ ಒಂದು ಡಿಪೋದಲ್ಲಿ ಇರತಕ್ಕ ಈ ತರಗೆಲೆ ಅದು ಒಂದು ಫಾರೆಸ್ಟ್ ಪ್ರೊಡ್ಯೂಸ್ ಆಗುತ್ತದೆ ಅದನ್ನು ಕೂಡ ಮಾರುವಾಗ 5 ಪರ್‌ಸೆಂಟ್ ಟ್ಯಾಕ್ಸ್ ಹಾಕಬಹುದು, ಇದು ಬಹಳ ಅನ್ಯಾಯದ ಪರಮಾವಧಿ ಎಂದು ಹೇಳುತ್ತೇವೆ. ನಾನು ನೆನ್ನೆಯ ದಿವಸ ಈ ಫಾರೆಸ್ಟ್ ಪ್ರೊಡ್ಯೂಸ್ ಎಂದರೆ ದಿಸ್ ಇನ್‌ಕ್ಲೂಡ್ಸ್ ಎವೆರಿ-ಥಿಂಗ್ ಎನ್ನುವ ಭಾವನೆಯಲ್ಲಿ ಇರಲಿಲ್ಲ, ಟಿಂಬರ್ ಮಾತ್ರ ಇರಬಹುದು ಎಂದು ಇದ್ದೆ, ಅದರಿಂದ ಮಾನ್ಯ ಅರಣ್ಯ ಸಚಿವರು ಇದರ ಬಗ್ಗೆ ಇನ್ನು ಹಾಳವಾಗಿ ನೋಡಿ ಈ ಬಡವರು ಉಪಯೋಗಿಸತಕ್ಕ ಸೌದೆ ಏನು ಇದೆ ಅದಕ್ಕೆ ವಿನಾಯಿತಿ ಮಾಡಬೇಕು ಎಂದು ಹೇಳುತ್ತೇನೆ. As regards

constitution of a fund called Forest Development Fund, I would like to welcome it. ಅದರ ಪ್ರಕಾರ ನನ್ನದು ಏನು ಅಡ್ಡಿ ಇಲ್ಲ. ಈಗ ಪ್ಲಾಂಟೇಷನ್ ಬೆಳೆಸುವುದಕ್ಕೆ ನಾನು ಬೆಂಬಲ ಕೊಡುತ್ತೇನೆ. ಆದರೆ ಈಗ ಡಿಪೋಗಳಲ್ಲಿ ಸೌದೆ ತಂದು ಜೀವನ ಮಾಡತಕ್ಕ ಬಡ ಜನತೆ ಈಗಲೇ ಬೆಲೆ ಜಾಸ್ತಿ ಇದೆ ಎಂದು ಹೇಳಿ ತತ್ತರಿಸಿ ಹೋಗಿದ್ದಾರೆ ಅಂತಾದ್ದರಲ್ಲಿ ಇನ್ನು 5 ಪರ್ಸೆಂಟ್ ಟ್ಯಾಕ್ಸ್ ಹಾಕುವುದಾದರೆ ಬಹಳ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ. ಈಗ ಇರತಕ್ಕ ಒಂದು ಮಸೂದೆಯಲ್ಲಿ ಸೌದೆ ಎನ್ನುವ ಪದವನ್ನು ಬಿಟ್ಟು ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ. ತಾವು ಇದರ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಡಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ. ಈಗ ನೀವು ಟಿಂಬರ್ ಮೇಲೆ 5 ಪರ್ಸೆಂಟ್ ಟ್ಯಾಕ್ಸ್ ಹಾಕಿದರೆ ಅದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಮತ್ತೆ ಈಗ ಬಡವರು ಏನಾದರೂ ಮನೆ ಕಟ್ಟಿಕೊಳ್ಳಬೇಕಾದರೆ ಅವರಿಗೆ ಇದರಲ್ಲಿ ಒಂದು ಎಕ್ಸೆಂಪ್ಟ್ ಮಾಡುವುದಕ್ಕೆ ಅವಕಾಶಮಾಡಿಕೊಡಬೇಕು. ಈಗ ತಾವು ಈ ಹಣವನ್ನು ಏನು ಗಳಿಸುವುದಕ್ಕೆ ಹೊರಟಿದ್ದೀರಿ ಇದು ಸುಮಾರು 1 ಕೋಟಿ 25 ಲಕ್ಷ ರೂಪಾಯಿ ಆಗಬಹುದು. ನಾನು ತಮ್ಮಲ್ಲಿ ಭಿನ್ನವಿಸಿಕೊಳ್ಳುವುದು ಇಷ್ಟೇ, ಕೆಲವರು ಮನೆಗಳನ್ನು ಕಟ್ಟಿಕೊಳ್ಳತಕ್ಕ ಬಡ ರೈತರು ಇರುತ್ತಾರೆ, ಅವರಿಗೆ ಎಷ್ಟು ಇನ್‌ಕಮ್ ಬರುತ್ತದೆ ಅದನ್ನು ನೋಡಿ ಅವರಿಗೆ ಒಂದು ವಿಶೇಷವಾದ ರೀತಿಯಲ್ಲಿ ಎಕ್ಸೆಂಪ್ಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನುಳಿದವರಿಗೆ 5 ಪರ್ಸೆಂಟ್ ಹಾಕುವುದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಈಗ ತಾವು ಈ ಒಂದು ಬಿಲ್ಲಿನಲ್ಲಿ ಫಾರೆಸ್ಟ್ ಡೆವಲಪ್‌ಮೆಂಟ್ ಎಂದು ಮಾಡಬೇಕಾಗಿದೆ, ಅದಕ್ಕೋಸ್ಕರ ನಾವು ಫಾರೆಸ್ಟ್ ಡೆವಲಪ್‌ಮೆಂಟ್ ಟ್ಯಾಕ್ಸನ್ನು ಪ್ರಪೋಸ್ ಮಾಡಿ 5 ಪರ್ಸೆಂಟ್ ಎಂದು ತಿಳಿಸಿದ್ದೀರಿ, ತಾವು ಈ ಹಣವನ್ನು ಏತಕ್ಕೆ ಶೇಖರಣೆ ಮಾಡುತ್ತಿದ್ದೀರಿ, ತಾವು ಕನ್ಸಾಲಿಡೇಟೆಡ್ ಫಂಡ್‌ಗೆ ಕೊಡಿ ಅವರು ತೆಗೆದುಕೊಂಡು ಖರ್ಚುಮಾಡುತ್ತಿದ್ದಾರೆ. In the Statement of Object and Reasons, you have stated as follows;

> It is expected that in the near future, there will be famine of forest raw material including timber firewood for fuel and other industrial raw material. Hence, it is necessary to take timely steps to raise plantations more intensively in order to increase the availability of raw material on sustained yield basis.
>
> Hence, it is necessary to create the Forest Development Fund exclusively for raising Forest Plantations,

ಎನ್ನತಕ್ಕ ಭಾವನೆಯಿಂದ ಹೇಳಿದ್ದೀರಿ. ಅಲ್ಲದೆ ಈ ಒಂದು ಪ್ಲಾಂಟೇಷನ್ ಮಾಡುವ ಉದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ, ಈ ಪ್ಲಾಂಟೇಷನ್ ಮಾಡುವ ಬಗ್ಗೆ ನಮ್ಮ ಬೆಂಬಲ ಇದೆ, ಅದರ ಬಗ್ಗೆ ತಾವು ಏನು ಅನುಮಾನ ಪಡಬೇಕಾಗಿಲ್ಲ. ಈಗ ಇದರಿಂದ ಬರತಕ್ಕ ಹಣವನ್ನು ಪ್ಲಾಂಟೇಷನ್ ಕಾರ್ಪೊರೇಷನ್‌ಗೆ ಕೊಡುತ್ತೀರ ಎಂದು ಕಾಣುತ್ತದೆ. ಈಗ ಪ್ಲಾಂಟೇಷನ್ ಕಾರ್ಪೊರೇಷನ್ ರೈಸ್ ಮಾಡುವುದಕ್ಕೆ ಈ ರೀತಿ ಟ್ಯಾಕ್ಸ್ ಹಾಕುತ್ತಿದ್ದೀರಾ. ಈಗ ಒಂದು ಪ್ಲಾಂಟೇಷನ್ ಬೆಳೆಸುವುದಕ್ಕೋಸ್ಕರ ಒಂದು ಕಾರ್ಪೊರೇಷನ್ ಇದ್ದು, ತಾವು ತಮ್ಮ ಇಲಾಖೆಯಲ್ಲಿ ಮತ್ತೊಂದು ಶಾಖೆಯನ್ನು ತೆರೆಯುವುದಾದರೆ ಆ ಪ್ಲಾಂಟೇಷನ್ ಕಾರ್ಪೊರೇಷನ್ ಏತಕ್ಕೆ ಬೇಕು. ಅದಕ್ಕೆ ಒಬ್ಬರು ಚೇರ್‌ಮನ್ ಎಂದರೆ ಚೇರ್‌ಗೆ ಒಬ್ಬ ಮೆನ್, ಇದು ಏತಕ್ಕೆ ಬೇಕು ಎಂದು ಕೇಳುತ್ತೇನೆ. ಈಗ ಪ್ಲಾಂಟೇಷನ್ ಕಾರ್ಪೊರೇಷನ್‌ನವರು ಚೆನ್ನಾಗಿ ಕೆಲಸ ಮಾಡುವುದಿಲ್ಲ ಎಂದು ಕಂಡುಬಂದರೆ ಅದನ್ನು ವಜಾ ಮಾಡಿ; ತಮ್ಮ ಸರ್ಕಾರದಿಂದಲೇ ನಡೆಸಬಹುದು. ಈಗ ನಮ್ಮ ಅರಣ್ಯಮಂತ್ರಿಗಳು ಇನ್ನು ಕೆಲವು ವರ್ಷಗಳು ಕಳೆದ ಮೇಲೆ ನಮಗೆ ಸುಡುವುದಕ್ಕೂ ಸೌದೆ ಸಿಕ್ಕುವುದಿಲ್ಲ. ಟಿಂಬರ್ ಸಿಕ್ಕುವುದಿಲ್ಲ, ಅರಣ್ಯ ಉತ್ಪನ್ನ ಆಗತಕ್ಕದ್ದು ಸಾಕಾಗುವುದಿಲ್ಲ. ಎಂದು ಈಗ ತಾನೆ ತಿಳಿಸಿದರು. ಆದಕ್ಕೋಸ್ಕರ ನಮಗೆ ಹಣ ಕೊಡಿ ಎನ್ನುವ ಒಪ್ಪಿಗೆ ಪಡೆಯುತ್ತಿದ್ದಾರೆ. ನನಗೆ ಒಂದೊಂದು ಸಾರಿ ದ್ವಂದ್ವ ವಾದ, ಅಭಿಪ್ರಾಯ ಕೆಲವು ಕಾಣಿಸುತ್ತದೆ, ಇವೊತ್ತು ನಾವು ಮಲೆನಾಡಿನಿಂದ ಬಂದಿರತಕ್ಕ ಜನರು, ನಾವು ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೇ

ಬೆಳೆದಿರತಕ್ಕವರು. ಅದು ಬೇರೆ ಜನರಿಗೆ ಗೊತ್ತಿಲ್ಲದೇ ಇರಬಹುದು, ಮಾನ್ಯ ಅಧ್ಯಕ್ಷರೇ, ತಮಗೆ ಇದು ಗೊತ್ತಿದೆ, ಏಕೆಂದರೆ ತಾವು ಅಲ್ಲಿಂದ ಬಂದಿರತಕ್ಕವರು. ಇವೊತ್ತಿನ ದಿವಸ ಕಾಡನ್ನು ಕಡಿದರೆ ನಮ್ಮ ಮನೆಯ ಮುಂದೆ ಇರತಕ್ಕ ಗಿಡವನ್ನು ಕಡೆದರೆ ಎಷ್ಟು ಮನಸ್ಸು ನೋವಾಗುತ್ತದೆ ಅಷ್ಟೇ ನೋವಾಗುತ್ತದೆ ಎಂದು ಹೇಳುತ್ತೇನೆ. ಈಗ ಮಲೆನಾಡಿನ ಬಾಗದಲ್ಲಿರತಕ್ಕ ಬೆಟ್ಟಗುಡ್ಡಗಳ ಸುತ್ತಮುತ್ತ ಅರಣ್ಯ ಸಂಪತ್ತು ಇರುವ ಕಾಲದಲ್ಲಿ ನಾವು ಪ್ಲಾಂಟೇಷನ್ ಮಾಡಬೇಕೆಂದು ಆ ಗುಡ್ಡವನ್ನು ತಲೆ ಬೋಳಿಸಿದ್ದಾರೆ. ಅವರು ಗುಡ್ಡ ಬೋಳಿಸಿ ಎಷ್ಟು ವರ್ಷವಾಯಿತು, ಅಲ್ಲಿ ಗಿಡಗಳನ್ನು ಹಾಕಲಿಕ್ಕೆ ಹಣ ಖರ್ಚು ಮಾಡಿ ಎಷ್ಟು ವರ್ಷ ಆಯಿತು, ಆ ಹಣ ಎಲ್ಲಿ ಹೋಯಿತು, ಆ ಭಾಗದಲ್ಲಿ ಗಿಡಗಳು ಎದ್ದಿಲ್ಲ ಇದಕ್ಕೆ ಕಾರಣ ಯಾರು, ಇದಕ್ಕೆ ಸಂಪೂರ್ಣ ತನಿಖೆ ಮಾಡಿಸುವುದಕ್ಕೆ ಏತಕ್ಕೆ ಸರ್ಕಾರ ಆರ್ಡರ್ ಮಾಡಬಾರದು ಎಂದು ಕೇಳುತ್ತೇನೆ. ತಾವು ಹೇಳುವಾಗ ಕಾಡು ಹಾಳಾಗಿ ಹೋಗುತ್ತಿದೆ, ಅದನ್ನು ಬೆಳೆಸುವುದಕ್ಕೆ ಹೆಚ್ಚು ಪ್ರಯತ್ನ ಮಾಡಬೇಕು ಎಂದು ಹೇಳುವುದು ನಮಗೆ ಬಹಳ ಸಂತೋಷವನ್ನು ಉಂಟು ಮಾಡುತ್ತದೆ. ಆದರೆ ಅದೇ ತಮ್ಮ ಅರಣ್ಯ ಇಲಾಖೆಯವರು ಸಿಕ್ಕಾಪಟ್ಟೆ ಕಡಿದು ಹಾಳು ಮಾಡುತ್ತಾರೆ. ಈಗ ಇರತಕ್ಕ ಕಾಡನ್ನು ಉಳಿಸತಕ್ಕದ್ದು ಇಲ್ಲ ನಾವು ಕಾಡನ್ನು ಕಡಿದು ಬೆಳೆಸುವುದು, ಈ ಕಾಡಿನಲ್ಲಿ ಗಿಡವನ್ನು ನಡೆಸುತ್ತೇವೆ. ಎಂದು 5 ಪರ್ಸೆಂಟ್ ಟ್ಯಾಕ್ಸ್ ಹಾಕುತ್ತೇವೆ ಎಂದು ಹೇಳುವುದು ಇದು ದ್ವಂದವಾಗುವುದಿಲ್ಲವೇ ಒಂದಕ್ಕೊಂದು ತದ್ವಿರುದ್ಧವಾಗುವುದಿಲ್ಲವೇ ಈಗ ನಾನು ಪ್ಲಾಂಟೇಷನ್ ಮಾಡಬಾರದು ಎಂದು ಹೇಳುತ್ತಿಲ್ಲ, ಈಗ ಇರತಕ್ಕ ಕಾಡನ್ನು ಮೊದಲು ಉಳಿಸಿ, ಈಗ ಕಾಡುಗಳು ಎಲ್ಲೆಲ್ಲಿ ಇವೆ ಅವುಗಳನ್ನು ನಾವು ಕಾಯಬೇಕು ಏಕೆಂದರೆ ಒಂದು ವೃತ್ತಿಯನ್ನು ಮಾಡುವುದಕ್ಕೆ ಹೊರಟರೆ ಕೆಲವರಿಗೆ ಒಂದು ಸ್ವರ್ಗ ಸೋಪಾನ. ಎಲ್ಲಾ ಕಂಟ್ರಾಕ್ಟರ್ಸ್ ಈ ರೀತಿ ಇಲ್ಲ. ಆದರ ಕೆಲವರು ದೊಡ್ಡ ದೊಡ್ಡ ಕಂಟ್ರಾಕ್ಟರ್ಸ್ ಈ ರೀತಿ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯನ್ನು, ಪೋಲೀಸ್ ಇಲಾಖೆಗೆ ಮತ್ತು ಲೋಕೋಪಯೋಗಿ ಇಲಾಖೆಗೆ ಹೋಲಿಸಿದಾಗ ಸಿಬ್ಬಂದಿ ಸಂಖ್ಯೆಯಲ್ಲಿ ಬಹಳ ಕಡಿಮೆ ಇದೆ. ಆದರೂ ಅರಣ್ಯ ಇಲಾಖೆ ಬಹಳಷ್ಟು ಜನರನ್ನು ಕಡ್ಡಾಯ ನಿವೃತ್ತಿ ಮಾಡಿದೆ. ಇದು ಬಹಳ ಮೆಚ್ಚತಕ್ಕ ವಿಷಯ. ನೌಕರರನ್ನು ಕಡ್ಡಾಯ ನಿವೃತ್ತಿ ಮಾಡಿದ ಇಲಾಖೆಗಳಲ್ಲಿ ಇದು ಮೊದಲನೆ ಸ್ಥಾನ ಗಳಿಸುತ್ತದೆ ಅರಣ್ಯ ಇಲಾಖೆಯ ಅನೇಕರ ಮೇಲೆ ಆಪಾದನೆಗಳು ಇದ್ದುದರಿಂದ, ಮತ್ತು ಈ ಸದನದಲ್ಲಿ ನಾವೆಲ್ಲಾ ಹಲವಾರು ಆಪಾದನೆಗಳನ್ನು ಕೆಲವು ಅಧಿಕಾರಿಗಳ ಮೇಲೆ ಮಾಡಿದ್ದುದರಿಂದ. ಮಾನ್ಯಮಂತ್ರಿಗಳು ಅವೆಲ್ಲವನ್ನೂ ಸರಿಯಾಗಿ ವಿಚಾರ ಮಾಡಿ, ಅವರನ್ನು ಕಡ್ಡಾಯ ನಿವೃತ್ತಿಗೊಳಿಸಿದ್ದಾರೆ ಎಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ಆದರೆ, ಅರಣ್ಯ ಇಲಾಖೆಯಲ್ಲಿರುವ ಅಧಿಕಾರಿಗಳೆಲ್ಲ ಕೆಟ್ಟವರು ಎಂದು ನಾನು ಹೇಳುವುದಿಲ್ಲ : ಅಲ್ಲಿ ಒಳ್ಳೆಯ ಅಧಿಕಾರಿಗಳೂ ಇದ್ದಾರೆ.

2-30 P.M.

ಇವತ್ತಿನ ದಿವಸ ಕಂಟ್ರಾಕ್ಟರುಗಳು ಪ್ಲಾಂಟೇಷನ್ ಹಾಕುವುದನ್ನು ಕಾಯುತ್ತ ಇರುತ್ತಾರೆ. ಪ್ಲಾಂಟೇಷನ್ ಮಾಡಿ, ಕಾಡನ್ನು ಕಡಿದು ಅದನ್ನು ಹರಾಜು ಹಾಕುತ್ತಾರೆ. ಆದರೆ ಹೀಗೆ ಹರಾಜು ಹಾಕುವ ಸಂದರ್ಭದಲ್ಲಿ ಸರ್ವೆ ಮಾಡಿಸುವಾಗ ಹೆಚ್ಚು ಕಡಿಮೆ ಮಾಡಿದ್ದಾರೆ. ತುಕೂರು ಮತ್ತು ಕೊಡಕಾಣಿ ಮುಂತಾದ ಕಡೆಗಳಲ್ಲಿ ಏನು ನಡೆಯಿತು, ಎಂಬುದು ಎಲ್ಲರಿಗೂ ಗೊತ್ತಿದೆ : ಮಾನ್ಯಮಂತ್ರಿಗಳಿಗೂ ಗೊತ್ತಿದೆ. ಹತ್ತು ಎಕರೆ ಎಂದು ಹೇಳಿ ಸರ್ವೆ ಮಾಡಿಸುವಾಗ ಸುಮಾರು 12-13 ಎಕರೆಯನ್ನು ಹರಾಜು ಹಾಕಿಸಿದ್ದಾರೆ. ಈ ರೀತಿಯಾಗಿ ಹಣ ಗಳಿಕೆ ಮಾಡತಕ್ಕಂಥ ಒಂದು ಕೆಟ್ಟ ಪ್ರವೃತ್ತಿ ಇರತಕ್ಕ ಕಂಟ್ರಾಕ್ಟರ್ಸ್‌ಗಳೂ ನಮ್ಮ ರಾಜ್ಯದಲ್ಲಿ ಇದ್ದಾರೆ. ಆದುದರಿಂದ, ಇನ್ನು ಮುಂದೆ ಪ್ಲಾಂಟೇಷನ್ ಮಾಡುವುದಾದರೆ, ಭಾರಿ ಅರಣ್ಯ ಪ್ರದೇಶವನ್ನು ಬಿಟ್ಟು, ಬೇರೆ ಕಡೆ ಮಾಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ

ಅರಣ್ಯ ಪ್ರದೇಶದಲ್ಲಿರುವ ಪ್ಲಾಂಟೇಷನ್ ಅಭಿವೃದ್ಧಿಯನ್ನು ಖುದ್ದು ವೀಕ್ಷಣೆ ಮಾಡಲು, ಮಾನ್ಯ ಅಧ್ಯಕ್ಷರು ಈ ಸದನದ ಸದಸ್ಯರನ್ನೊಳಗೊಂಡ ಒಂದು ಡೆಲಿಗೇಷನ್‌ನನ್ನು ಕಳುಹಿಸಿ ಕೊಡಲು ಅಪ್ಪಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಗಾಳೀದ ಗುಡ್ಡದ ಮೇಲೆ ಎಷ್ಟೆಷ್ಟು ಗಿಡಗಳನ್ನು ನೆಟ್ಟಿದ್ದಾರೆ ; ಅವುಗಳಲ್ಲಿ ಎಷ್ಟು ಬೆಳೆದಿವೆ ಮತ್ತು ಗುಲ್ಬರ್ಗಾದಲ್ಲಿ ನೆಟ್ಟಿದ್ದ ಗಿಡಗಳು ಭಾರಿ ಬೇಸಿಗೆಯಲ್ಲೂ ಚಿಗುರೊಡೆದು ಹೇಗೆ ಬೆಳೆದಿವೆ ಎಂಬುದನ್ನೆಲ್ಲಾ ಲೆಕ್ಕಾಚಾರ ಮಾಡಬೇಕಾ

ಗಿದೆ. ಅದನ್ನು ಈ ಸದನವೂ ಕೂಡ ಒಪ್ಪುತ್ತದೆ ಎಂದು ನಾನು ಭಾವಿಸುತ್ತೇನೆ. ಈಗ ಪ್ಲಾಂಟೇಷನ್ ಮಾಡುವುದಕ್ಕಾಗಿ ವಿಶ್ವಬ್ಯಾಂಕಿನವರಿಂದ ಹಣ ತೆಗೆದುಕೊಂಡಿದ್ದಾರೆ. ರಾಜ್ಯ ಸರ್ಕಾರದವರೂ ಕೊಟ್ಟಿದ್ದಾರೆ. ಹಾಗೆ ಕೊಟ್ಟ ಹಣ ಸದ್ವಿನಿಯೋಗವಾಗುತ್ತಿದೆಯೋ ಅಥವಾ ಇಲ್ಲವೇ, ಗಿಡಗಳು ಬೆಳೆದಿವೆಯೋ ಅಥವಾ ಇಲ್ಲವೇ ಎಂಬುದನ್ನು ಒಂದು ಡೆಲಿಗೇಷನ್ ಕಳುಹಿಸಿ ವಿಚಾರ ತಿಳಿಯಬೇಕಾಗಿದೆ.

ಇನ್ನು ಅರಣ್ಯವನ್ನು ಕಡಿಯತಕ್ಕ ವಿಚಾರ. ಜನಗಳಿಗೆ ಹೇಳುವ ಮೊದಲೇ ಸರ್ಕಾರ ಇದರ ಬಗ್ಗೆ ಬುದ್ಧಿಯನ್ನು ತಿಳಿದುಕೊಳ್ಳಬೇಕಾಗಿದೆ. ಈಗಿರತಕ್ಕ ಅರಣ್ಯವನ್ನು ಉಳಿಸಬೇಕು. ಇನ್ನು ಮುಂದೆ ಅರಣ್ಯ ಕಡಿಯುವುದನ್ನು ನಿಲ್ಲಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರವೇನೆಂದರೆ:—ಈಗಾಗಲೇ ಕಂಟ್ರಾಕ್ಟ್ ಕ್ಯಾರೇಜ್‌ಸಗಳನ್ನು ರಾಷ್ಟ್ರೀಕರಣ ಮಾಡಿಕೊಂಡಿದ್ದಾರೆ. ನೀಲಗಿರಿ ಮರಗಳನ್ನು ಒದಗಿಸುವ ಬಗ್ಗೆ ಹರಿಹರದ ಫಾಲಿಫೈಬರ್ ಕಂಪನಿಯೊಂದಿಗೆ 2000 ಎ. ಡಿ. ವರೆಗೆ ಹಿಂದಿನ ಸರ್ಕಾರದವರು ಕಂಟ್ರಾಕ್ಟ್ ಕೊಟ್ಟಿದ್ದಾರೆ

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.—ಯಾರು ಕೊಟ್ಟಿದ್ದು ಗೊತ್ತಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ —ಹಿಂದಿನ ಸರ್ಕಾರ ಎಂದು ಹೇಳಿದ್ದೇನೆ ಹೆಸರು ಬೇಕಾದರೆ ನೆನಪು ಮಾಡಿಕೊಳ್ಳಿ. ಬಿರ್ಲಾ ಕಂಪೆನಿಗೂ, ಹರಿಹರದ ಫಾಲಿಫೈಬರ್ ಕಂಪೆನಿಗೂ ಮತ್ತು ನಮ್ಮ ಸರ್ಕಾರಕ್ಕೂ ಕಂಟ್ರಾಕ್ಟ್ ಆಗಿದೆ ಆದುದರಿಂದ, ಇವುಗಳನ್ನೂ ಏತಕ್ಕೆ ಸರ್ಕಾರದವರು ರಾಷ್ಟ್ರೀಕರಣ ಮಾಡಬಾರದು ? ರಾಷ್ಟ್ರೀಕರಣ ಮಾಡದೇ ಹೋದರೆ ಇವರು ಕಂಟ್ರೋಲ್‌ಗೆ ಬರುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ಒಂದು ಕಡೆ ಪ್ಲಾಂಟೇಷನ್ ಮಾಡುತ್ತಾ ಇರುವುದು, ಇನ್ನೊಂದು ಕಡೆ ಮರಗಳನ್ನು ಕಡಿಯುವುದಕ್ಕೆ ಕಾಂಟ್ರಾಕ್ಟ್ ಕೊಡುತ್ತಾ ಇರುವುದು. ಇದು ಯಾವ ನ್ಯಾಯ? ಆದುದರಿಂದ, ನಾನು ಈ ತಿದ್ದುಪಡಿ ಮಸೂದೆಯನ್ನು ವಿರೋಧ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ.

ಕೊನೆಯದಾಗಿ, ಮಾನ್ಯ ಮಂತ್ರಿಗಳು ಸೌದೆ ಮತ್ತು ಮನೆ ಕಟ್ಟತಕ್ಕ ಸಣ್ಣ ಪುಟ್ಟ ಮರಕ್ಕೆ ವಿನಾಯಿತಿ ಕೊಡಬೇಕು. ಸಾಧ್ಯವಾದರೆ 5 ಪರ್ಸೆಂಟ್ ಹಾಕಿದರೆ ನನ್ನದೇನೂ ಅಭ್ಯಂತರವಿಲ್ಲ ಎಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—(ಹೊಸನಗರ) ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಮಂತ್ರಿಗಳು ತಂದಿರತಕ್ಕ ಮಸೂದೆ ಚಿಕ್ಕದಾದರೂ, ಮಲೆನಾಡಿನ ಜನರಿಗೆ ಬೃಹದಾಕಾರವಾಗಿ ಪರಿಣಾಮವಾಗುವುದರಿಂದ, ಇದನ್ನು ನಾನು ಸ್ವಾಗತಿಸಲೇ ಬೇಕಾಗಿದೆ; ಸ್ವಾಗತಿಸುತ್ತೇನೆ. ಇದೇ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಮಾತ್ರ ನಾನು ಸರ್ಕಾರದಲ್ಲಿ ಅರಿಕೆ ಮಾಡಿಕೊಳ್ಳಬಯಸುತ್ತೇನೆ. ಇಲ್ಲಿಯವರೆಗೆ ಮಲೆನಾಡಿನ ನಮ್ಮ ರೈತರು ಯಾವತ್ತೂ ಕೂಡ ಕಟ್ಟಿಗೆಗಾಗಿ 10 ರೂಪಾಯಿ ಖರ್ಚು ಮಾಡುವಂಥ ಪರಿಸ್ಥಿತಿ ಇರಲಿಲ್ಲ. ಆದರೆ, ಇವತ್ತು ಒಂದು ಗಾಡಿ ಕಟ್ಟಿಗೆ ಪಡೆಯಬೇಕಾದರೆ, ಆತ ಮನೆ ಬಳಕೆಗೂ ಕೂಡ 5 ರೂಪಾಯಿ ಕೊಟ್ಟು ಲೈಸೆನ್ಸ್ ಪಡೆಯುವ ಪರಿಸ್ಥಿತಿ ಬಂದಿದೆ. ಈ ಮಸೂದೆಯಲ್ಲಿ ಅಡಕವಾಗಿರುವ ಸೆಕ್ಷನ್ 98 ಎ ವಿಚಾರವಾಗಿ ನನ್ನ ಗೆಳೆಯರಾದ ಮಾನ್ಯ ಶ್ರೀ ಎಸ್. ಬಂಗಾರಪ್ಪನವರು ಹೇಳಿದ್ದಾರೆ. ಇದರ ಪರಿಣಾಮ ವಿಶ್ವವ್ಯಾಪಕವಾಗಿದೆ. ಇದೇನೂ ಕೇವಲ ಟಿಂಬರ್‌ಗೆ ಮಾತ್ರ ಪರಿಣಾಮವಾಗುವುದಿಲ್ಲ. ಮಲೆನಾಡಿನ ರೈತ ಐದು ರೂಪಾಯಿಯನ್ನು ಲೈಸೆನ್ಸ್‌ಗೆ ಕೊಡುವುದಲ್ಲದೆ, ತೆರಿಗೆ ಕೂಡ ಕೊಡುವ ಪರಿಸ್ಥಿತಿ ಬರುತ್ತದೋ ಏನೋ ಎನ್ನುವ ಸಂಶಯ ನನಗೆ ಉದ್ಭವಿಸುತ್ತಿದೆ. ಆದುದರಿಂದ, ಮಾನ್ಯ ಮಂತ್ರಿಗಳು, ದಿನಬಳಕೆಗೆ ಉಪಯೋಗಿಸತಕ್ಕ ಕಟ್ಟಿಗೆಗಾದರೂ ಕೂಡ ಇದರಿಂದ ವಿನಾಯಿತಿ ನೀಡುವ ವ್ಯವಸ್ಥೆ ಮಾಡಬೇಕೆಂದು ಅರಿಕೆ ಮಾಡುತ್ತೇನೆ

ಇನ್ನು, ಪ್ಲಾಂಟೇಷನ್ ಅಭಿವೃದ್ಧಿಗಾಗಿ ಸರ್ಕಾರದವರು ಹಣ ಖರ್ಚು ಮಾಡುತ್ತಿದ್ದಾರೆ. ಆದರೆ, ಮಲೆನಾಡು ಪ್ರದೇಶದಲ್ಲಿ ಪ್ಲಾಂಟೇಷನ್‌ನ್ನು ಎಲ್ಲಿ ಹಾಕುತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಬಹಳ ಉತ್ತಮವಾಗಿರತಕ್ಕ ತರೀ ಜಮೀನಿನ ಮೇಲೆ, ರೈತನ ಇಚ್ಛೆಗೆ ವಿರುದ್ಧವಾಗಿ ಪ್ಲಾಂಟೇಷನ್ ಹಾಕುತ್ತಿದ್ದಾರೆ. ಇದೊಂದು ಬೃಹದಾಕಾರವಾದ ಸಮಸ್ಯೆ

ಯಾಗಿದೆ. ಇದರ ನಿರ್ಣಯವನ್ನು ಮಾನ್ಯ ಮಂತ್ರಿಗಳು ಯಾವತ್ತು ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ಅರಣ್ಯ ಇಲಾಖೆಯವರು ಆ ಜಮೀನನ್ನು ನಮ್ಮದು ಎಂದು ಹೇಳುವುದು ; ಅಲ್ಲಿನ ರೈತರು ಅದು ನಮ್ಮದು ಎಂದು ಹೇಳುವುದು. ಹೀಗೆ ಆಗಿದೆ. ಆದರೆ, ಅಲ್ಲಿನ ರೈತರು ಆ ಜಮೀನುಗಳನ್ನು ಸುಮಾರು ಇಪ್ಪತ್ತೈದು ವರ್ಷಗಳಿಂದ ಸಾಗು ಮಾಡಿಕೊಂಡು ಬರುತ್ತಿದ್ದಾರೆ. ಆದರೆ, ಒಳ್ಳೆಯ ಬೆಳೆ ಹಾಕಿರುವ ಜಾಗದ ಮಧ್ಯೆ ಪ್ಲಾಂಟೇಷನ್‌ನ್ನು ಅರಣ್ಯ ಇಲಾಖೆಯವರು ಹಾಕುತ್ತಿದ್ದಾರೆ. ಇದರಿಂದ ಅಲ್ಲಿನ ರೈತನ ಬವಣೆ ಅಷ್ಟಿಷ್ಟಲ್ಲ ; ಅವನ ಕಷ್ಟ ಹೇಳತೀರದಾಗಿದೆ. ಅನೇಕ ಸಲ ಖಾಸಗಿಯಾಗಿಯೂ ಕೂಡ ಮಾನ್ಯ ಮಂತ್ರಿಗಳಲ್ಲಿ ಈ ವಿಷಯವನ್ನು ಹೇಳಿಕೊಂಡಿದ್ದೇನೆ ; ಪಕ್ಷ ಪ್ರಭೇದ ವಿಲ್ಲದೆ ಒಮ್ಮತದಿಂದ ಅರಿಕೆ ಮಾಡಿಕೊಂಡಿದ್ದೇನೆ. ಆದುದರಿಂದ, ಮಾನ್ಯ ಮಂತ್ರಿಗಳು ಅಲ್ಲಿನ ರೈತರಿಗೆ ಆಗುತ್ತಾ ಇರತಕ್ಕ ಈ ತೊಂದರೆಯನ್ನು ತಪ್ಪಿಸುವುದಕ್ಕೆ ಒಂದು ಸುವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲದೆ, ಪ್ಲಾಂಟೇಷನ್ ಮಾಡುವಾಗ, ನಮ್ಮ ಮಲೆನಾಡಿನಲ್ಲಿ ನೀಲಗಿರಿ ಮರವನ್ನು ಬಹಳ ಜಾಸ್ತಿ ಬೆಳೆಸುತ್ತಿದ್ದಾರೆ. ಮಲೆನಾಡಿನ ರೈತರಲ್ಲಿ, ಈ ನೀಲಗಿರಿ ಮರದಿಂದಾಗಿ ಜಮೀನಿನಲ್ಲಿರತಕ್ಕ ತೇವ ಇಳಿಯುತ್ತಿದೆ ಎನ್ನುವ ಭಾವನೆ ಇದೆ. ಇದು ಸುಳ್ಳೂ ಇರಬಹುದು ; ಸತ್ಯವೂ ಆಗಿರಬಹುದು. ಎಲ್ಲೆಲ್ಲಿ ನೀಲಗಿರಿ ಮರ ಇದೆ, ಆ ಸ್ಥಳಗಳಲ್ಲೆಲ್ಲಾ ತೇವ ಇರುವುದಿಲ್ಲ. ಆ ಮರಕ್ಕೆ ಭೂಮಿಯಲ್ಲಿರುವ ನೀರನ್ನು ಎಳೆಯತಕ್ಕ ಶಕ್ತಿ ಇದೆ ಎನ್ನತಕ್ಕ ಭಾವನೆ ಮಲೆನಾಡಿನ ರೈತರಲ್ಲದೆ. ನೀಲಗಿರಿ ಮರಗಳು ಎಲ್ಲಿ ಬೆಳೆದಿವೆಯೋ ಆ ಜಮೀನಿನಲ್ಲಿ ಸರಿಯಾಗಿ ನೀರೇ ಇರುವುದಿಲ್ಲ. ಇದು ನಾವು ಕಂಡುಕೊಂಡ ಅನುಭವ, ಈ ದೃಷ್ಟಿಯಿಂದ ಹಿಂದಿನ ಸರ್ಕಾರದವರು ಮಾಡಿದ ಶಾಪ ಏನು ಇದೆ, ಅದನ್ನು ನಾವು ಇವತ್ತಿನ ದಿವಸ ಅನುಭವಿಸಬೇಕಾಗಿದೆ.

ಸುಮಾರು 30 ವರ್ಷಗಳ ಕಾಲ ಹರಿಹರ ಫಾಲಿ ಫೈಬರ್ ಕಾರ್ಖಾನೆಗೆ ಕಂಟ್ರಾಕ್ಟ್ ಮಾಡಿಕೊಟ್ಟಿದ್ದೀರಿ. ಮಲೆನಾಡಿನ ಜನ ಈ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇವತ್ತು ಒಂದು ಗಾಡಿ ಕಟ್ಟಿಗೆ ತೆಗೆದು ಕೊಳ್ಳಬೇಕಾದರೆ 80 ರೂಪಾಯಿ ಕೊಡಬೇಕು. ಹರಿಹರ ಫಾಲಿಫೈಬರ್ ಕಾರ್ಖಾನೆಗೆ ಟನ್ ಗಟ್ಟಲೆ ಕಟ್ಟಿಗೆಯನ್ನು ಸಾಗಿಸುತ್ತಿದ್ದಾರೆ. ನಮ್ಮ ಸರ್ಕಾರ ಇದನ್ನು ಹೋಗಲಾಡಿಸುವುದಕ್ಕೆ ಆಗುವುದಿಲ್ಲವೇ ಎನ್ನುವ ಮಾತನ್ನು ಕೇಳುತ್ತಿದ್ದೇನೆ. ನಾವು ಯಾವ ಯಾವುದನ್ನೊ ನ್ಯಾಷನಲೈಸ್ ಮಾಡುವುದಕ್ಕೆ ಹೊರಟಿರುವಾಗ ಇದನ್ನು ಹೋಗಲಾಡಿಸುವುದಕ್ಕೆ ಆಗುವುದಿಲ್ಲವೇ ? ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಕಳಕಳಿಯಿಂದ ಕೇಳುತ್ತೇನೆ.

ಅನಂತರ ಮಲೆನಾಡು ಭಾಗದಲ್ಲಿ ಆಗುಂಬೆಘಾಟ್ ಬಹಳ ಸುಂದರವಾದ ಪ್ರದೇಶವಾಗಿತ್ತು. ಇವತ್ತಿನ ದಿವಸ ಅಥ ತಿರುಪತಿ ತಿಮ್ಮಪ್ಪನ ಬೆಟ್ಟಕ್ಕೆ ಹೋದವರ ತಲೆ ಇದ್ದ ಹಾಗೆ ಇದೆ. ಈ ಒಂದು ಕಾಡನ್ನು ಕಡಿಯತಕ್ಕವರು ಯಾರೇ ಆಗಿರಲಿ ಅವರಿಗೆ ಶಿಕ್ಷೆ ಆಗಲೇಬೇಕು. ಕೆಲವೊಂದು ಮಾತ್ರ ಬೆಳಕಿಗೆ ಬರುತ್ತವೆ, ಕೆಲವರು ಇವತ್ತು ಕೂಡ ಕಾಡನ್ನು ಕಡಿದುಕೊಂಡು ಬರುತ್ತಿದ್ದಾರೆ, ಸ್ಮಗಲಿಂಗ್ ಕೂಡ ನಡೆಯುತ್ತಿದೆ. ಯಾವುದು ಉತ್ತಮೋತ್ತಮವಾಗಿರುತ್ತದೆ. ಯಾವ ಬೆಳೆಯನ್ನು ಹಾಕಿದರೆ ಅನುಕೂಲವಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕೆಂದು ಕೇಳುತ್ತೇನೆ. ಮತ್ತೊಂದು ವಿಚಾರ ಏನು ಎಂದರೆ ಗೋಮಾಳ ಇರತಕ್ಕಂಥ ಕಡೆ ಪ್ಲಾಂಟೇಷನನ್ನು ಹಾಕಿದ್ದಾರೆ. ಹಿಂದೆ ಅರಣ್ಯ ಇಲಾಖೆಯವರು, ಗೋಮಾಳ ಜಮೀನಿನಲ್ಲಿ ಸ್ವಲ್ಪ ಪ್ಲಾಂಟೇಷನ್ ಬೆಳೆದಮೇಲೆ ತಮ್ಮ ದನಕರುಗಳನ್ನು ಬಿಡಲಿಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಪ್ಲಾಂಟೇಷನ್ ಮಾಡಿ, 10 ವರ್ಷಗಳಾಗಿದ್ದರೂ ಇವತ್ತಿಗೂ ಕೂಡ ರೈತರು ತಮ್ಮ ದನಕರುಗಳನ್ನು ಬಿಡಲಿಕ್ಕೆ ಆಗಿಲ್ಲ. ಮಲೆನಾಡಿನಲ್ಲಿರತಕ್ಕ ಗೋಮಾಳ ಜಮೀನುಗಳು ಪರಿವರ್ತನೆಯಾಗಿ, ರೈತರಿಗೆ ಸಾಗುವಳಿ ಕೊಡತಕ್ಕ ವ್ಯವಸ್ಥೆಯಾಗಿದೆ. ಆದ್ದರಿಂದ ಈ ಒಂದು ಅಡಚಣೆಯನ್ನು ಹೋಗಲಾಡಿಸಬೇಕೆಂದು ಹೇಳಿ, ನಾನು ಕೇಳಿರತಕ್ಕ ಕ್ಲಾರಿಫಿಕೇಷನ್ ಸೇರಿಸಬೇಕು. ಕಟ್ಟಿಗೆಗಾದರೂ ವಿನಾಯಿತಿ ಕೊಡಬೇಕು ಎಂದು ಹೇಳಿ ಈ ಬಿಲ್‌ಗೆ ಸಂಪೂರ್ಣ ಬೆಂಬಲ ಕೊಡುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಕಾಡುಮಂತ್ರಿಗಳು ತಂದಿರತಕ್ಕ ತಿದ್ದುಪಡಿ ಬಗ್ಗೆ ಕೆಲವು ಸೂಚನೆಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವರು ಮತ್ತು ಇವರ ಅಧಿಕಾರಿಗಳು ಶುದ್ಧಹಸ್ತರಲ್ಲ. ರಾಜ್ಯದ ಎಲ್ಲಾ ಭಾಗದಲ್ಲಿಯೂ ಕಾಡನ್ನು ಬೆಳೆ

ಸುವ ನಿರ್ಧಾರ ತೆಗೆದುಕೊಂಡು ಪ್ರಯತ್ನ ಮಾಡಿದ್ದರೆ, ನಾನು ಒಬ್ಬನೇ ಅಲ್ಲ, ದೇಶದ ಜನರು ಬೆಂಬಲ ಕೊಡುತ್ತಿದ್ದರು. ದೇಶದ ಸಂಪತ್ತು ಹೆಚ್ಚಾಗಬೇಕಾದರೆ, ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ವಿಧದಲ್ಲಿಯೂ ಕಾಡು ಬೆಳೆಯಬೇಕು. ಇವರು ಮಂತ್ರಿಯಾದ ಮೇಲೆ ಕಾಡು ನಾಶವಾಗುತ್ತಿದೆ ಎಂದು, ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಏನು ನಿರೀಕ್ಷಣೆ ಮಾಡಿದ್ದೆವೋ ಅದು ಇಂದು ನಡೆಯುತ್ತಿಲ್ಲ ; ಮನಸ್ಸೇಚ್ಛೆ, ಯದ್ವಾತದ್ವಾ ಕಾಡು ನಿರ್ನಾಮವಾಗುತ್ತಿದೆ ; ಈ ವಿಷಯವನ್ನು ರೈತನ ಮಗನಾಗಿ ನಾನು ಹೇಳ ಬೇಕಾದರೆ ಬಹಳ ದು:ಖವಾಗುತ್ತದೆ. ಹಾಸನದ ಪಶ್ಚಿಮ ಭಾಗದ ಘಾಟ್‌ಗಳಲ್ಲ ಹಸಿರು ಕಾಣುತ್ತಿತ್ತು. ಇವತ್ತು ಒಂದು ಕಡೆಯಿಂದ ನಿರ್ನಾಮ ವಾಗಿದೆ. ಇವತ್ತು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ನೀವು ನಿಮ್ಮ ಅಧಿಕಾರಿಗಳು ಕಾಡಿನ ರಕ್ಷಣೆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಅನೇಕ ಸಂದರ್ಭಗಳಲ್ಲಿ ಕಳ್ಳರು ಮೋ ಗಾರರು, ವ್ಯಾಪಾರ ಮಾಡುವವರೆಲ್ಲಾ ಕಾಡಿನಲ್ಲಿ ಕ್ಯಾಂಪ್ ಮಾಡಿ ಬೆಲೆ ಬಾಳತಕ್ಕ ಮರ ಗಳನ್ನು ಯಥೇಚ್ಛವಾಗಿ ಕಡಿದು ಹೊರಗಡೆ ಸಾಗಿಸಿದ್ದಾರೆ. ನಿಮ್ಮ ಇಲಾಖೆಯಲ್ಲಿರುವವರೆಲ್ಲರೂ ಶುದ್ಧ ಹಸ್ತರಲ್ಲವೆಂದು ಹೇಳುವುದಿಲ್ಲ, ಕೆಲವರು ಒಳ್ಳೆಯವರು ಇದ್ದಾರೆ. ಮಂತ್ರಿಗಳ ಅವಾಂತರ ದಲ್ಲಿ ಯೋಗ್ಯಸ್ಥರು ಉಳಿಯುವುದೇ ಕಷ್ಟವಾಗಿದೆ. ಈ ಮಾತನ್ನು ನಿಖರವಾಗಿ ಮಂತ್ರಿಗಳ ಗಮ ನಕ್ಕೆ ತರುತ್ತೇನೆ. ಇವರನ್ನು ಎಷ್ಟರಮಟ್ಟಿಗೆ ಕಾಡು ಹಾಳಾಗುತ್ತಿದೆ ಎಂದು ಕೇಳಿದರೆ ಬೆಂಗ ಳೂರು ಕಡೆಗೆ ಕೈತೋರಿಸುತ್ತಾರೆ. ಈ ಕಾಲದಲ್ಲಿ ಯೋಗ್ಯಸ್ಥರಿಗೆ, ಪುರಸ್ಕಾರವೇ ಇಲ್ಲ. ನಾವು ನಾಲ್ಕು ದಿವಸ ಹೊಂದಿಕೊಂಡು ಹೋಗಬೇಕು, ನಮಗೆ ಹೆಂಗಸರು ಮಕ್ಕಳು ಇದ್ದಾರೆ ಎಂದು ಹೇಳುತ್ತಾರೆ. ತಮ್ಮ ಕಾಲದಲ್ಲಿ ಕಾಡು ಎಷ್ಟರಮಟ್ಟಿಗೆ ನಾಶವಾಗುತ್ತಿದೆ. ಇದು ಯಥೇಚ್ಛ ವಾಗಿ ನಡೆಯುತ್ತಿದೆ. ತಾವು ಇದನ್ನು ಕಂಟ್ರೋಲ್ ಮಾಡದೆ ಹೋದರೆ............

ಶ್ರೀ ಸಿ. ಎನ್. ಪಾಟೀಲ್.—ಸಾಮಾನ್ಯವಾಗಿ ಹೇಳುತ್ತಿದ್ದೀರೋ ಹೇಗೆ ನಿರ್ದಿಷ್ಟವಾಗಿ ನಡೆದಿರುವ ನಿರ್ದಶನಗಳು ಯಾವುದಾದರೂ ಇದ್ದರೆ ಕೊಡುತ್ತೀರಾ?

ಶ್ರೀ ಕೆ. ಹೆಚ್. ಹನುಮೇಗೌಡ.—ಕಾಡು 2–3 ವಿಧದಲ್ಲಿ ಹಾಳಾಗುತ್ತಿದೆ. ಕಾಡಿನೊಳಕ್ಕೆ ರಹದಾರಿ ಇಲ್ಲದೇ ಅಧಿಕಾರಿಗಳ ಕಣ್ಣಿಗೆ ಮಣ್ಣೆರಚಿ ಮರಗಳನ್ನು ಕಡಿಯುವುದು. ಅಧಿಕಾರಿ ಗಳೊಂದಿಗೆ ಶಾಮೀಲಾಗಿ ಮರಗಳನ್ನು ಕಡಿಯುವುದು. ಶಾಸಕರು ಹೋಗಿ ಕೇಳಿದರೆ, ಬೆಂಗಳೂರು ಕಡೆ ಕೈ ತೋರಿಸುವುದು, ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳನ್ನು ಕಳಕಳಿಯಿಂದ ಕೇಳುತ್ತೇನೆ, ಈ ರೀತಿ ಏನು ಅನ್ಯಾಯ ನಡೆಯುತ್ತಿದೆ ಇದನ್ನು ತಪ್ಪಿಸುವುದಕ್ಕೆ ಶಕ್ತಿ ಇದ್ದರೆ ತಪ್ಪಿಸಿ. ಇನ್ನೊಂದು ವಿಚಾರ ತಾವು ಹೊರಗಡೆ ಟೂರ್ ಹೋಗುತ್ತೀರಲ್ಲಾ, ಆಗ ಆರಣ್ಯ ಅಭಿವೃದ್ಧಿ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕು. ಅಲ್ಲಿ ಹೋದಮೇಲೆ ಬೇರೆ ಏನೇನೋ ಮಾತ ನಾಡುತ್ತೀರಿ. ನಿಮ್ಮ ಇಲಾಖೆಯ ಅಧಿಕಾರಿಗಳನ್ನು ತರಾಟಿಗೆ ತೆಗೆದುಕೊಳ್ಳಿ, ಸರ್‌ಪ್ರೈಸ್ ವಿಸಿಟ್ ಕೊಡಿ ಎಂದು ನನ್ನ ಕಳಕಳಿಯ ಮನವಿ. ಪ್ರತಿ ವರ್ಷ ಕಾಡು ಕಡಿಮೆಯಾಗಿ, ಮಳೆ ಕೂಡ ಕಡಿಮೆಯಾಗಿದೆ. ಹಳ್ಳಿಗಳಲ್ಲಿ ರೈತರು ಬಿತ್ತನೆ ಮಾಡಿದ ಮೇಲೆ ಮೇಲಕ್ಕೆ ನೋಡುತ್ತಾರೆ, ಮಳೆ ಕಡಿಮೆ ಆಗುವುದಕ್ಕೆ ಕಾಡು ಹೋಗುತ್ತಾ ಇರುವುದೇ ಕಾರಣ. ನ್ಯಾಷನಲ್ ಲೆವಲಿಗೆ 7–8 ಪರ್ಸೆಂಟ್ ಕಡಿಮೆ ಇದೆ ಅದನ್ನು ಹೆಚ್ಚುಮಾಡಿ. ಇದರ ಬಗ್ಗೆ ಯಾರೂ ಅಡಚಣೆ ತರುತ್ತಿಲ್ಲ. ಟ್ಯಾಕ್ಸ್ ವಿಧಿಸಿರುವುದರಿಂದ ವಿಧಿಯಿಲ್ಲದೆ ವಿರೋಧಿಸಬೇಕಾಗಿದೆ. ಕಾಡಿನ ಮರಗಳನ್ನು ಕಡಿಯ ಬೇಕಾದರೆ, ಒಂದು ಪಿರಿಯಡ್ ಇರುತ್ತದೆ, ಆ ಪಿರಿಯಡ್‌ಗೆ ಮೆಚ್ಯೂರ್ ಆದ ಮರಗಳನ್ನು ಮಾತ್ರ ಕಡಿಯಲಿಕ್ಕೆ ಅವಕಾಶ ಕೊಡಿ, ಹಾಗಾದರೆ ಕಾಡು ಉಳಿಯುತ್ತದೆ. ಯಾರಿಗೂ ಪರ್ಮಿಷನ್ ಕೊಡುತ್ತೀರೋ? ಯಾರು ಹೋಗ ತ್ತಾರೋ? ದಿವಸ 25–30 ಲಾರಿಗಳಲ್ಲಿ ಕಟ್ಟಿಗೆ ಹೇರಿಕೊಂಡು ಬರುತ್ತಾರೆ. ಒಳ್ಳೆಯ ಬೆಲೆ ಬಾಳತಕ್ಕಂಥ ಮರಮುಟ್ಟುಗಳು, ಒಂದು ಕಡೆಯಿಂದ ನಿರ್ನಾಮ ವಾಗುತ್ತದೆ. ಇದರ ಬಗ್ಗೆ ಸ್ಟ್ರಿಕ್ಟ್ ಆಗಿ ಆದೇಶ ಕೊಡಿ. ಈ ವರ್ಷದ ಮಾತುಬೇಡ, ಈ ವರ್ಷದ ಅಶೋತ್ತರ ಬೇಡ. ಒಂದು ಎಕರೆಯಲ್ಲಿ ಎಷ್ಟು ಮರಗಳನ್ನು ಪ್ಲಾಂಟ್ ಮಾಡುವುದಕ್ಕೆ ಆಗುತ್ತದೆ? ಎಷ್ಟು ಖರ್ಚಾಗುತ್ತದೆ? ಸುಳ್ಳು ಲೆಕ್ಕ ಕೊಟ್ಟಿದ್ದರೆ ಏನು ಪ್ರಯೋಜನ ಇಲ್ಲ.

ಮತ್ತೆ ಇದನ್ನು ಶ್ರದ್ಧೆಯಿಂದ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕಾಡನ್ನು ಬೆಳಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಲೆನಾಡು ಬಿಟ್ಟು ಪೂರ್ವ ಭಾಗದಲ್ಲಿ ಅಂದರೆ ಮೈದಾನ ಪ್ರದೇಶದಲ್ಲಿ ಬೇಕಾದಷ್ಟು ಗೋಮಾಳ ಇದೆ. ಅದನ್ನು ಉಪಯೋಗಿಸಿಕೊಂಡು ಮರಗಳನ್ನು ಬೆಳೆಸುವುದಾದರೆ ಯಾರೂ ಬೇಡ ಅನ್ನುವುದಿಲ್ಲ. ನಮ್ಮ ಏರಿಯಾದಲ್ಲಿ ಅಂಥಾದ್ದು ಒಂದು ಸಾವಿರ ಎಕರೆ ಕೊಡಿಸುತ್ತೇನೆ. ಅಲ್ಲಿ ಹೇಗಾದರೂ ಮಳೆ ಬರುವುದಿಲ್ಲ, ನಿಮ್ಮ ದನಕರುಗಳಿಗೆ ಮೇಯಿಸುವುದಕ್ಕಾದರೂ ಒಂದಷ್ಟು ಹುಲ್ಲು ಬೆಳೆಯಲಿ ಆ ರೈತರಿಗೆ ಹೇಳಿ ಬೇಕಾದರೆ ಕೊಡಿಸುತ್ತೇನೆ. ಅಲ್ಲಿ ಹೋಗಿ ನೀಲಗಿರಿ ಸಸಿ ನೆಟ್ಟರೂ ಕೂಡ ಅವರು ಹೇಳುತ್ತಾರೆ ಅದರ ಎಲೆ ಎಲ್ಲಿ ಬೀಳುತ್ತದೋ ಆ ಜಾಗದಲ್ಲಿ ಹುಲ್ಲೂ ಕೂಡ ಹುಟ್ಟುವುದಿಲ್ಲ ಎಂದು ಹೇಳುತ್ತಾರೆ ಅಲ್ಲದೆ ಅಲ್ಲಿ ಏನು ಬೆಳೆದರೂ ಕೂಡ ಅವೆಲ್ಲಾ ನಿರ್ನಾಮವಾಗಿ ಹೋಗಿಬಿಡುತ್ತದೆ ಅಂತ ಹೇಳುತ್ತಾರೆ. ಶ್ರೀಮಾನ್ ಬಂಗಾರಪ್ಪನವರು ಹೇಳಿದರೂ ನೀರಿನ ಅಂಶ ಆ ಭೂಮಿಯಲ್ಲಿ ಏನು ಇರುತ್ತದೋ ಅದೂ ಕೂಡ ಆ ಭೂಮಿಯಲ್ಲಿ ಒಣಗಿ ಹೋಗಿಬಿಡುತ್ತದೆ ಎಂದು ಗೋಮಾಳ ಇರತಕ್ಕಂಥಾ ಪ್ರದೇಶನಲ್ಲಿ ಈ ಸಸಿಯನ್ನು ನೆಟ್ಟುಬಿಟ್ಟರೆ ಹುಲ್ಲೂ ಹುಟ್ಟುವುದಿಲ್ಲ, ನೀರಿನ ಅಂಶವೂ ಒಣಗಿ ಹೋಗುತ್ತದೆ. ಹೀಗಿರುವಾಗ ನೀವು ಮೈದಾನ ಪ್ರದೇಶದಲ್ಲಿ ಕಾಡು ಬೆಳಸಬೇಕು ಅಂದರೆ ಹೇಗಾಗುತ್ತದೆ. ಅದು ಬಿಟ್ಟು ಇನ್ನೇನಾದರೂ ಬೇರೆ ಒಳ್ಳೇ ಜಾತಿಯ ಮರಗಳನ್ನು ಆ ಪ್ರದೇಶದಲ್ಲಿ ಬೆಳಸಿದರೆ ಮರಗಳೂ ಕೂಡ ಚನ್ನಾಗಿ ಬೆಳೆಯುತ್ತದೆ ಅಲ್ಲದೆ ಆ ಭೂಮಿಯೂ ಕೂಡ ಫಲವತ್ತಾಗುತ್ತದೆ. ಆದುದರಿಂದ ಬೇರೆ ಮರಗಳನ್ನು ಆ ಪ್ರದೇಶದಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಈಗ್ಗೆ 4–5 ವರ್ಷಗಳ ಹಿಂದೆ ಆ ಪ್ರದೇಶದಲ್ಲಿ ಕುಡಿಯುವುದಕ್ಕೆ ನೀರೂ ಇಲ್ಲದೆ ಜನರು ಬೇಕಾದಷ್ಟು ತೊಂದರೆ ಪಟ್ಟರು. ಈ ದೃಷ್ಟಿಯಿಂದ ಭೂಮಿ ಫಲವತ್ತಾಗುವಂಥಾ ಒಳ್ಳೇ ಜಾತಿಯ ಮರಗಳನ್ನು ಬೆಳಸಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಸ್ವಾಮಿ, ಈಗ್ಗೆ 8–10 ವರ್ಷದ ಹಿಂದೆ ಪೇಪರ್‌ನಲ್ಲಿ ಒಂದು ವಿಷಯ ಓದಿದ್ದೆ. ಅದು ಯಾವ ವಿಷಯ ಎಂದರೆ ಮಲೆನಾಡಿನಿಂದ ಬೆಂಗಳೂರಿಗೆ ಏನು ಸೌದೆ ಬರುತ್ತದೋ ಅದನ್ನು ತಪ್ಪಿಸಬೇಕು. ಮತ್ತು ಅದಕ್ಕಾಗಿ ಬೆಂಗಳೂರಿನ ಸುತ್ತ ಮುತ್ತ ಅನೇಕ ಜಾತಿಯ ಮರಗಳನ್ನು ಬೆಳೆಸಿ ಇದರಿಂದ ಈ ಬೆಂಗಳೂರು ಪಟ್ಟಣಕ್ಕೆ ಸೌದೆಯನ್ನು ಸರಬರಾಜು ಮಾಡುವಂಥಾ ಒಂದು ವ್ಯವಸ್ಥೆ ಮಾಡುತ್ತೇವೆ ಅಂತ ಕೇಳಿದ್ದೆ. ಈಗ ತಾವು ಏನು ಮಾಡುತ್ತಿದ್ದೀರಿ ಎಂದರೆ ದಟ್ಟವಾದ ಪ್ರದೇಶಗಳಿಂದ ಸೌದೆಯನ್ನು ಕಡಿದು ಅಲ್ಲಿಂದ ಬೆಂಗಳೂರು ಪಟ್ಟಣಕ್ಕೆ ಸೌದೆಯನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಿಕೊಂಡಿದ್ದೀರಿ. ಇದಕ್ಕೆ ಅವಕಾಶ ಕೊಡಕೂಡದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಚಾರ, ಏನೆಂದರೆ ಕಾಡಿನಲ್ಲಿ ಯಾರು ಮರ ಕಡಿಯುತ್ತಾನೋ ಅವನು ಏನಾದರೂ ಅಪರಾಧ ಮಾಡಿದ್ದರೆ ಅವನ ಮೇಲೆ ಕೋರ್ಟಿಗೆ ಕೇಸು ಹಾಕುತ್ತಾರೆ. ಈ ಕಾನೂನು ತಮಗೆ ಗೊತ್ತೇ ಇದೆ. ಇದಕ್ಕೆ ಒಂದು ಗಾದೆ ಇದೆ ನೂರು ಅಪರಾದಿಗಳನ್ನು ಬಿಟ್ಟರೂ ಕೂಡ ಒಬ್ಬ ನಿರಪರಾಧಿಯನ್ನು ಬಿಡುವುದಿಲ್ಲ, ಅವನಿಗೆ ಶಿಕ್ಷೆ ಆಗಲೇ ಆಗುತ್ತದೆ. ಯಾರಾದರೂ ಸ್ಪೃಹರಾದಂಥ ಅಧಿಕಾರಿಗಳು ಆ ಅಪರಾಧಿಯ ಮೇಲೆ ಏನಾದರೂ ಕೇಸು ಹಾಕಿದರೆ ಪೋಲಿಸರು ಅವರ ಜೊತೆ ಸೇರಿ ಅವರ ಬಿಟ್ಟು ಅವನನ್ನು ಏನಾದರೂ ಮಾಡಿ ಬಿಡಿಸಿಬಿಡುತ್ತಾರೆ. ಸರಿಯಾದ ಶಿಕ್ಷೆ ಅವನಿಗೆ ಆಗುವುದಿಲ್ಲ. ಯಾವನಾದರೂ ನಿರಪರಾಧಿಯಾಗಿದ್ದರೆ ಆತನಿಗೆ ಶಿಕ್ಷೆ ಆಗುತ್ತದೆ. ಇದಕ್ಕೆ ಬೇರೆ ಒಂದು ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ. ಯಾರು ನಿಜವಾದ ಅಪರಾಧ ಮಾಡುತ್ತಾರೋ ಯಾರು ಕೊಲೆ ಮಾಡುತ್ತಾರೋ ಯಾರು ದರೋಡೆ ಮಾಡುತ್ತಾರೋ ಅಂಥಾವರಿಗೆ ಯಾವ ರೀತಿ ಶಿಕ್ಷೆ ಕೊಡುತ್ತೀರೋ ಅದೇ ರೀತಿಯಾಗಿ ಈ ಮರ ಕಡಿದವರಿಗೂ ಕೂಡ ಶಿಕ್ಷೆಯಾಗಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರೇ, ಕೊನೆಯದಾಗಿ ಇನ್ನೊಂದು ವಿಚಾರ ಏನೆಂದರೆ ಮೈದಾನ ಪ್ರದೇಶದಲ್ಲೂ ಕೂಡ ರೈತರು ತಮ್ಮ ಹೊಲ ಗದ್ದೆ ಹತ್ತಿರ ಮರಗಳನ್ನು ಏನು ಬೆಳೆಸುತ್ತಾರೆ; ಆ ಮರಗಳನ್ನು ಕಟ್ಟಿಗೆಗೆ ಮತ್ತು ಇತರ ಉಪಯೋಗಕ್ಕೆ ಕಡಿದರೆ ಅದಕ್ಕೂ ಕೂಡ ಅವರು 20-30 ರೂಪಾಯಿ ಕಟ್ಟಬೇಕಾಗುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ಆ ರೈತರು ತಮ್ಮ ಸ್ವಂತ ಉಪಯೋಗಕ್ಕಾಗಿ ಮರಮುಟ್ಟುಗಳನ್ನು ಮಾಡಿಸಿಕೊಳ್ಳಲು ಆ ಮರ ಕಡಿದುಕೊಳ್ಳಬೇಕಾದರೆ ಅವರು ದುಡ್ಡು ಕೊಡಬೇಕಾಗಿರುವುದರಿಂದ ಈ ಬಗ್ಗೆ ಏನಾದರೂ ಒಂದು ಕಾನೂನು ಮಾಡಿ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಮಾನ್ಯ ಸಚಿವರಿಗೆ ನಾನು ಹೇಳುವುದು, ಆಗಲೇ ಹೇಳಿದ ಹಾಗೆ ದೇಶದ ಹಿತದೃಷ್ಟಿಯಿಂದ, ಕಾಡುಗಳನ್ನು ಬೆಳಸುವ ದೃಷ್ಟಿಯಿಂದ, ದೇಶಕ್ಕೆ ಒಳ್ಳೆಯ ಹೆಸರನ್ನು ತರುವ ದೃಷ್ಟಿಯಿಂದ, ದೇಶಕ್ಕೆ ಮಾರ್ಗದರ್ಶನ ಮಾಡುವ ಒಂದು ಚೈತನ್ಯ ಮಾನ್ಯ ಸಚಿವರಿಗೆ ಬರಲಿ ಮತ್ತು ಅವರು ದೇಶಕ್ಕೆ ಒಳ್ಳೆಯ ಕೆಲಸ ಮಾಡಬೇಕು ಅಂತ ಹೇಳುತ್ತೇನೆ ಅವರಿಗೆ ಒಂದು ವೇಳೆ ಒಳ್ಳೆಯ ಕೆಲಸಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ಈ ಇಲಾಖೆಯನ್ನು ಇನ್ನಾವುದಾದರೂ ಇಲಾಖೆಗೆ ವಹಿಸಿಕೊಡಲಿ ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪಗೌಡ. (ಶೃಂಗೇರಿ)—ಮಾನ್ಯ ಅಧ್ಯಕ್ಷರೇ, ಈ ಅರಣ್ಯ ಉತ್ಪತ್ತಿಗೆ ಟ್ಯಾಕ್ಸ್ ಲೆವಿ ಮಾಡುವುದಕ್ಕೆ ಮಾನ್ಯ ಸಚಿವರು ಏನೊಂದು ಮಸೂದೆ ತಂದಿದ್ದಾರೋ ಅದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಮಾತ್ರ ಅರಣ್ಯಶಾಖಾ ಸಚಿವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಈಗ ಒಂದು ವಿಷಯದಲ್ಲಿ ಶ್ರೀಮಾನ್ ಚಂದ್ರಶೇಖರ್‌ನವರು ಮಾತನಾಡಿದ್ದಾರೆ. ಈ ಕಟ್ಟಿಗೆ ಏನು ಇದೆ ಇದು ಹಾಗೆಯೇ ಸಿಕ್ಕಬೇಕು ಅನ್ನುವ ವಿಚಾರದಲ್ಲಿ ಹಿಂದೆ ಸಾಕಷ್ಟು ಚರ್ಚೆಯಾಗಿದೆ. ಶ್ರೀಮಾನ್ ಕೆ. ಎಚ್. ಪಾಟೀಲರು ಅರಣ್ಯ ಮಂತ್ರಿಗಳಾಗಿದ್ದಾಗ ಈ ಬಗ್ಗೆ ಚರ್ಚೆಯಾಗಿ ಮಲೆನಾಡು ಪ್ರಾಂತ್ಯದಲ್ಲಿ ಏನು ಕಟ್ಟಿಗೆ ಸಿಕ್ಕುತ್ತದೋ ಅದನ್ನು ಆ ಭಾಗದವರೇ ತೆಗೆದುಕೊಂಡು ಉಪಯೋಗಿಸಿಕೊಳ್ಳುವಂಥಾದ್ದಕ್ಕೆ ಸ್ವಲ್ಪ ರಿಯಾಯಿತಿ ಬೇಕು ಏನೂ ಟ್ಯಾಕ್ಸ್ ಹಾಕಬಾರದು ಅಂತ ಆಯಿತು. ಆದರೆ ಅದಕ್ಕೆ ಕೆಲವಾಟ್ಟಿಗೆ ಲೈಸೆನ್ಸ್ ಫೀ ವಸೂಲ್ಮಾಡುತ್ತಿದ್ದರು. ಈಗ ಪುನ ಅದರ ಮೇಲೆ ಟ್ಯಾಕ್ಸ್ ಹಾಕಬೇಕೆಂಬುದು ಸರಿಯಲ್ಲ. ಈಗ ಅಗತ್ಯ ವಸ್ತುಗಳ ಮೇಲೆ ಸಮಾಜವಾದದ ಒಂದು ನೀತಿ ಏನು ಇದೆಯೋ ಅದರ ಬಗ್ಗೆ ಇದು ವಿರೋಧ ಆಗುತ್ತೆ ಇದನ್ನು ಕನ್ಸಿಡರ್ ಮಾಡುವುದು ಒಳ್ಳೆಯದು ಎಂದು ಹೇಳಿ ಇದರ ಬಗ್ಗೆ ಟ್ಯಾಕ್ಸ್ ಹಾಕಬಾರದೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಪ್ರಾಮುಖ್ಯವಾದ ಪ್ರಶ್ನೆ ಏನೆಂದರೆ ಅರಣ್ಯವನ್ನು ಚೆನ್ನಾಗಿ ಬೆಳೆಸಬೇಕು ಅಂಥ ಇದೆ. ಎವರ್‌ಗ್ರೀನ್ ಫಾರೆಸ್ಟ್ ಅಂತ ಈಗ ಗಂಗಾಮೂಲ ವ್ಯಾಲಿನಲ್ಲಿ ಮತ್ತು ಭಗವತಿ ವ್ಯಾಲಿನಲ್ಲಿ ಇದು ಇದೆ. ಮಾನ್ಯ ಅರಣ್ಯಶಾಖಾ ಸಚಿವರು ಆ ಕಡೆ ಬಂದಿಲ್ಲ. ಯಾರು ಏನು ಖರ್ಚು ಮಾಡದೇ ಇದ್ದರೂ ಕೂಡ ಆ ಕಾಡು ಹಾಗೆಯೇ ಬೆಳೆದಿದೆ. ಆ ಫಾರೆಸ್ಟಿನಲ್ಲಿ ಕೆಲವು ಪ್ರದೇಶ ಕಡಿದು ಅಲ್ಲಿಗೆ ಬೆಂಕಿ ಬಿದ್ದು ಎಷ್ಟೋ ಎಕರೆ ಸುಟ್ಟುಹೋಗಿದೆ. ಸದ್ಯಕ್ಕೆ ಆ ಜಾಗದಲ್ಲಿ ಕಾಡು ಬೆಳೆಯುದೇ ಇರುವ ರೀತಿಯಲ್ಲಿ ಇದೆ. ಇದನ್ನು ಪರಿಶೀಲನೆ ಮಾಡಿ ಅದನ್ನು ಚನ್ನಾಗಿ ಬೆಳೆಸಬೇಕು ಎಂದು ಹೇಳುತ್ತೇನೆ.

ಇನ್ನು ಕಾಡು ಎಲ್ಲಿ ಜಾಸ್ತಿಯಾಗಿ ಬೆಳೆದಿದೆಯೋ ಅಲ್ಲಿಕಾಡನ್ನು ಕಡಿಯುವುದಕ್ಕೆ ಹೋದರೆ ಎಲ್ಲಿ ಮಾಮೂಲಾಗಿ ನೀರು ಬರುತ್ತಿರುವುದು ಆ ಜಾಗದಲ್ಲಿ ನೀರು ಬರುವುದೂ ಕೂಡ ನಿಂತು ಹೋಗುತ್ತದೆ. ಅಲ್ಲದೆ ಈ ನೀಲಗಿರಿ ಸಸಿ ನೆಡುವುದರಿಂದ ಮುಂದೆ ಆ ಜಾಗದಲ್ಲಿ ಯಾವ ಬೆಳೆಯೂ ಆಗುವುದಿಲ್ಲ ಮತ್ತು ಸರಿಯಾಗಿ ನೀರೂ ಕೂಡ ಬರುವುದಿಲ್ಲ ಅಂತ ಹಿಂದೆ ಒಂದು ತೀರ್ಮಾನಕ್ಕೆ ಬಂದು ಮರದ ಆ ಸಸಿಗಳನ್ನು ಹಾಕಬಾರದು ಅನ್ನುವ ಒಂದು ತೀರ್ಮಾನಕ್ಕೂ ಕೂಡ ಹಿಂದಿನ ಅರಣ್ಯ ಮಂತ್ರಿಗಳು ಒಂದು ಸಂದರ್ಭದಲ್ಲಿ ಒಪ್ಪಿಕೊಂಡಿದ್ದರು. ನಮ್ಮ ಮಲೆನಾಡಿನಲ್ಲಿ ಕೆಲವು ಪ್ರದೇಶದಲ್ಲಿ ಈ ರೀತಿಯಾದಂಥ ಒಂದು ತೊಂದರೆಯಾಗಿ ಅಲ್ಲಿ ಕೆಲವು ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆ. ಈಗ ಮತ್ತೆ ನೋಡಿದರೆ ಈ ಸಸಿಗಳನ್ನು ಇನ್ನು ಸ್ವಲ್ಪ ಹೆಚ್ಚು ಭಾಗ ಹಾಕಬೇಕು ಅಂತ ಕಾಣುತ್ತದೆ. ಆದುದರಿಂದ ನಾನು ಹೇಳುವುದು ಈ ಸಸಿಗಳನ್ನು ಹಾಕುವುದು ನಿಲ್ಲಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನೊಂದು ಪ್ರಾಮುಖ್ಯವಾದ ಪ್ರಶ್ನೆ ಏನೆಂದರೆ ನಮ್ಮ ಮಲೆನಾಡಿನಲ್ಲಿ 170ರಿಂದ 220 ಇಂಚು ಮಳೆ ಬೀಳುತ್ತದೆ. ಈ ಒಂದು ದೃಷ್ಟಿಯಿಂದ ತಾವು ಇದನ್ನು ಯೋಚನೆ ಮಾಡಬೇಕಾದ್ದು ಅವಶ್ಯಕ. ಅಲ್ಲದೆ ಈ ಒಂದು ತಿದ್ದುಪಡಿಯಲ್ಲಿ ಈ ಒಂದು ಸಲಹೆಯನ್ನೂ ಕೂಡ ಸೇರಿಸತಕ್ಕಂಥ ಅವಕಾಶ ಮಾಡಿದ್ದರೆ ಚೆನ್ನಾಗಿತ್ತು ಎಂದು ನನ್ನ ಅಭಿಪ್ರಾಯ.

3-00 P.M.

ಅದು ಏನೆಂದರೆ, ಹಿಂದೆ ಕಾರಣಾಂತರದಿಂದ ಈ ಅರಣ್ಯ ಪ್ರದೇಶದಲ್ಲಿ ಒಂದು ಗುಂಟೆಯನ್ನು ಯಾರಿಗಾದರೂ ಕೊಡಬೇಕಾದರೆ ಅದು ಅಸೆಂಬ್ಲಿ ಮುಂದೆ ಬಂದು ನಂತರ ಬಿಡುಗಡೆಯಾಗಬೇಕೆಂದು ಒಂದು ಕಾನೂನನ್ನು ಮಾಡಲಾಯಿತು, ಅಂದರೆ ನಾನು ಅರಣ್ಯ ಪ್ರದೇಶವನ್ನು ವ್ಯವಸಾಯಕ್ಕೆ ಬಿಟ್ಟು ಕೊಡಬೇಕೆಂದು ಹೇಳುತ್ತಿಲ್ಲ, ಆದರೆ ಕಳೆದ 30-40 ವರ್ಷಗಳಿಂದ ಈ ಗಿರಿಜನರು ಏನಿದ್ದಾರೆ, ಅವರುಗಳು ಕಾಡಿನಲ್ಲಿಯೇ ಹುಟ್ಟಿ, ಅಲ್ಲಿಯೇ ವ್ಯವಸಾಯ ಮಾಡಿಕೊಂಡು ಏನು ಜೀವನ ಮಾಡುತ್ತಿದ್ದಾರೆ, ಅವರನ್ನು ಅಲ್ಲಿಂದ ಹೊರಗಡೆಹೋಗಬೇಕೆಂದು ಹೇಳುತ್ತಿದ್ದಾರೆ, ಅವರುಗಳು ಅಲ್ಲಿಯೇ ಮನೆ ಕಟ್ಟಿಕೊಂಡು, ನೀರಾವರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ, ಇಂತಹ ಜನರನ್ನು ಅಲ್ಲಿಂದ ಹೊರಹೋಗಬೇಕು, ರೆವಿನ್ಯೂ ಲ್ಯಾಂಡ್ ಕೊಡುತ್ತೇವೆ, ಅಲ್ಲಿ ವ್ಯವಸಾಯ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಆದರೆ ಆ ರೆವಿನ್ಯೂ ಲ್ಯಾಂಡ್‌ನಲ್ಲಿ ನೀರಾವರಿ ಸೌಕರ್ಯವಿರುವುದಿಲ್ಲ. ಮತ್ತು ಅದು ಸಾಗುವಳಿಗೆ ಯೋಗ್ಯವಾಗಿಲ್ಲ; ಅಂತಹ ಜಮೀನನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ, ಯಾರಾದರೂ ಜಮೀನು ಇದ್ದವರು ಕಾಡಿನ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದರೆ ಅಂತಹವರನ್ನು ಅಲ್ಲಿಂದ ಒದ್ದು ಓಡಿಸಿ. ಆದರೆ ಯಾರು ಜಮೀನು ಇಲ್ಲದ ಕಾಡಿನಲ್ಲಿ ವ್ಯವಸಾಯ 10-12 ವರ್ಷಕ್ಕೆ ಮೇಲ್ಪಟ್ಟು ಮಾಡಿಕೊಂಡಿದ್ದಾರೋ ಅಂತಹವರ ಬಗ್ಗೆ ಸ್ವಲ್ಪ ಕನ್ಸಿಡರ್ ಮಾಡಬೇಕೆಂದು ಹೇಳುತ್ತಿದ್ದೇನೆ. ಈಗ ಅವರು ಬೆಳೆದಿರುವ ಬೆಳೆಗೆ ಬೆಂಕಿ ಇಟ್ಟು ಸುಟ್ಟು ಹಾಕಿ ಅಲ್ಲಿಂದ ಅವರನ್ನು ಓಡಿಸುತ್ತಿದ್ದಾರೆ, ಇದು ಸರಿಯಲ್ಲ, ಇದನ್ನು ಸರ್ಕಾರದ ಗಮನಕ್ಕೆ ಈಗಾಗಲೇ ತರಲಾಗಿದೆ, ಈಗ ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕು, ಸೈಟ್ ಇಲ್ಲದವರಿಗೆ ಸೈಟ್ ಕೊಡಬೇಕೆಂದು ಹೇಳುತ್ತಿರುವಾಗ, ಅರಣ್ಯ ಪ್ರದೇಶದಲ್ಲಿ ಬಹಳ ಹಿಂದಿನಿಂದ ಯಾರು ಸಾಗುವಳಿ ಮಾಡಿಕೊಂಡು ಬಂದಿದ್ದಾರೋ ಅಂತಹವರನ್ನು ಅಲ್ಲಿಂದ ಓಡಿಸುತ್ತಿರುವುದು ಸರಿಯಲ್ಲವೆಂದು ಹೇಳುತ್ತೇನೆ. ನಮ್ಮ ಕಡೆ ಇಂತಹ ಸಾವಿರಾರು ಕುಟುಂಬಗಳಿವೆ, ಅವರುಗಳು ನನಗೆ ಕೊಟ್ಟ ಅರ್ಜಿಗಳನ್ನು ಮಾನ್ಯ ಅರಣ್ಯ ಇಲಾಖಾ ಸಚಿವರ ಕಡೆಗೆ ಕಳುಹಿಸಿ ಕೊಟ್ಟಿದ್ದೇನೆ. ಈ ಜನರು ಕಷ್ಟ ಹೇಳಿಕೊಂಡು ನಾನು ಊರಿನಲ್ಲಿ ಓಡಾಡುವುದೇ ಕಷ್ಟವಾಗಿದೆ. ಅಂತವರ ಕಷ್ಟವನ್ನು ಮಾನ್ಯ ಸಚಿವರು ಹೋಗಲಾಡಿಸಬೇಕು, ಅವರು ಸಾಗುವಳಿ ಮಾಡುತ್ತಿರುವ ಜಮೀನನ್ನು ಅವರಿಗೇ ಬಿಟ್ಟುಕೊಡುವಂತಹ ರೀತಿಯಲ್ಲಿ ಒಂದು ತಿದ್ದುಪಡಿಯನ್ನು ತರುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಈಗ ಸ್ವಾಭಾವಿಕವಾಗಿ ಶ್ರೀಮಂತ ವರ್ಗದವರು ಏನಾದರೂ ಅರಣ್ಯ ಪ್ರದೇಶವನ್ನು ಸ್ವಾಧೀನ ಮಾಡಿಕೊಂಡಿದ್ದರೆ ಅಂತಹವರನ್ನು ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚು ಮಾತನಾಡಿಸುವುದಿಲ್ಲ; ಉದಾಹರಣೆ ಹೇಳುವುದಾದರೆ ಎನ್.ಆರ್. ಪುರ ತಾಲ್ಲೂಕ್ ನನ್ನ ಏರಿಯಾದಲ್ಲಿ ಮಾಕೋಡು ಎಂಬ ಊರಿದೆ. ಆ ಊರಿಗೆ ಸೇರಿದಂತೆ ಇರುವ 200-300 ಎಕರೆ ಕಾಡಿನಲ್ಲಿದ್ದ ಮರಗಳನ್ನು ಕಡಿದು ಒಬ್ಬರು ಹೊರಗಡೆ ಸಾಗಿಸಿದ್ದಾರೆ. ಅಲ್ಲಿಯ ಡಿ.ಎಫ್.ಓ. ಅವರು ಹೇಳುವ ಪ್ರಕಾರ ಅದರ ಬೆಲೆ ಒಂದೂವರೆ ಲಕ್ಷ ರೂಪಾಯಿಗಳಾಗುತ್ತದೆ. ಇಷ್ಟೊಂದು ಬೆಲೆಬಾಳುವ ನಾಟಾಗಳನ್ನು ಅಲ್ಲಿಂದ ಸಾಗಿಸಲು ಯಾರ ಯಾರ ಕಾಲದಲ್ಲಿ ಯಾರು ಯಾರು ಅವಕಾಶ ಕೊಟ್ಟರೋ ನನಗೆ ಗೊತ್ತಿಲ್ಲ, ಈ ಬಗ್ಗೆ ಅಲ್ಲಿಯ ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ದೂರು ಕೊಟ್ಟಿದ್ದರೂ ಸಹ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ, ಈಗ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಸಂಬಂಧಪಟ್ಟವರ ಮೇಲೆ 47 ಸಾವಿರ ರೂಪಾಯಿಗಳನ್ನು ಟಿ.ಟಿ. ಹಾಕಿದ್ದಾರೆಂದು ಕೇಳಿದ್ದೇನೆ. ಅವರು ಕೇವಲ 80-85 ಎಕರೆ ಅರಣ್ಯ ಪ್ರದೇಶವನ್ನು ಅಕ್ರಮ ಸಾಗುವಳಿ ಮಾಡಿದ್ದಾರೆಂದು ಸರ್ವೆಯವರ ರಿಪೋರ್ಟಿನ ಮೇಲೆ ಈ ರೀತಿ ಟಿ.ಟಿ. ಹಾಕಿದ್ದಾರೆ. ಆದರೆ ಅವರು 200-300 ಎಕರೆಗಳಷ್ಟು ಅಕ್ರಮ ಸಾಗುವಳಿ ಮಾಡಿದ್ದಾರೆ. ಅಲ್ಲಿ ಎಣ್ಣೆ ತೆಗೆಯುವಂತಹ ಹುಲ್ಲನ್ನು ಬೆಳೆದು ಎರಡು ಲಕ್ಷ ರೂಪಾಯಿಗಳವರೆಗೂ ಸಂಪಾದನೆ ಮಾಡುತ್ತಿದ್ದಾರೆ. ಹುಲ್ಲಿನಿಂದ ಎಣ್ಣೆ ತೆಗೆಯಲು ನೂರಾರು ಟನ್ ಕಟ್ಟಿಗೆಯನ್ನು ಉಪಯೋಗ ಮಾಡುತ್ತಿದ್ದಾರೆ. ಆದರೆ ಸರ್ಕಾರಕ್ಕೆ ಯಾವ ಬಾಬಿನಿಂದಲೂ ಅವರಿಂದ ಆದಾಯ ಬರುತ್ತಿಲ್ಲ, ಈ ಜಾಗವನ್ನು ಪ್ಲಾನ್‌ಟೇಷನ್ ಕಾರ್ಪೊರೇಷನ್‌ಗೆ ಒಪ್ಪಿಸಲಾಗಿದೆ ಎಂದು ಹೇಳಿದರು, ಆದರೆ ಅವರು ಇಲ್ಲಿಯವರೆಗೆ ಆ ಜಾಗವನ್ನು ತಮ್ಮ ಸ್ವಾಧೀನಕ್ಕೆ ತೆಗೆದು ಕೊಂಡಂತೆ ಕಾಣುತ್ತಿಲ್ಲ, ಜೊತೆಗೆ ಈಗ ಅವರ ಮೇಲೆ 47 ಸಾವಿರ ರೂಪಾಯಿಗಳ ಟಿ.ಟಿ. ಏನು ಹಾಕಲಾಗಿದೆ, ಅದನ್ನು ವಜಾ ಮಾಡಿಸುವುದಕ್ಕೆ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಅಪ್ಲಿಕೇಷನ್ ಕೊಟ್ಟಿದ್ದಾರೆಂದು

ನಾನು ಕೇಳಿದ್ದೇನೆ ಮತ್ತು ಈ ವಿಚಾರ ರೆವಿನ್ಯೂ ಬೋರ್ಡ್ ಮುಂದೆ ಬಂದು ಅದಕ್ಕೆ ಸ್ಟೇ ಕೊಡಲಾಗಿದೆ ಎಂದು ಸಹ ಕೇಳಿದ್ದೇನೆ. ಇಂತವರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳಬೇಕು, ಆದರೆ ಯಾರು ಎರಡು-ಮೂರು ಎಕರೆಯನ್ನು ಬೇರೆ ಗತಿ ಇಲ್ಲದೆ ಸಾಗುವಳಿ ಮಾಡಿದ್ದಾರೆ ಅಂತಹವರನ್ನು ಅಲ್ಲಿಂದ ಹೊರಹಾಕಬಾರದೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಮಾನ್ಯ ಬಂಗಾರಪ್ಪನವರು ಹೇಳಿದಂತೆ ಒಂದು ಅರ್ಥದಲ್ಲಿ ತಾವು ಮಾಡುತ್ತಿದ್ದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದು ಕೊಂಡಿದ್ದೀರಿ, ಇನ್ನೊಂದು ಅರ್ಥದಲ್ಲಿ ಕಳ್ಳಸಾಗಾಣಿಕೆದಾರರ ವಿರುದ್ಧ ಸಾಕಷ್ಟು ಕ್ರಮ ತೆಗೆದು ಕೊಂಡಿದ್ದೀರಿ, ಈ ರೀತಿಯ ಕ್ರಮವನ್ನು ಇದೇ ರೀತಿ ಮುಂದುವರೆಸಿ ನಮ್ಮ ಕಾಡನ್ನು ರಕ್ಷಣೆ ಮಾಡುವುದರ ಮೂಲಕ ಮತ್ತು ಸಾಮಾನ್ಯ ಜನರು ಏನಾದರೂ ಅಕ್ರಮ ಸಾಗುವಳಿ ಮಾಡಿದ್ದರೆ ಅವರಿಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲು) — ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಇಲಾಖೆಯ ಮಂತ್ರಿಗಳು ಶೇಕಡಾ ೫ರಷ್ಟು ಸುಂಕವನ್ನು ಅರಣ್ಯ ಉತ್ಪತ್ತಿಯ ಮೇಲೆ ಹಾಕುವುದಕ್ಕೆ ಈ ಮಸೂದೆಯನ್ನು ಮಂಡನೆ ಮಾಡಿದ್ದಾರೆ. ಈ ಹಣವನ್ನು ಹೊಸದಾಗಿ ಅರಣ್ಯ ಬೆಳೆಸಲು ಉಪಯೋಗ ಮಾಡಲಾಗುತ್ತದೆಂದು ಸಹ ಅವರು ಹೇಳಿದ್ದಾರೆ ಈ ಕಾರಣದಿಂದ ಇದನ್ನು ಸ್ವಾಗತ ಮಾಡಬೇಕಾಗುತ್ತದೆ ಆದರೆ ಮತ್ತೊಂದು ವಿಧದಲ್ಲಿ ಇದನ್ನು ವಿರೋಧ ಮಾಡಬೇಕಾಗುತ್ತದೆ. ಕಾರಣವೇನೆಂದರೆ, ಇವೊತ್ತು ನಮ್ಮಲ್ಲಿ ಅರಣ್ಯ ಸಂಪತ್ತು ಏನಿದೆ ಅದನ್ನು ಸರಿಯಾದ ರೀತಿಯಲ್ಲಿ ವಿಸ್ತರಣೆ ಮಾಡಿ, ವ್ಯವಸ್ಥಿತವಾದಂಥ ರೀತಿಯಲ್ಲಿ ಕಾಡನ್ನು ಬೆಳೆಸಿದರೆ ಈ ಸುಂಕವನ್ನು ಹಾಕುವ ಅವಶ್ಯಕತೆಯೇ ಇರುತ್ತಿರಲಿಲ್ಲ; ಈಗ ಕಾಡಿನ ಉತ್ಪತ್ತಿ ಏನಿದೆ, ಅದನ್ನು ಸರಿಯಾಗಿ ಉಪಯೋಗಿಸಿಕೊಂಡಿದ್ದೇ ಆದರೆ. ಕಾಡಿನ ಅಭಿವೃದ್ಧಿಯನ್ನು ಈಗಿನ ಎರಡರಷ್ಟು ಮಾಡುವುದಕ್ಕೆ ಅವಕಾಶವಿದೆ ಉದಾಹರಣೆಗೆ ಹೇಳುವುದಾದರೆ, ಈ ಹಿಂದೆ ನನ್ನ ಸ್ನೇಹಿತರು ಹೇಳಿದಂತೆ ಹರಿಹರ ಪಾಲಿಫೈಬರ್ಸ್‌ನವರಿಗೆ ಕೇವಲ ಟನ್ ಒಂದಕ್ಕೆ ೨೪ ರೂ ವನ್ನು ದರದಲ್ಲಿ ಯೂಕಲಿಪ್ಟಸ್ ಮರಗಳನ್ನು ಕೊಡುತ್ತಿರುವುದು ಸರಿಯೆ ? ಅದೇ ರೀತಿ ಪೇಪರ್ ಮಿಲ್‌ನವರಿಗೆ ಬೊಂಬುಗಳನ್ನು ಟನ್ ಒಂದಕ್ಕೆ ೭ ರಿಂದ ೧೫ ರೂಪಾಯಿಗಳ ವರೆಗೆ ಮಾರಾಟ ಮಾಡುತ್ತಿದ್ದಾರೆ. ಈ ಮೊದಲು ಟನ್ ಒಂದಕ್ಕೆ ಒಂದೂವರೆ ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ; ಈಗ ಅದನ್ನು ಸ್ವಲ್ಪ ಹೆಚ್ಚು ಮಾಡಿದ್ದಾರೆ. ಈ ರೀತಿ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಈ ಎರಡು ಬಾಬಿನಿಂದಲೇ ಕೋಟ್ಯಾಂತರ ರೂಪಾಯಿಗಳಷ್ಟು ಹಣ ನಷ್ಟವಾಗುತ್ತಿದೆ. ಈ ನಷ್ಟವನ್ನು ತಪ್ಪಿಸಿದ್ದರೆ ಈಗ ಹೊಸದಾಗಿ ಶೇಕಡಾ ೫ರಷ್ಟು ಸುಂಕ ಹಾಕುವ ಅವಶ್ಯಕತೆಯೇ ಇರುತ್ತಿರಲಿಲ್ಲ;

ಇನ್ನು ನಮ್ಮ ನಾಡು ಒಂದು ಕಾಲಕ್ಕೆ ಗಂಧದ ಬೀಡು ಎಂದು ಪ್ರಖ್ಯಾತಿ ಪಡೆದಿತ್ತು; ಆದರೆ ಇಂದು ಗಂಧದ ಮರಗಳು ಎಲ್ಲಿವೆ ಎಂದು ನೋಡಬೇಕಾದರೆ ನೂರಾರು ಮೈಲಿಗಳವರೆಗೆ ಪ್ರಯಾಣ ಮಾಡಬೇಕಾಗಿದೆ. ಔಷಧಿ ಮಾಡಲು ಗಂಧದ ಮರದ ಎಲೆಗಳು ಬೇಕು ಎಂದರೆ ಅವು ಸಿಗುತ್ತವೋ ಅಥವಾ ಇಲ್ಲವೋ ಎನ್ನುವ ಪರಿಸ್ಥಿತಿ ಬಂದಿದೆ. ಈ ರೀತಿ ಆಗುವುದಕ್ಕೆ ಕಾರಣವೇನೆಂದರೆ, ಈ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳು ಮತ್ತು ಸಮಾಜ ಘಾತುಕ ವ್ಯಕ್ತಿಗಳು ಶಾಮೀಲಾಗಿ ಗಂಧದ ಮರಗಳನ್ನು ಕಳ್ಳತನದಿಂದ ಯಥೇಚ್ಛವಾಗಿ ಹೊರಗಡೆಗೆ ಸಾಗಿಸುತ್ತಿರುವುದು; ಗಂಧದ ಮರಗಳು ಯಾವ ರೀತಿ ಬೆಳೆಯುತ್ತದೆ ಎಂಬುದೇ ತಿಳಿಯದಿರತಕ್ಕಂಥ ಉತ್ತರಪ್ರದೇಶದಲ್ಲಿ ಗಂಧದ ಎಣ್ಣೆಯನ್ನು ತೆಗೆಯತಕ್ಕ ನೂರಾರು ಮಿಲ್‌ಗಳು ಇವೆ. ಅಂತಹ ಪ್ರದೇಶಕ್ಕೆ ನಮ್ಮ ರಾಜ್ಯದಿಂದ ಕಳ್ಳತನದಿಂದ ಲಾರಿಗಳಲ್ಲಿ ಗಂಧದ ಮರಗಳನ್ನು ಸಾಗಿಸುತ್ತಿದ್ದಾರೆ. ಒಂದು ಲಾರಿ ಗಂಧದ ಮರವನ್ನು ಸಾಗಿಸಿದರೆ, ಅದರಿಂದ ೭–[illegible] ಲಕ್ಷ ರೂಪಾಯಿಗಳಷ್ಟು ಆದಾಯವಿದೆ ಎಂದು ಹೇಳುತ್ತಾರೆ. ಇದು ಯಾವ ರೀತಿ ನಡೆಯುತ್ತಿದೆ, ಏಕೆ ಹೀಗಾಗುತ್ತದೆ ಎಂಬುದು ನನಗೂ ಆಶ್ಚರ್ಯವಾಗಿ ಕಾಣುತ್ತಿದೆ.

ಇನ್ನು ಮುಂದೆ ಏನು ಈ ಕಳ್ಳಸಾಗಣೆ ನಡೆಯುತ್ತಿದೆ ಅದನ್ನು ತಪ್ಪಿಸಿ ಅದನ್ನು ನಮ್ಮ ಕಾರ್ಖಾನೆಗಳು ಏನು ಇವೆ ಅವುಗಳಿಗೆ ಸಪ್ಲೈ ಆಗುವಂತೆ ಮಾಡಿ. ಇಲ್ಲದೆ ಹೋದರೆ ಇನ್ನು ಕೆಲವೇ ಸಮಯದಲ್ಲಿ ನಮ್ಮ ಕಾರ್ಖಾನೆಗಳು ಮುಚ್ಚುವಂತಹ ಪರಿಸ್ಥಿತಿಗೆ ಬಂದಿವೆ ಜೊತೆಗೆ ಏನು ಗಂಧದ ಮರಗಳು ಇವೆ ಅವು ಸರಿಯಾದ ಒಂದು ವಯಸ್ಸಿಗೆ ಬರುವುದಕ್ಕೆ ಮೊದಲು ಕಡಿಯುವುದರಿಂದ ಅದರ ಇಳುವರಿ ಬರುಬರುತ್ತಾ ಬಹಳ ಕಡಿಮೆಯಾಗುತ್ತಿದೆ. ಗಂಧದ ಎಣ್ಣೆಯ ಉತ್ಪಾದನೆ ದಿನೇ ದಿನೇ ಕಡಿಮೆಯಾಗುತ್ತಿದೆ. ಇನ್ನು

ನಮ್ಮ ಕಡೆಗಳಲ್ಲಿ ರಸ್ತೆಗಳ ಪಕ್ಕದಲ್ಲಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಎಷ್ಟು ಮರಗಳಿಗೆ ಟ್ರೆಂಚಸ್ ಹೊಡೆಸುವುದಕ್ಕೆ ಖರ್ಚುಮಾಡಿದ್ದಾರೆ ಅದರಿಂದ ಯಾವರೀತಿಯಿಂದಲೂ ಪ್ರಯೋಜನವಾಗಿಲ್ಲ ಇಂಥ ದುರವ್ಯವಹಾರವಮಾಡಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಹಣವನ್ನು ಪ್ರೋಲು ಮಾಡುವವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಿ. ಶೇಕಡ ಇರಪ್ಪು ಟ್ಯಾಕ್ಸ್ ಹಾಕ ಬೇಕೆಂದು ಏನು ಹೊರಟಿದ್ದೀರಿ ಅದು ಈ ಅಕ್ರಮಗಳನ್ನು ನಿಲ್ಲಿಸಿದರೆ ಈ ಟಾಕ್ಸ್ ಹಾಕುವ ಪ್ರಮೇಯ ಬರೋವುದಿಲ್ಲ. ಈಗ ಏನು ರಸ್ತೆಗಳ ಪಕ್ಕದಲ್ಲಿ ಮರಗಳಿವೆ ಅವು ಯಾರ ಆಡಳಿತಕ್ಕೆ ಸೇರುತ್ತವೆಂದು ಕೇಳಿದರೆ ಒಂದುಸಾರಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟದು ಎಂದ ಹೇಳುತ್ತಾರೆ ಒಂದುಸಾರಿ ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲವೆಂದು ಹೇಳುವಹಾಗೆ ಆಗಿದೆ ನಾನು ಚಿಕ್ಕ ಹುಡುಗನಾಗಿದ್ದಾಗ ಸ್ಕೂಲಿಗೆ ಹೋಗಬೇಕಾದರೆ ರಸ್ತೆಯಲ್ಲಿ ಯಾವಾಗಲೂ ನೆರಳು ಇದ್ದೇ ಇರುತ್ತಿತ್ತು ಈಗ ಅದನ್ನು ಕಾಪಾಡಿಕೊಂಡು ಬರುವುದು ಹಾಗಿರಲಿ ಅದನ್ನು ನಾಶ ಮಾಡುವುದಕ್ಕೆ ಜನ ಪ್ರಯತ್ನ ಪಡುತ್ತಾರೆ. ನಾನು ಇವತ್ತು ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಏನು ರಸ್ತೆ ಪಕ್ಕದಲ್ಲಿ ಮರಗಳು ಇವೆ ಅದರ ಪಕ್ಕದ ಜಮೀನು ಹಿಡುವಳಿದಾರರ ಏನು ಇದ್ದಾರೆ ಅವರಿಗೆ ಅದನ್ನು ಬೆಳೆಸುವಂತಹ ಮತ್ತು ಉಳಿಸುವಂತಹ ಉಸ್ತುವಾರಿಯನ್ನು ಕೊಟ್ಟರೆ ಅದರ ಅಭಿವೃದ್ಧಿಯಾಗುತ್ತದೆ ಮರಗಳು ಉಳಿಯುತ್ತವೆ. ಇದರಿಂದ ಒಂದು ರೀತಿ ಅರಣ್ಯ ಅಭಿವೃದ್ಧಿ ಕಾರ್ಯ ಮಾಡಿದಂತಾಗುತದೆ ಇದನ್ನು ಗಮನಕ್ಕೆ ತೆಗೆದು ಕೊಳ್ಳಬೇಕೆಂದು ಸೂಚಿಸುತ್ತೇನೆ ಅಧ್ಯಕ್ಷರೇ, ಅನೇಕ ಕಡೆಗಳಲ್ಲಿ ಅರಣ್ಯ ಇಲಾಖೆಯ ಭೂಮಿಯನ್ನು ಉಳುಮೆ ಮಾಡಿಕೊಳ್ಳುತ್ತಿದ್ದಾರೆ ಉದಾಹರಣೆಗೆ ಹೇಳುವುದಾದರೆ ಹೆಗ್ಗಡದೇವನಕೋಟೆ ತಾಲ್ಲೋಕಿನಲ್ಲಿ ಇದು ರಾಜರೋಷವಾಗಿ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟ್ರಾರ್ ಆಗುತ್ತಾ ಇವೆ ೧೬ ವರ್ಷಗಳಿಂದ ಅವರೇ ಮಾಡಿಕೊಂಡು ಬಂದಿದ್ದಾರೆ, ಇದನ್ನು ಹೇಳುವವರು ಇಲ್ಲ ಕೇಳುವವರು ಮೊದಲೇ ಇಲ್ಲ. ಇನ್ನು ಬೇರೆ ತಾಲ್ಲೋಕುಗಳಲ್ಲಿಯೂ ನಡೆಯುತ್ತಿದೆ. ಅದೇ ಒಂದು ಸಣ್ಣ ಕಾರಿ ಅಥವಾ ಮೇಕೆ ಆ ಕಾಡಿನಲ್ಲಿ ಹೋದರೆ ಅದಕ್ಕೆ ಇಲ್ಲದ ರಣರಂಪ ಮಾಡುವ ಜನ ಏನು ಅಧಿಕಾರಿಗಳು ಇದ್ದಾರೆ ಇಂಥಹ ಆಕ್ರಮ ಸಾಗುವಳಿ ಮಾಡುವವರನ್ನು ಕೇಳುವುದಿಲ್ಲ ಇದಕ್ಕೆ ಕಾರಣವಾದರೂ ಏನು, ಇಂಥವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಯಾರ ಮರ್ಜಿಯಿಂದ ಅರಣ್ಯ ಇಲಾಖೆಯ ಭೂಮಿಯನ್ನು ಈ ರೀತಿ ಪೋಲು ಮಾಡುತ್ತೀರಿ ಆ ರೀತಿ ಆಕ್ರಮ ಸಾಗುವಳಿ ಮಾಡುವವರ ಮೇಲೆ ಏನು ಕ್ರಮ ತೆಗೆದುಕೊಳ್ಳದೆ ಬಿಟ್ಟು ಬಿಟ್ಟಿದ್ದಾರೆ ಎಂಬುದಕ್ಕೆ ಕಾರಣವನ್ನು ತಿಳಿಸಬೇಕೆಂದು ಹೇಳುತ್ತೇನೆ. ಈ ಅತಿ ಮುಖ್ಯವಾಗಿ ಈ ದೇಶದ ಬಂಡವಾಳಶಾಹಿ ಜನರು ಆರಣ್ಯದ ಉತ್ಪತ್ತಿಯಲ್ಲಿ ಕನ್ಸೇಷನ್ ಪಡೆದಿದ್ದಾರೆ ಅದನ್ನು ಆದಷ್ಟು ಜಾಗ್ರತೆ ವಾಪಸ್ ಪಡೆದು ಇದನ್ನು ರಾಷ್ಟ್ರೀಕರಣ ಮಾಡುವ ರೀತಿಯಲ್ಲಿ ಇದನ್ನು ತಪ್ಪಿಸುವ ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಹೇಳಿ ನನ್ನಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್)—ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಮಂತ್ರಿಗಳು ಒಂದು ಹೊಸ ಆದಾಯ ಬರತಕ್ಕಂಥ ಮತ್ತು ಅದನ್ನು ಹೆಚ್ಚು ಮಾಡತಕ್ಕಂಥ ಸದುದ್ದೇಶದಿಂದ ಈ ಬಿಲ್ಲಿನ್ನು ತಂದಿದ್ದಾರೆ. ಆದರೆ ಈಗ ಹೊಸದಾಗಿ ಫಾರೆಸ್ಟ್ ಅಫಾರಸ್ಟೇಷನ್ ಆಗುತ್ತಿರುವುದನ್ನು ನೋಡಿದರೆ ನಮಗ ಸಾಕಷ್ಟು ಸಂತಸ ಬರುತ್ತದೆ. ಇದೆ ವಿಷಯವಾಗಿ ಇಲ್ಲಿಯವರೆಗೆ ಅನೇಕರು ಮಾತನಾಡಿರುವುದನ್ನು ಮತ್ತೆ ಪುನಃ ಹೇಳುವುದರಲ್ಲಿ ಅರ್ಥವಿಲ್ಲ. ನಮ್ಮ ಆರಣ್ಯ ಇಲಾಖೆಯ ಅಧಿಕಾರಿಗಳ ಬಗ್ಗೆ ಒಂದೆರಡು ನಿದರ್ಶನಗಳನ್ನು ಕೊಡಬೇಕೆಂದು ಇಷ್ಟ ಪಡುತ್ತೇನೆ. ಇದೇ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೋಕು ಹಾಗೂ ಬೀದರ್ ತಾಲ್ಲೋಕು ಮತ್ತು ಜಹಿರಾಬಾದ್ ತಾಲ್ಲೋಕಿನಲ್ಲಿ ಸಾಮಾನ್ಯವಾಗಿ 50 ಇಂಚಿಗಿಂತ ಕಡಿಮೆ ಯಾವಾಗಲೂ ಮಳೆ ಇರಲಾರದು. ಆದ್ದರಿಂದ ಆ ಭಾಗದಲ್ಲಿ ಮರಗಳು ಯಾವರೀತಿ ಸಮೃದ್ಧಿಯಾಗಿರಬೇಕು ಎನ್ನುವ ಬಗ್ಗೆ ಮಾತನಾಡಬೇಕಾದರೆ ಸಾಕಷ್ಟು ಕಾಲಾವಕಾಶ ಬೇಕು, ಆದರೆ ಅಧ್ಯಕ್ಷರು ಅಷ್ಟು ವೇಳೆ ಕೊಡಲಿಕ್ಕೂ ಸಾಧ್ಯವಿಲ್ಲ ಜೊತೆಗೆ ನನಗೂ ಕೂಡ ಶಕ್ತಿಯಿಲ್ಲ. ಇದೇ ಭಾಗದಲ್ಲಿ ಕಾಚನಾಳು ಗ್ರಾಮ ಇದೆ ಹಿಂದೆ ಒಂದು ಸಾರಿ ನಮ್ಮ ಅರಣ್ಯ ಇಲಾಖೆಯ ಗಂಧದ ಮರಗಳನ್ನು ಸಾಗಿಸುವಾಗ ಅವರನ್ನು ಹಿಡಿಯಲು ಪ್ರಯತ್ನಪಟ್ಟು ಅವರಲ್ಲಿ ಸಶಸ್ತ್ರ ಆಯುಧಗಳು ಸಹ ಇದ್ದುದರಿಂ ಆ ಒಂದು ಸಮಯದಲ್ಲಿ ಇಬ್ಬರು ಮೂರು ಜನರು ಸತ್ತರೆಂದು ತಿಳಿದು ಬಂತು. ಆಗ ಆರಣ್ಯ ಇಲಾಖೆಯ

ಮಂತ್ರಿಗಳಾದ ಶ್ರೀ ಕೆ. ಎಚ್. ಪಾಟೀಲರು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವ್ಯವಸ್ಥೆ ಮಾಡಿದ್ದರು. ಸುಮಾರು ಇನ್ನೂರು ಮೈಲಿಯವರೆಗೆ ಅವರನ್ನು ಅಟ್ಟಿಸಿಕೊಂಡು ಹೋಗಿ ಹಿಡಿದಿದ್ದಾರೆ. ನಮ್ಮ ಕರ್ನಾಟಕ ಟೀಕ್ ವುಡ್ ಬೆಳೆ ಅದೇ ರೀತಿ ಕೂಡ ಅಷ್ಟು ಬೆಲೆಯಾಗಿದ್ದೆ ಎದು ಪ್ರತೀತಿ ಇದೆ. ನಮ್ಮ ಕರ್ನಾಟಕದ ಬಾರ್ಡರ್‌ನಿಂದ ಮೂರು ಮೈಲು ಹೋದರೆ ಜಹಿರಾಬಾದ್ ಇದೆ ಅಲ್ಲಿ ನಮ್ಮ ಈ ಮರಗಳ ಸಾಗಾಣಿಕೆಯಿಂದ ಲಕ್ಷಾವಧಿ ಹಣ ಸಂಪಾದನೆ ಮಾಡುತ್ತಿದ್ದಾರೆ. ಇನ್ನು ಹೊಸದಾಗಿ ಆಗಬೇಕಾದ ಅಫಾರೇಸ್ಟೇಷನ್ ಸ್ಕೀಮ್ ಏನು ಇದೆ ಅದು ನನ್ನ ಸ್ವಂತ ಅನುಭವದಲ್ಲಿ ಹೇಳಬೇಕಾದರೆ, ಬೀದರ್ ಜಿಲ್ಲೆಯಲ್ಲಿ ಸುಮಾರು 2-5 ಮೈಲು ಬೆಲ್ಟ್ ಫಾರೆಸ್ಟ್ ಏರಿಯಾ ಇದೆ. ಅದರಿಂದ ಎಷ್ಟೋ ಮಳೆ ಹೆಚ್ಚಾಗಿದೆ, ಜೊತೆಗೆ ಅದರಿಂದ ಎಷ್ಟೋ ಲಾಭವಾಗುತ್ತಿದೆ. ಇಂಥಹ ಫಾರೆಸ್ಟನ್ನು ಉಳಿಸಿಕೊಳ್ಳದೆ ಹೋದರೆ ಏನು ಪ್ರಯೋಜನ ? ಅದರ ರಕ್ಷಣೆ ಮಾಡುವುದು ನಮ್ಮ ಸರ್ಕಾರದ ಕರ್ತವ್ಯ. ಇನ್ನು ನಮ್ಮ ಸ್ಟೇಟ್ ಬಜೆಟ್ಟಿನಲ್ಲಿ ಶೇಕಡ ಪಾಯಿಂಟ್ 6 ಪರ್ಸೆಂಟ್ ಹಣವನ್ನು ಕೂಡ ಫಾರೆಸ್ಟ್ ಸಲುವಾಗಿ ಇಟ್ಟಿಲ್ಲವೆಂದು ಕಾಣುತ್ತದೆ. ಸ್ಪೆಷಲ್ ಅಫಾರೆಸ್ಟೇಷನ್ ಮಾಡುವುದಾದರೆ ಪ್ರತಿಯೊಬ್ಬ ವ್ಯವಸಾಯಗಾರ ಹಾಗೂ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಸಿಸ್ಟಮ್ಯಾಟಿಕ್ ಆಗಿ ಕೆಲಸವಮಾಡಬೇಕು. ಅದರಲ್ಲಿ ಬಹಳ ವೇಸ್ಟೇಜ್ ಹೋಗುತ್ತಿದೆ ಬರೀ ಹೊಸದಾಗಿ ಟ್ಯಾಕ್ಸ್ ಹಾಕಿದರೆ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಬೇಕಾಗುತ್ತದೆ. ಈಗ ಇರುವ ಫಾರೆಸ್ಟನ್ನೇ ಸಂರಕ್ಷಣೆ ಮಾಡಿದ್ದಾರೆ ಎಷ್ಟೋ ನಮಗೆ ಉತ್ಪತ್ತಿಯಾಗುತ್ತದೆ. ಯಾರೇ ಆಗಲಿ ಅಕ್ರಮ ಮತ್ತು ಅನ್ಯಾಯಗಳನ್ನು ಮಾಡುತ್ತಾರೆ ಅವರು ಅಧಿಕಾರಿಗಳೇ ಇರಲಿ ಖಾಸಗಿಯವರೇ ಇರಲಿ ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಂಡು ಜೈಲಿಗೆ ಹಾಕಬೇಕು ಮತ್ತು ಅಧಿಕಾರಿಗಳನ್ನು ಕಂಪಲ್ಸರಿ ರಿಟೇರ್‌ಮೆಂಟ್ ಮಾಡಿ ಮನೆಗೆ ಕಳುಹಿಸಿಕೊಡುತ್ತೇವೆಂದು ಹೇಳಿದರೆ ಆಗಲಾದರೂ ಸ್ವಲ್ಪ ಅಕ್ರಮಗಳು ಕಡಿಮೆ ಎಂದು ಹೇಳುತ್ತೇನೆ. ಶ್ರೀ ಬಿ. ಎನ್. ಪಾಟೀಲ್ ಅರಣ್ಯ ಇಲಾಖೆಯಲ್ಲಿ ಅನೇಕರು ತುಂಬಾ ಕಷ್ಟಪಟ್ಟು ಕೆಲಸ ಮಾಡುವವರಿದ್ದಾರೆ. ಅವರು ಇತರರಿಗೆ ಒಂದು ಮಾರ್ಗದರ್ಶನ ಮಾಡುವ ರೀತಿಯಲ್ಲಿ ಕೆಲಸಮಾಡಲು ಸಮರ್ಥರಿದ್ದಾರೆ. ಆದರೂ ಅಲ್ಲಿ ನಷ್ಟ ಜಾಸ್ತಿಯಾಗುತ್ತಿದೆ ಫಾರೆಸ್ಟನ್ನು ಹೆಚ್ಚು ಹೆಚ್ಚು ಬೆಳೆಸಬೇಕೆಂದು ಹೇಳುತ್ತಿದ್ದರೂ ನಮ್ಮ ಕಡೆಗಳಲ್ಲಿ ಅದರಲ್ಲಿಯೂ ನಾರ್ತ್ ಕರ್ನಾಟಕ ಏರಿಯಾದಲ್ಲಿ ಫಾರೆಸ್ಟ್ ಇಲ್ಲವೇ ಇಲ್ಲ. ಎರಡೂ ವರ್ಷ ಮೂರು ವರ್ಷಗಳಿಗೊಮ್ಮೆ ನಮ್ಮ ಕಡೆ ಬರಗಾಲ ಬರುತ್ತಲೇ ಇರುತ್ತದೆ. ಸುಮಾರು 5-10 ವರ್ಷಗಳಿಂದ ಸಾಕಷ್ಟು ನಮ್ಮ ಕಡೆ ಮಳೆಯೇ ಬರಲಿಲ್ಲ. ಮರಗಳು ಬೆಳೆಯುವುದೂ ಸಹ ಕಡಿಮೆಯಾಗಿ ಹೋಗಿದೆ. ಮಳೆ ಬರಬೇಕಾದರೆ ನಮ್ಮ ಪ್ರದೇಶದ ಸುತ್ತಮುತ್ತ ಅಫಾರೆಸ್ಟೇಷನ್ ಮಾಡುವ ಮೂಲಕ ಮಾತ್ರ ಸಾಧ್ಯ ಅದು ಒಂದು ರೆಮಿಡಿ ಮಾತ್ರ ಈಗ ಉಳಿದಿದೆ. ಯೂಕಲಿಪ್ಟಸ್ ಮರಗಳನ್ನು ಬೆಳೆಯುವುದಕ್ಕೆ ನಮ್ಮ ಕಡೆ ಅನುಕೂಲವಿದೆ. ಆದರೆ ಮಳೆ ಬಹಳ ಕಡಿಮೆ ಇದೆ. ನಮ್ಮ ಕಡೆ ಈಗ ಶೇಕಡಾ 50ರಷ್ಟು ಯೂಕಲಿಪ್ಟಸ್ ಮರಗಳೇ ಇವೆ. ಅದರ ಬಗ್ಗೆ ಆಗುತ್ತಿರುವ ವೇಸ್ಟೇಜನ್ನು ಸರ್ಕಾರದವರು ಕೂಡಲೇ ಕಡಿಮೆಮಾಡಬೇಕು. ಒಟ್ಟಿನಲ್ಲಿ ಸರ್ಕಾರದವರು ಅರಣ್ಯ ಸಂಪತ್ತನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಇರತಕ್ಕ ಮರಗಳನ್ನು ಕಡಿದು ಹಾಕುವುದನ್ನು ಕೂಡಲೇ ತಡೆಗಟ್ಟಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆಮಾಡುತ್ತೇನೆ.

ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ. ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು (ಶಾಂತಿನಗರ — ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಯಾವ ಒಂದು ಕರ್ನಾಟಕ ಫಾರೆಸ್ಟ್ ಅಮೆಂಡ್‌ಮೆಂಟ್ ಬಿಲ್ ಈ ಸಭೆಯ ಮುಂದೆ ತಂದಿದ್ದಾರೋ ಅದನ್ನು ಸ್ವಾಗತಿಸುತ್ತಾ ಇದೇ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ ನಾನು ಮೈದಾನ ಜಿಲ್ಲೆಯವನಾದರೂ ಕಾಡಿನ ಬಗ್ಗೆ ನನಗೆ ಕೆಲವಾರು ವಿಚಾರಗಳು ತಿಳಿದಿರುವುದರಿಂದ ಕೆಲವಾರು ಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡ ಬಯಸುತ್ತೇನೆ. ನಮ್ಮ ಸಂಸ್ಥಾನದಲ್ಲಿ 19 ಜಿಲ್ಲೆಗಳಲ್ಲಿ ಸಂಪೂರ್ಣವಾಗಿ 6 ಜಿಲ್ಲೆಗಳಲ್ಲಿ ಮಾತ್ರ ಕಾಡು ಇದೆ. ಕೊಡಗು ಅಂದರೆ ಸಾತ್ ಕೆನರಾ, ಹಾಸನ, ಚಿಕ್ಕಮಂಗಳೂರು ನಾರ್ತ್ ಕೆನರ ಶಿವಮೊಗ್ಗ ಮೊದಲಾದವುಗಳು. ಇವೇ ಮಲೆನಾಡು, ಇತರ ಜಿಲ್ಲೆಗಳಗ ಬಹಳ ಕಾಡು ಕಡಿಮೆ ಇದೆ. ಇನ್ನು 12 ಜಿಲ್ಲೆಗಳಲ್ಲಿ ಮೈದಾನ ಪ್ರದೇಶಗಳು ಇವೆ. ಮಲೆನಾಡು ಪ್ರದೇಶಗಳಲ್ಲಿ ಹಾಗೂ ಬೆಟ್ಟ ಗುಡ್ಡಗಳು ಬಹಳ ಹೆಚ್ಚಾಗಿ ಇರುತ್ತವೆ. ಈಗ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಇದರ ಬಗ್ಗೆ ....

ಅಧ್ಯಕ್ಷರು ಇಲ್ಲಿ ಭೂಗೋಳ ವರ್ಣನೆ ಬೇಡ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು — ಶೇಕಡಾ 5ರಷ್ಟು ಹಣವನ್ನು ಮೈದಾನ ಡೆವಲಪ್‌ಮೆಂಟ್‌ಗೋಸ್ಕರ ನಾವು ಇಡಲೇ ಬೇಕಾಗುತ್ತದೆ. ಹಿಂದೆ ಇಷ್ಟು ಬೆಟ್ಟಗುಡ್ಡಗಳ ಪ್ರದೇಶ ಇರಲಿಲ್ಲ. ಈಗ ಬಹಳ ಜಾಸ್ತಿಯಾಗಿದೆ. ಪೂರ್ವದಲ್ಲಿ ಗೋಮಾಳ ಪ್ರದೇಶ ಜಾಸ್ತಿ ಇತ್ತು. ಜನ ಜಾನುವಾರುಗಳಿಗೆ ಹೆಚ್ಚಿನ ಸೌಲಭ್ಯ ದೊರಕುತ್ತಿತ್ತು. ಈಗ ಅಂತಹ ಸೌಲಭ್ಯ ಇಲ್ಲವೇ ಇಲ್ಲ. ನನಗೆ ಬೆಂಗಳೂರಿನ ಅನುಭವ ಚೆನ್ನಾಗಿ ಗೊತ್ತಾಗಿದೆ. ಮರಗಳು ಇಲ್ಲದೆ ಬಹಳ ಜನ ಒದ್ದಾಡುತ್ತಿದ್ದಾರೆ ಸೆಖೆ ಹೆಚ್ಚಾಗಿದೆ ಅದರ ಅವಶ್ಯಕತೆ ಈಗ ಬಹಳವಾಗಿ ಇದೆ ನನ್ನ ಮಿತ್ರರೊಬ್ಬರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಕಾಡು ಹಾಳಾಗಿ ಹೋಗುತ್ತಿದೆಯೆಂದು. ಅದು ಸರಿಯಲ್ಲ. ಕ್ಷಾಮಡಾಮರಗಳು ಈಡಾಗತಕ್ಕ ಕಡೆಗಳಲ್ಲೆಲ್ಲಾ ಕಾಡು ಅವಶ್ಯವಾಗಿ ಬೇಕೇ ಬೇಕು. ಅದನ್ನು ಸರ್ಕಾರದವರೂ ಸಹ ಒಪ್ಪಿಕೊಂಡಿದ್ದಾರೆ, ಮಾನ್ಯ ವಿರೋಧ ಪಕ್ಷದ ಸದಸ್ಯರೂ ಸಹ ಒಪ್ಪಿಕೊಂಡಿದ್ದಾರೆ. ಕಾಡಿನ ಸಂಪತ್ತು ಸ್ಟೇಟ್ ಆವರೇಜ್ 15 ಪರ್ಸೆಂಟ್ ಇದ್ದರೆ ನ್ಯಾಷನಲ್ ಆವರೇಜ್ 23 ಪರ್ಸೆಂಟ್ ಇದೆ. ಈ ಸಂದರ್ಭದಲ್ಲಿ ನಾನು ಸಲಹೆಮಾಡುವುದೇನೆಂದರೆ, ನಮ್ಮ ಹಿಂದಿನ ಅನುಭವಸ್ಥರು ಹೇಳಿದ ಹಾಗೆ ನಮ್ಮ ಒಂದು ಪಾಲಿಸಿ ಪ್ರಕಾರ ಈಗ ಯಾರೇ ಆಗಲೀ ಒಂದು ಮರ ಕಡಿದರೆ ಪುನಃ 6 ಮರಗಳನ್ನು ನೆಡಬೇಕು. ಇಲ್ಲದೇ ಹೋದರೆ ನಿಜವಾಗಿಯೂ ನಾವು ಕಾಡನ್ನು ಒಂದೇ ದಿನದಲ್ಲಿ ಬೆಳೆಸುವುದಕ್ಕಾಗುವುದಿಲ್ಲ. ಒಂದು ಸಾರಿ ಕಾಡಿನ ಸಂಪತ್ತನ್ನು ನಾವು ಕಳೆದುಕೊಂಡರೆ ಇನ್ನು ನೂರು ವರ್ಷಗಳಾದರೂ ಕಾಡನ್ನು ನಾವು ಬೆಳೆಸುವುದಕ್ಕಾಗುವುದಿಲ್ಲ. ಫ್ಯೂರ್ ವುಡ್ ನಮ್ಮ ಮೈದಾನ ಪ್ರದೇಶದವರಿಗೆ ವಿಶೇಷವಾಗಬೇಕಾಗುತ್ತದೆ. ಆದರೆ ಮಲೆನಾಡಿನವರಿಗೆ ಅಷ್ಟಾಗಿ ಬೇಕಾಗುವುದಿಲ್ಲ. ಅವರು ಹೇಗೋ ಮರವನ್ನು ಅಲ್ಲಿನ ಗಿಡಮರಗಳಿಂದ ಪಡೆದು ಜೀವನ ಮಾಡುತ್ತಾರೆ ಫ್ಯೂರ್‌ವುಡ್ ವಿಶೇಷವಾಗಿ ಬೇಕಾಗಿರುವುದು ಮೈದಾನದ ಜನರಿಗೆ ಎಂಬುದನ್ನು ಈಗ ಗಮನಿಸಬೇಕಾಗಿದೆ. ಆದ್ದರಿಂದ ಸರ್ಕಾರದವರು ಹೆಚ್ಚಿಗೆ ಆಫಾರೆಸ್ಟೇಷನ್ ಸ್ಕೀಂಗಳನ್ನು ಕೂಡಲೇ ಮೈದಾನ ಜಿಲ್ಲೆಗಳಲ್ಲಿ ಹಾಕಿಕೊಳ್ಳಬೇಕು. ಹೆಚ್ಚು ಕಾಡು ಬೆಳೆಸಲು ನೆರವಾಗಬೇಕು.

ಇನ್ನು ಗಂಧದ ಮರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನೂರಾರು ವರ್ಷಗಳಿಂದ ಗಂಧದ ಮರಗಳನ್ನು ಬೆಳೆಸುತ್ತಿದ್ದರೂ ಅದರಲ್ಲಿ ತುಂಬಾ ಕಳ್ಳ ಸಾಗಾಣಿಕೆ ನಡೆಯುತ್ತಾ ಇರುವುದನ್ನು ನಾವು ಕಾಣುತ್ತಿದ್ದೇವೆ. ಇದರ ಬಗ್ಗೆ ಅರಣ್ಯ ಇಲಾಖೆಯಿಂದ ಇಂಡಸ್ಟ್ರಿಯಲ್ ಇಲಾಖೆಗೆ ಸಬ್ಸಿಡೈಜ್ ರೈಟಿನಲ್ಲಿ ಕೊಡುವುದರಿಂದ ನಿಮ್ಮಗೆ ಅವರು ಏನು ವಾಪಸ್ಸು ಕೊಟ್ಟಿದಾರೆ? ಗಂಧದ ಮರವನ್ನು ಬೆಳೆಸುವುದಕ್ಕೆ ಅರಣ್ಯ ಇಲಾಖೆಯಿಂದ ಕೈಗಾರಿಕೆಯ ಇಲಾಖೆಗಳಿಗೆ ಬರತಕ್ಕ ಹಣದಲ್ಲಿ ಎಷ್ಟು ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು. ನಮ್ಮ ದೇಶವನ್ನು ಗಂದದ ಗುಡಿ ಚಿನ್ನದ ನಾಡು, ಗಂಧದ ನಾಡು ಹಿಂದಿನಿಂದ ಕರೆಯುತ್ತಿದ್ದುದು ನಮಗೆಲ್ಲಾ ಗೊತ್ತಿದೆ. ಅದರೆ ಬರಿದಾದ ನಾಡು ಆಗುತ್ತಿದೆ. ನದಿಗಳ ಬಯಲು ಇದೆ. ಹಳ್ಳ ಗುಡ್ಡಗಳು ಹೆಚ್ಚಾಗಿವೆ. ನಮ್ಮಲ್ಲಿ ಆಫಾರೆಸ್ಟೇಷನ್ ಹೆಚ್ಚಾಗಲು ಈಗಾಗಲೇ ನೂರಾರು ಸಣ್ಣ ಪುಟ್ಟ ನದಿಗಳು ಹರಿದು ಬಂದು ಎಲ್ಲಾ ಕಡೆಯೂ ಕಾಡಿನ ಉತ್ಪತ್ತಿಗೆ ಸಹಕಾರಿಯಾಗಿವೆ. ಈಗ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ರಚನೆ ಮಾಡಿರುವುದರಿಂದ ಹಳ್ಳಿಗಾಡಿನವರಿಗೆ ಹೆಚ್ಚಿನ ಹಣದ ಸೌಲಭ್ಯ ದೊರಕುತ್ತದೆ. ರೈತರಿಗೂ ಮತ್ತು ಕಾರ್ಪೊರೇಷನ್ನಿನವರಿಗೂ ಇದರ ಬಗ್ಗೆ ಈಗ ಹೆಚ್ಚಿಗೆ ನಿಕಟ ಸಂಬಂಧವಿದೆ. ನಮ್ಮಲ್ಲಿ ಈಗ ಒಳ್ಳೆಯ ಗಿಡಮೂಲಿಕೆಗಳಿವೆ. ಅನೇಕ ವನಮೂಲಿಕೆಗಳಿಂದ ಅನೇಕ ತರಹ ಔಷಧಿಗಳನ್ನು ತಯಾರಿಸಿ ಡ್ರಗ್ಸ್ ಕಂಟ್ರೋಲ್‌ರವರ ಸಹಾಯದಿಂದ ಹೆಚ್ಚಿನ ರೀತಿಯಲ್ಲಿ ಔಷಧಿ ತಯಾರಿಸಿ ಹಣವನ್ನು ಗಳಿಸಿ ನಮ್ಮ ದೇಶದ ರೆವಿನ್ಯೂವನ್ನು ಇನ್‌ಕ್ರೀಜ್ ಮಾಡುವುದಕ್ಕೆ ಸಹಾಯ ಮಾಡಲು ಅನುಕೂಲವಾಗುತ್ತದೆ. ಈಗ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ಫಾರೆಸ್ಟ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಎಂಬುದಾಗಿ ಬೇರೆ ಬೇರೆ ಕಾರ್ಪೊರೇಷನ್‌ಗಳು ಈಗ ರಚನೆಯಾಗಿವೆ. ಹೀಗೆ ಅವು ಅನೇಕ ಹೆಸರುಗಳಿವೆ. ಅವುಗಳ ಮೂಲಕ ಎಷ್ಟು ಮರಗಳನ್ನು ಬೆಳೆಸಿದ್ದಾರೆ, ವನಮಹೋತ್ಸವ ಎಷ್ಟರಮಟ್ಟಿಗೆ ಮಾಡಿದ್ದಾರೆಂಬುದನ್ನು ನಾನು ನೋಡಿದ್ದೇನೆ. ನನ್ನ ಮಟ್ಟಿಗೆ ಹೇಳುವುದಾದರೆ, ಅರಣ್ಯ ಇಲಾಖೆಯಿಂದ ಬರತಕ್ಕ ಹೆಚ್ಚಿನ ಉತ್ಪತ್ತಿಯನ್ನು ಮೈದಾನ ಡೆವಲಪ್‌ಮೆಂಟ್‌ಗೋಸ್ಕರ ಉಪಯೋಗಿಸಬೇಕು. ಸರ್ಕಾರದವರು ನಿರ್ದಿಷ್ಟವಾದ ನಿಲುವು ತೆಗೆದುಕೊಳ್ಳಬೇಕು.

ಕೊನೆಯದಾಗಿ ನನಗೆ ಈ ಸಂದರ್ಭದಲ್ಲಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ) —ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ತೆರಿಗೆ ಭಾರವನ್ನು ಹೊರಿಸುತ್ತಾ ಇರತಕ್ಕ ಮಸೂದೆಯನ್ನು ನಾನು ವಿರೋಧಿಸಬೇಕಾದ ಪರಿಸ್ಥಿತಿಯಲ್ಲಿ ನಾನು ಇದ್ದೇನೆ. ಇದರ ಉದ್ದೇಶವಾದರೂ ಇಷ್ಟೇ. ಯಾವುದೋ ಒಂದು ಕಾಲದಲ್ಲಿ ಹಿಂದೆ ಕಾಡನ್ನು ಬೆಳೆಸುವುದಕ್ಕೋಸ್ಕರ ಶೇಕಡ ೫ರಷ್ಟು ತೆರಿಗೆಯನ್ನು ಹಾಕುತ್ತೇವೆಂದು ಹೇಳಿದ್ದರು. ಫಾರೆಸ್ಟ ಬೆಳೆಸುವುದಕ್ಕೋಸ್ಕರ ಶೇಕಡ ೫ರಷ್ಟು ತೆರಿಗೆ ಹಾಕುತ್ತೇವೆಂದು ಹೇಳುವುದು ಬಹಳ ಶೋಚನೀಯವಾದ ವಿಚಾರ. ವನಸಂಪತ್ತು ಉಳಿಸಬೇಕೆಂಬ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದ್ದರಿಂದ ಈ ಬಿಲ್ ಅಗತ್ಯವಿಲ್ಲವೆಂದು ಹೇಳಬಹುದು. ಅರಣ್ಯ ಸಂಪತ್ತು ಸ್ಮಗಲ್ ಆಗುತ್ತಾ ಇರುವುದನ್ನು ಮತ್ತು ಅಧಿಕಾರಿಗಳ ಲಂಚರುಷುವತ್ತುಗಳನ್ನು ತಪ್ಪಿಸಿದರೆ ವರಮಾನ ಇನ್ನೂ ಒಂದು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಬರುತ್ತಿತ್ತು. ನೀವು ಮೊದಲು ಆಡಳಿತದಲ್ಲಿ ಒಂದು ಬಿಗಿಯನ್ನು ತರುವುದಕ್ಕೆ ಪ್ರಯತ್ನಮಾಡಬೇಕು. ಅದನ್ನು ಬಿಟ್ಟು ಈಗ ಹೊಸದಾಗಿ ತೆರಿಗೆಯನ್ನು ಹಾಕುವುದಕ್ಕೆ ಹೊರಟಿದ್ದೀರಿ ಅದನ್ನು ನಾನು ಒಪ್ಪುವುದಿಲ್ಲ. ನನಗೆ ತಿಳಿದಿರುವ ಹಾಗೆ ಸುಮಾರು ೩ ವರ್ಷಗಳ ಕೆಳಗೆ ಸೌದೆ ಬೆಲೆ ಬೆಂಗಳೂರಿನಲ್ಲಿ ಒಂದು ಟನ್ನಿಗೆ ೧೩೦ ರೂಪಾಯಿಗಳಿದ್ದುವು ಇವತ್ತು ೨೫೦ ರೂಪಾಯಿಗಳಾಗಿವೆ. ಇದರಿಂದ ಬಡಜನರಿಗೆ ಅದರಲ್ಲಿಯೂ ಮಧ್ಯಮವರ್ಗದವರಿಗೆ ಬಹಳ ತೊಂದರೆಯಾಗುತ್ತಿದೆ. ನಾನು ನಿಜವಾಗಿ ಮಲೆನಾಡಿನಲ್ಲಿ ವಾಸಮಾಡದೇ ಇದ್ದರೂ ನಮ್ಮ ಅಕ್ಕಂದಿರು ಶೃಂಗೇರಿ ಸೊರಬ, ಸಾಗರಗಳಲ್ಲಿ ಇರುವುದರಿಂದ ನಾನು ಅನೇಕ ಸಂದರ್ಭಗಳಲ್ಲಿ ಅಲ್ಲಿಗೆ ಹೋದಾಗ್ಗೆ ನಾನು ಅಲ್ಲಿನ ಅರಣ್ಯ ಸಂಪತ್ತು ನೋಡಿ ಬಹಳ ಹೆಮ್ಮೆ ಪಡಬೇಕಾಯಿತು, ಈಗ ಹಳೆಯ ಮೈಸೂರಿನ ಮಲೆನಾಡು ಪೂರ್ತಿಯಾಗಿ ನೆಲಸಮವಾಗಿದೆ, ಅಲ್ಲಿ ನೋಡಿದರೆ ಬಹಳ ಶೋಚನೀಯ ಪರಿಸ್ಥಿತಿ ಉಂಟಾಗಿದೆ. ಬಹುಮುಟ್ಟ ರಾಜ್ಯವಾಗಿರತಕ್ಕ ಗೋವಾದಲ್ಲಿ ನಾನು ಹೋಗಿ ನೋಡಿದಾಗ ಅಲ್ಲಿ ಎಲ್ಲೆಲ್ಲಿಯೂ ಬಹಳ ಚೆನ್ನಾಗಿ ಕಾಡನ್ನು ಬೆಳೆಸುತ್ತಿದ್ದಾರೆ. ಆದರೆ ಹಾಸನ-ಮಂಗಳೂರು ರೈಲ್ವೆ ರಸ್ತೆಯನ್ನು ಮಾಡುವುದಕ್ಕೆ ಈಗಾಗಲೇ ಎಷ್ಟೋ ಮರಗಳನ್ನು ಕಡಿದು ಹಾಕಿದ್ದಾರೆ, ಸರಿಯಾದ ಆಡಳಿತ ಮಾಡಿಕೊಂಡು ಹೋದರೆ ಹೆಚ್ಚಿನ ಹೊಸ ತೆರಿಗೆಯನ್ನು ಹಾಕುವ ಪ್ರಮೇಯವೇ ಇಲ್ಲ. ಈಗ ಇಲಾಖೆಗಳಲ್ಲಿ ಸರಿಯಾದ ಆಡಳಿತದ ಬಿಗಿ ಇಲ್ಲದೆ ಸೋರಿ ಹೋಗುತ್ತಿರುವ ಹಣವನ್ನು ಉಳಿಸಿದರೆ ಇಲಾಖೆಗೆ ಹೆಚ್ಚಿನ ವರಮಾನ ಬರುತ್ತದೆ. ಆದರೆ ಹೆಚ್ಚಿನ ತೆರಿಗೆ ಹಾಕುವುದರಿಂದ ವರಮಾನ ಉತ್ತಮವಾಗುತ್ತದೆಂಬ ನಂಬಿಕೆ ನನಗೆ ಇಲ್ಲ. ನಾನು ಕಂಟ್ರಾಕ್ಟರನಾಗಿರುವುದರಿಂದ ಮರವನ್ನು ಕೊಳ್ಳುವುದಕ್ಕೆ ಹಿಂದೆ ೩೦ ರೂಪಾಯಿಗಳನ್ನು ಕೊಡುತ್ತಿದ್ದುದಕ್ಕೆ ಈಗ ೬೦ ರೂಪಾಯಿಗಳನ್ನು ಕೊಡಬೇಕಾಗಿದೆ. ಅದೇ ರೀತಿಯಾಗಿ ಹೊನ್ನೆಮರ ಮತ್ತು ಇತರ ಜಾತಿಯ ಮರಗಳಿಗೂ ಈಗ ವಿಪರೀತವಾಗಿ ಬೆಲೆಯೇರಿದೆ, ಇದರಿಂದ ಮನೆಗಳನ್ನು ಕಟ್ಟುವುದಕ್ಕೂ ಸಹ ಬಡವರಿಗೆ ಬಹಳ ತೊಂದರೆಯಾಗಿವೆ, ಈಗ ತೆರಿಗೆಗಳನ್ನು ಜಾಸ್ತಿಮಾಡುವುದರಿಂದ ಅನುಕೂಲಕ್ಕಿಂತ ಅನಾನುಕೂಲಗಳೇ ಜಾಸ್ತಿಯಾಗಿವೆ. ಈಗ ಫಾರೆಸ್ಟ ಕಾರ್ಪೊರೇಷನ ಎಂಬುದಾಗಿ ಹೊಸದಾಗಿ ರಚನೆ ಮಾಡಿದ್ದಾರೆ. ಅದಕ್ಕೆ ಎಷ್ಟು ದುಡ್ಡನ್ನು ಇದುವರೆಗೆ ಖರ್ಚುಮಾಡಿದ್ದಾರೋ ಗೊತ್ತಿಲ್ಲ. ಹೊಸ ಇಲಾಖೆಯನ್ನು ಪ್ರತ್ಯೇಕವಾಗಿ ಪ್ರಾರಂಭಮಾಡುವುದಕ್ಕೆ ಬದಲಾಗಿ ಅದನ್ನು ಮಂತ್ರಿಗಳೇ ತಮ್ಮ ಅಧೀನದಲ್ಲಿಟ್ಟುಕೊಂಡೇ ಬೆಳೆಸಬೇಕು: ಏಕೆಂದರೆ ನಾಮಕಾವಸ್ಥೆಗೆ ಮಾತ್ರ ಆ ಆಫೀಸು ಇದೆ. ನಿಜವಾಗಿಯೂ ಇದರಿಂದೇನೂ ಪ್ರಯೋಜನವಾಗುತ್ತಾ ಇಲ್ಲ. ಅದನ್ನು ಸರಿಯಾಗಿ ನಡೆಸಿಕೊಂಡು ಹೋದರೆ ಮಾತ್ರ ಅಫಾರೆಸ್ಟೇಷನ್ ಅಭಿವೃದ್ಧಿಯಾಗುತ್ತದೆ. ಆದರೆ ಆ ಕಾರ್ಪೊರೇಷನ ಎಷ್ಟರಮಟ್ಟಿಗೆ ಕೆಲಸಮಾಡುತ್ತಿದೆಯೆಂಬುದು ಈಗಾಗಲೇ ಮಂತ್ರಿಗಳಿಗೆ ಗೊತ್ತಾಗಿದೆ.

ಶ್ರೀ ಸಿ ಎನ್ ಪಾಟೀಲ್ —ಕಾರ್ಪೊರೇಷನಗಳು ಎರಡು ಇವೆ. ಫಾರೆಸ್ಟ ಕಾರ್ಪೊರೇಷನ ಬಗ್ಗೆ ಹೇಳುತ್ತೀರಾ ಅಥವಾ ಫಾರೆಸ್ಟ ಪ್ಲಾಂಟೇಷನ ಕಾರ್ಪೊರೇಷನ ಬಗ್ಗೆ ತಾವು ಹೇಳುತ್ತೀರಾ ?

ಶ್ರೀ ಟಿ. ಆರ್ ಶಾಮಣ್ಣ.— ಫಾರೆಸ್ಟ ಪ್ಲಾಂಟೇಷನ ಕಾರ್ಪೊರೇಷನ್ನಿಗೆ ತಾವೇ ಅಧ್ಯಕ್ಷರಾದರೆ ತಮ್ಮ ಅಧಿಕಾರಿಗಳನ್ನೇ ಉಪಯೋಗಿಸಿಕೊಂಡು ಹೆಚ್ಚಿನ ರೀತಿಯಲ್ಲಿ ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಾಗುತ್ತದೆ,

ಶ್ರೀ ಸಿ. ಎನ್. ಪಾಟೀಲ್ —ನಾನೇನೂ ಅದರ ಅಧ್ಯಕ್ಷನಾಗಿಲ್ಲ. ಬೇರೆಯವರು ಇದ್ದಾರೆ.

ಶ್ರೀ ಟಿ ಆರ್. ಶಾಮಣ್ಣ.— ಮಂತ್ರಿಗಳಾಗಿರುವವರೇ ಅದರ ಅಧ್ಯಕ್ಷರಾದರೆ ಈ ಕಾರ್ಪೊರೇಷನ್ನನ್ನು ಹೆಚ್ಚು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುತ್ತದೆ, ಏಕೆಂದರೆ ತಮ್ಮ ಕೈಲಿ ಹಣವಿದೆ, ಅಧಿಕಾರಿಗಳು ಇದ್ದಾರೆ, ಎಲ್ಲವನ್ನೂ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ.

3-30 P. M.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸುಮ್ಮನೇ ಏನು ಮಾಡಿದ್ದಾರೆ. ಅಲ್ಲಿ ಅಧಿಕಾರಿಗಳಿಗೆ ಜಾಗವನ್ನು ಮಾಡಿ ಕೊಡುವುದಕ್ಕೋಸ್ಕರ ಈ ಫಾರೆಸ್ಟ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ನೀವು ಮತ್ತು ನಿಮ್ಮ ಅಧಿಕಾರಿಗಳು ದಯವಿಟ್ಟು ಗೋವಾಕ್ಕೆ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ಹೇಗೆ ಕಾಡನ್ನು ಬೆಳೆಸಿದ್ದಾರೆ ಎನ್ನುವ ಬಗ್ಗೆ ತಮಗೇ ತಿಳಿಯುತ್ತದೆ,

ಶ್ರೀ ಸಿ. ಎನ್. ಪಾಟೀಲ್.—ಗೋವಾ ಅಫಾರೆಸ್ಟೇಷನ್ನಿಗೆ ನಮ್ಮ ಆಫಿಸರನ್ನು ಕಳುಹಿಸಿಕೊಟ್ಟಿದ್ದೇವೆ. ಹಾಗೂ ಗೋವಾ ನಮ್ಮ ಜಿಲ್ಲೆಯ ಬಾರ್ಡರ್‌ನಲ್ಲಿಯೇ ಬರುವುದರಿಂದ ಪುನಃ ನಾವು ಏನೂ ಹೋಗಿ ನೋಡಬೇಕಾದ್ದು ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಅರಣ್ಯ ಸಂಧಾರಣೆಗೋಸ್ಕರವಾಗಿ ತಾವು ಅನೇಕ ದಂಡುಗಳನ್ನು ಇಟ್ಟಿದ್ದೀರಿ ಆದರೂ ಕೂಡ ಬೇಕಾದಷ್ಟು ರೀತಿಯಲ್ಲಿ ಸರ್ಕಾರದ ಹಣ ಸೋರಿ ಹೋಗುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ತಾವು ಪ್ರಯತ್ನ ಪಟ್ಟಿಲ್ಲ.

MR. DEPUTY SPEAKER.—Does it come within the purview of the amendment ?

SRI T, R. SHAMANNA.—Unless you plug the loopholes and corruption you can't get additional revenue and you need not put extra tax. ಅರಣ್ಯ ಇಲಾಖೆಯಲ್ಲಿ ನಾನಾ ರೀತಿಯಲ್ಲಿ ದುಡ್ಡು ಸೋರಿ ಹೋಗುತ್ತಿದೆ. ಅದನ್ನು ಸರಿಪಡಿಸುವುದಕ್ಕೆ ತಮಗೆ ಆಗಿಲ್ಲ. ಶೇಕಡ ೫ ರಷ್ಟು ಹೆಚ್ಚಿಗೆ ಟ್ಯಾಕ್ಸನ್ನು ತಾವು ಹಾಕಿದರೂ ಕೂಡ ಅದರಿಂದ ಏನು ಪ್ರಯೋಜನವಿಲ್ಲ. ಅದರ ಬದಲು ಅರಣ್ಯವನ್ನು ಸರಿಯಾಗಿ ಬೆಳೆಸುವ ಬಗ್ಗೆ ತಾವು ಹೆಚ್ಚು ಗಮನವನ್ನು ಕೊಡಬೇಕಾಗಿತ್ತು. ಇವತ್ತು ತಾವು ಹಾಕತಕ್ಕಂಥ ಪ್ರತಿಯೊಂದು ತೆರಿಗೆಯೂ ಕೂಡ ಬಳಕೆದಾರರ ಮೇಲೆ ಹೊರೆ ಬೀಳುತ್ತದೆ. ಸೇಲ್ಸ್ ಟ್ಯಾಕ್ಸ್, ಅಕ್ಟ್ರಾಯ್ ತೆರಿಗೆ, ಈ ತರಹದ ನಾನಾ ತೆರಿಗೆಗಳು ಬಳಕೆದಾರರ ಮೇಲೆ ಬೀಳುತ್ತಿರುತ್ತದೆ. ತಾವು ಈ ರೀತಿ ಶೇಕಡ ೫ ರಷ್ಟು ಟ್ಯಾಕ್ಸನ್ನು ಹಾಕಿದರೆ ಅರಣ್ಯಗಳು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇದನ್ನು ನಾನು ಕಟುವಾಗಿ ವಿರೋಧಿಸುತ್ತೇನೆ. ಈ ಬಿಲ್ಲಿನಿಂದ ಖಂಡಿತವಾಗಿಯೂ ಫಾರೆಸ್ಟ್ ಉದ್ಧಾರವಾಗುವುದಿಲ್ಲ ಇದರಿಂದ ಇನ್ನೂ ಹೆಚ್ಚಿನ ಅಧಿಕಾರಿಗಳನ್ನು ಸೃಷ್ಟನೆ ಮಾಡಿ ಅದರಿಂದ ಬೇಕಾದೆಷ್ಟು ಹಣ ಸೋರಿ ಹೋಗುವುದಕ್ಕೆ ಅನುಕೂಲವಾಗಿದೆಯೇ ಹೊರತು ವನ ಸಂಪತ್ತನ್ನು ಬೆಳೆಸುವುದಕ್ಕೆ ಆಗಿಲ್ಲ. ಇವತ್ತು ನಮ್ಮ ಮುಂದೆ ಒಂದಲ್ಲ ಒಂದು ರೀತಿಯಲ್ಲಿ ಬಳಕೆದಾರರ ಮೇಲೆ ಹೊರಲಾರದಂಥ ಹೊರೆ ಬೀಳತಕ್ಕಂಥ ಬಲೆಗಳು ಆಗಿವೆ. ಈಗಾಗಲೇ ತೆರಿಗೆ ಹೆಚ್ಚಾಗಿದೆ ಇನ್ನು ಹೆಚ್ಚಿನ ತೆರಿಗೆ ಹಾಕುವುದರಿಂದ ಖಂಡಿತವಾಗಿಯೂ ಅರಣ್ಯಾಭಿವೃದ್ಧಿಯಾಗುವುದಿಲ್ಲ, ಎಲ್ಲಿಯವರೆಗೆ ಅಧಿಕಾರಿಗಳು ಉತ್ಸಾಹದಿಂದ ದುಡಿಯುವುದಿಲ್ಲವೋ ಹಾಗೂ ಎಲ್ಲಿಯವರೆಗ ಸರ್ಕಾರದವರು ಒಂದು ಫೇಸ್ಟ್ ಪ್ರೋಗ್ರಾಮ್ ಹಾಕಿ ಕೊಂಡು ಕೆಲಸ ಕಾರ್ಯಗಳನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಅರಣ್ಯಾಭಿವೃದ್ಧಿಯಾಗುವುದಿಲ್ಲ. ಅದುದರಿಂದ ದಯವಿಟ್ಟು ಈ ಬಿಲ್ಲನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮತ್ತೆ ಯುದ್ಧದ ಸಮಯದಲ್ಲಿ ಬೇಕಾದಷ್ಟು ಮರಗಳನ್ನು ಒಡೆದು ಹಾಕಿಬಿಟ್ಟರು.

MR. DEPUTY SPEAKER.—It does not fit in here ?

SRI T. R. SHAMANNA.—I fully appreciate your point. But my contention is that the development of forest is not upto the mark. Simply putting tax on people is an extra burden on them From the point of view of comsumers and the Public this Bill will do more harm than good. Therefore I oppose this Bill and request the Minister to withdraw,

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—

ಸನ್ಮಾನ್ಯ ಅಧ್ಯಕ್ಷರೇ, ಅರಣ್ಯ ಮಂತ್ರಿಗಳು ತಂದಿರತಕ್ಕಂಥ ಬಿಲ್ಲಿನ ಮೇಲೆ ಕೆಲವು ಮಾತುಗಳನ್ನು ಹೇಳುತ್ತೇನೆ. ಅರಣ್ಯ ಸಂಪತ್ತು ಹಾಳಾಗುತ್ತಿದೆ. ಕ್ಷಾಮ ಡಾಮರಗಳು ದೇಶದಲ್ಲಿ ತಾಂಡವವಾಡುತ್ತಿವೆ. ಇದಕ್ಕೆ ಕಾರಣ ಮೊದಲನೆಯದಾಗಿ ಸ್ಮಗ್ಲಿಂಗ್, ಎರಡನೆಯದು ಅಕ್ರಮಸಾಗುವಳಿ. ನಮ್ಮ ದೇಶದಲ್ಲಿ ಈಗ ಮೀಸಾ, ಡಿ. ಐ. ಎ ಆರ್. ಎಂದು ಮುಂತಾದವುಗಳು ಬಂದಿದೆ. ಅರಣ್ಯ ಸಂಪತ್ತನ್ನು ನಾಶ ಮಾಡತಕ್ಕಂಥವರನ್ನೇನಾದರೂ ಮೀಸಾ ಕೆಳಗೆ ಬಂಧಿಸಿದ್ದೀರಾ ಎಂದು ಸರ್ಕಾರದವರನ್ನು ಕೇಳುತ್ತೇನೆ. ಇವತ್ತಿನ ದಿವಸ ಕೇರಳ ಕಡೆಯಿಂದ ಬಂದಿರತಕ್ಕಂಥ ಮಲೆಯಾಳಿಗಳು ಅರಣ್ಯ ಸಂಪತ್ತನ್ನೆಲ್ಲಾ ಸ್ಮಗ್ಲಿಂಗ್ ಮಾಡಿ ಹೇರಳವಾದ ಆಸ್ತಿಯನ್ನು ಮಾಡಿಕೊಂಡಿದ್ದಾರೆ, ಅವರನ್ನೆಲ್ಲಾ ತಾವು ಮೀಸಾ ಕೆಳಗೆ ಏತಕ್ಕೆ ಇನ್ನೂ ಬಂಧಿಸಿಲ್ಲ? ಅವರ ಮೇಲೆ ತಾವು ಯಾವುದೇ ತರಹವಾದ ತೀವ್ರ ಕ್ರಮ ತೆಗೆದು ಕೊಂಡಿಲ್ಲ. ಮೈಸೂರು ಜಿಲ್ಲೆಯಲ್ಲಿ ಹಿಂದೆ ಒಂದಾನೊಂದು ಕಾಲದಲ್ಲಿ ದೊಡ್ಡದೊಡ್ಡ ಗೊಂಡಾರಣ್ಯಗಳು ಇದ್ದವು, ಕಾಡುಗಳು ಇದ್ದವು ಎಂದು ಹೆಸರುವಾಸಿಯಾಗಿತ್ತು. ಇವತ್ತಿನ ದಿವಸ ಅಲ್ಲೆಲ್ಲಾ ದೊಡ್ಡದೊಡ್ಡ ಪ್ರಾಜೆಕ್ಟ್‌ಗಳು ಆಗುತ್ತಿವೆ. ಅದರಲ್ಲಿ ನುಗು ಪ್ರಾಜೆಕ್ಟ್, ಕಾವೇರಿ ಪ್ರಾಜೆಕ್ಟ್, ಇಂಥ ಪ್ರಾಜೆಕ್ಟ್‌ಗಳ ಕೆಳಗೆಲ್ಲಾ ಹೇರಳವಾದ ಅರಣ್ಯ ಸಂಪತ್ತು ಹಾಳಾಗಿ ಹೋಗಿದೆ. ಅದನ್ನು ಪುನಃ ಬೆಳೆಸುವುದಕ್ಕೆ ಸರ್ಕಾರದವರು ಯಾವುದೇ ತರಹದ ಪ್ರಯತ್ನವನ್ನು ಮಾಡಿಲ್ಲ. ಇವತ್ತಿನ ದಿವಸ ಲಕ್ಷಾಂತರ ರೂಪಾಯಿಗಳು ಖರ್ಚು ಮಾಡಿ ನುಗು ಪ್ರಾಜೆಕ್ಟನ್ನು ಕಟ್ಟಿದ್ದಾರೆ ಆದರೆ ಅಲ್ಲಿ ಒಂದು ತೊಟ್ಟು ನೀರು ನಿಂತಿಲ್ಲ. ಇದಕ್ಕೆ ಕಾರಣವೇನೆಂದರೆ ಮಳೆ ಬಾರದೆ ಹೀಗಾಗಿದೆ ಎಂದು ಹೇಳುತ್ತಾರೆ. ಆದರೆ ಅದಕ್ಕೆ ಮುಖ್ಯವಾದ ಕಾರಣವೆಂದರೆ ಕಾಡನ್ನು ಕಡಿದು ಪುನಃ ಬೆಳೆಸದೇ ಇರತಕ್ಕಂಥದ್ದು. ಆದುದರಿಂದ ತಾವು ಮರಗಳನ್ನು ಕಡಿಯುವುದನ್ನು ಮೊದಲು ತಪ್ಪಿಸಬೇಕು. ಈಗ ತಾವು ಏನು ೫ ಪರಸೆಂಟ್ ಟ್ಯಾಕ್ಸ್ ಹಾಕಿದ್ದೀರಿ ಅದನ್ನು ಬೇಕಾದರೆ ಇನ್ನೂ ಹೆಚ್ಚು ಮಾಡಬಹುದಾಗಿತ್ತು ಎಂದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಮಸೂದೆಯ ವ್ಯಾಪ್ತಿಯೊಳಗೇ ಮಾತನಾಡಿದರೆ ಮಂತ್ರಿ ಗಳವರೂ ಸಹ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎನ್. ಗುರುಸಿದ್ದಪ್ಪ.—ಸ್ವಾಮಿ, ನಾನು ಅಕ್ರಮ ಸಾಗುವಳಿ ವಿಚಾರವಾಗಿ ಹೇಳುತ್ತಿದ್ದೆ. ಹಿಂದೆ ಮಹದೇಶ್ವರ ಬೆಟ್ಟಕ್ಕೆ ಹೋಗಬೇಕಾದರೆ ಕಾಡಿನೊಳಕ್ಕೆ ಹೋಗಿ ಹೋಗಬೇಕಾಗುತ್ತಿತ್ತು. ಆಗ ಕಾಡಿನೊಳಗೆ ಹೋಗಬೇಕಾದರೆ ಜನರಿಗೆ ಭಯವಾಗುತ್ತಿತ್ತು. ಆದರೆ ಇವತ್ತಿನ ದಿವಸ ಅಲ್ಲಿ ಜನರು ಸಾವಿರಾರು ಎಕರೆ ಜಮೀನನ್ನು ಸಾಗುವಳಿ ಮಾಡಿದ್ದಾರೆ. ಅದಕ್ಕೆಲ್ಲಾ ತಾವು ಅವಕಾಶ ಕೊಡದೆ ಅರಣ್ಯ ಸಂಪತ್ತನ್ನು ಹೆಚ್ಚಿಸುವುದಕೋಸ್ಕರ ಟ್ಯಾಕ್ಸನ್ನು ಹಾಕುತ್ತಿದ್ದೇವೆಂದರೆ ಅದು ನಿಜವಾಗಿಯೂ ಒಂದು ತರಹದ ಹೊರೆ ಆಗುತ್ತದೆ. ತಾವು ಅರಣ್ಯ ಸಂಪತ್ತನ್ನು ಹಾಳು ಮಾಡಿ ಪುನಃ ಬೆಳೆಸುವುದಕೋಸ್ಕರ ಪ್ರಯತ್ನ ಮಾಡುತ್ತಿದ್ದೀರಿ ಇದು ನಿಜವಾಗಿಯೂ ಆಶ್ಚರ್ಯಕರವಾದ ವಿಷಯ. ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ ಅರಣ್ಯ ಸಚಿವರು ತಂದಿರತಕ್ಕಂಥ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

ಎಲ್ಲರಿಗೂ ಗೊತ್ತಿರುವ ಹಾಗೆ ಈಗ ಅರಣ್ಯಇಲಾಖೆ ಎಂದು ಒಂದು ವಿಭಾಗವಿದ್ದೆ ಇದೆ. ಅದರ ಜೊತೆಗೆ ಈ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಒಂದು ಇದೆ. ಮತ್ತೆ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಮುಂತೊಂದು ಇದೆ. ಹೀಗೆ ಒಟ್ಟು ಎರಡು ಕಾರ್ಪೊರೇಷನ್‌ಗಳನ್ನು ಸೃಷ್ಟಿ ಮಾಡಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಈ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರ ಉದ್ದೇಶವಾದರೂ ಏನೂ ಎಂದರೆ ಅರಣ್ಯವನ್ನು ಅಭಿವೃದ್ಧಿ ಮಾಡಬೇಕೆಂದು ಮಾಡಿಕೊಂಡಿರತಕ್ಕಂಥ ಸಂಸ್ಥೆ. ಈ ಸಂಸ್ಥೆಗೆ ಪ್ರತ್ಯೇಕವಾದ ಹಿಡುವಳಿಗಳನ್ನು ನಿರ್ಮಾಣ ಮಾಡಲಾಗಿದೆ. ಆದಾಯದ ಮೂಲಗಳನ್ನು ಅವರು ಪೂರ್ಣವಾಗಿ ಉಪಯೋಗಿಸಿಕೊಂಡು ಅರಣ್ಯವನ್ನು ಬೆಳೆಸತಕ್ಕಂಥದ್ದು ಕಾರ್ಪೊರೇಷನ್ನಿನ ಉದ್ದೇಶ. ಕಾರ್ಪೊರೇಷನ್ ಈ ಒಂದು ಕೆಲಸಕಾರ್ಯವನ್ನು ಮಾಡದೇ ಹೋದರೆ ಮತ್ತೆ ಅದರ ಅವಶ್ಯಕತೆ ಎಲ್ಲಿಂದ ಬಂತು ? ಈ ಒಂದು ಕಾರ್ಯವನ್ನು ಕಾರ್ಪೊರೇಷನ್‌ನವರ ಮೇಲೆ ಹೊರಿಸಿದ ಮೇಲೆ ಇದರ ಬಗ್ಗೆ ಮತ್ತೆ ಪ್ರತ್ಯೇಕವಾದ ಕಾರ್ಯವನ್ನು ಸರ್ಕಾರದವರು ಮಾಡಬೇಕಾದ ಆವಶ್ಯಕತೆ ಎಲ್ಲಿಂದ ಬಂತು ಎಂದು ನನ್ನ ಪ್ರಶ್ನೆ. ಈ

ಕಾರ್ಪೊರೇಷನ್ ಸೃಷ್ಟಿ ಮಾಡುವುದಕ್ಕೆ ಕೊಟ್ಟಂಥ ಕಾರಣವಾದರು ಏನು ? ಸರ್ಕಾರದವರು ಕೊಡತಕ್ಕಂಥ ಹಣದಿಂದ ಅರಣ್ಯ ಅಭಿವೃದ್ಧಿ ಮಾಡಬೇಕು. ಒಂದು ವೇಳೆ ಅದು ಸಾಕಾಗದಿದ್ದರೆ ಪ್ರತ್ಯೇಕವಾದ ಹಿಡುವಳಿಗಳನ್ನು ಹಿಡಿದು ಹೆಚ್ಚು ಆದಾಯದ ಮೂಲಗಳನ್ನು ಕಂಡು ಹಿಡಿಯಬೇಕು ಹಾಗೂ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡು ಅಭಿವೃದ್ಧಿ ಮಾಡಬೇಕೆಂದು ಉದ್ದೇಶವಿದೆ.

ಇವೊತ್ತು ಬ್ಯಾಂಕುಗಳಿಂದ ಸಾಲ ತರಬೇಕು ಮತ್ತೆ ಅಭಿವೃದ್ಧಿ ಮಾಡಬೇಕು. ತಾವು ಯಾವುದೇ ಒಂದು ಸಂಸ್ಥೆಯನ್ನು ನಿರ್ಮಾಣ ಮಾಡಿದಾಗ ಅದು ತನ್ನ ಕಾಲಿನ ಮೇಲೆ ನಿಲ್ಲುವ ಸಂಸ್ಥೆಯಾಗಬೇಕು, ಸಾಲ ತರತಕ್ಕ ಹಣ ಸದ್ವಿನಿಯೋಗವಾಗಬೇಕು, ಮತ್ತೆ ಅದರಿಂದ ನಿವ್ವಳ ಲಾಭ ಬರುವಂತಾಗಬೇಕು ಎಂದು ಹೇಳುತ್ತೇನೆ. ಈಗ ಅರಣ್ಯ ಇಲಾಖೆಯಲ್ಲಿ ಕೆಲಸಮಾಡತಕ್ಕ ನುರಿತ ಅಧಿಕಾರಿಗಳು, ಈ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುತ್ತಾ ಇರತಕ್ಕ ಕೆಲಸದ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ ಇರುವುದು ಒಂದು ಕಾರಣ ಇಷ್ಟೇ ಹಿಂದೆ ಫಾರೆಸ್ಟ್ ಇಲಾಖೆಯಲ್ಲಿ ಅರಣ್ಯ ಬೆಳೆಸುವುದಕ್ಕೆ ಏನು ಹಣ ಖರ್ಚು ಮಾಡುತ್ತಿದ್ದರು ಅದಕ್ಕಿಂತ ಹೆಚ್ಚು ಹಣ ಖರ್ಚುಮಾಡಿ ಈ ಕಾರ್ಪೊರೇಷನ್‌ನಲ್ಲಿ ಅರಣ್ಯ ಬೆಳೆಸುವುದು ನಡೆದಿದೆ. ಈ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡತಕ್ಕದ್ದು ಇಲ್ಲಿಯವರೆಗೂ ಮಾಡಿರತಕ್ಕ ಪ್ರಮಾಣಕ್ಕಿಂಥ ಹೆಚ್ಚಾಗಿದೆ ಎಂದು ಹೇಳಿದರು. ಈಗ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅರಣ್ಯ ಬೆಳೆಸುವುದಕ್ಕೆ ನಿರ್ಮಾಣ ಮಾಡಿಕೊಂಡರೆ, ಇದಕ್ಕಾಗಿ ವಿಶಿಷ್ಟವಾದ ತೆರಿಗೆಯನ್ನು ಜನರ ಮೇಲೆ ಏರಿಸಿ ಆ ಕರ್ತವ್ಯ ಏತಕ್ಕೆ ಮಾಡಬೇಕು ಎಂದು ಕೇಳುತ್ತೇನೆ. ಇನ್ನೊಂದು ವಿಚಾರವನ್ನು ಮಾನ್ಯ ಸಚಿವರಿಗೆ ಅಧ್ಯಕ್ಷರ ಮೂಲಕ ತಿಳಿಸುವುದೇನೆಂದರೆ, ಈಗ ಕಳ್ಳಸಾಗಾಣಿಕೆ ಮಾಡತಕ್ಕ ಜನರು ಏನಿದ್ದಾರೆ ಅವರ ಅಪರಾಧಗಳ ರುಜುವಾತು ಆದಾಗ ನ್ಯಾಯಾಲಯಗಳಲ್ಲ ಕೊಡತಕ್ಕ ಶಿಕ್ಷೆ ಬಹಳ ಕಡಿಮೆ ಎಂದು ಅನೇಕ ಕಡೆ ವ್ಯಕ್ತಪಡಿಸತ್ತಾರೆ. ಈಗ ಅಪರಾಧದ ಒಂದು ಮಹತ್ತು ಹೆಚ್ಚಾಗಿದ್ದರೆ ಶಿಕ್ಷೆ ಜಾಸ್ತಿಯಾಗಬೇಕು ಅಲ್ಲಿ ಲಘುವಾದ ಶಿಕ್ಷೆ ಕೊಡುವುದರಿಂದ ಅಪರಾಧ ತಡೆಹಿಡಿಯುವುದಕ್ಕೆ ತೊಂದರೆಯಾಗಿದೆ ಎಂದು ಅಲ್ಲಲ್ಲೇ ವ್ಯಕ್ತಪಡಿಸಿದ್ದಾರೆ ಕೆಲವು ಭಾಗಗಳಲ್ಲಿ ಅಂದರೆ ಬೇರೆ ರಾಜ್ಯದಲ್ಲಿ ತಿಳಿದುಕೊಂಡರೆ ಅಲ್ಲ ಯಾರು ವಾಹನಗಳಲ್ಲಿ ಅರಣ್ಯ ಪದಾರ್ಥಗಳನ್ನು ಕಳ್ಳಸಾಗಾಣಿಕೆಯಿಂದ ರವಾನೆ ಮಾಡುತ್ತಾರೆ ಅಂತಹವರ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಅಂತಹ ಕಾನೂನನ್ನು ತಾವು ಮಾಡಬೇಕು ಈ ರೀತಿ ಮಾಡಿದರೆ 70-80 ಸಾವಿರ ರೂಪಾಯಿ ಬೆಲೆ ಬಾಳತಕ್ಕ ಒಂದು ಲಾರಿ ಅರಣ್ಯ ಪದಾರ್ಥಗಳ ಜೊತೆಗೆ ಮುಟ್ಟುಗೋಲು ಮಾಡುವುದಾದರೆ ಈ ಒಂದು ಕಳ್ಳಸಾಗಾಣಿಕೆದಾರರ ಚಟುವಟಿಕೆ ನಿಂತುಹೋಗುತ್ತದೆ ಎಂದು ನಂಬಿಕೆ ಇಟ್ಟುಕೊಳ್ಳಬಹುದು, ಆದುದರಿಂದ ಈ ಅರಣ್ಯಪದಾರ್ಥಗಳ ಜೊತೆಗೆ ಅದನ್ನು ಸಾಗಿಸತಕ್ಕ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ಮಾಡಿದರೆ ಖಂಡಿತವಾಗಿ ಈ ಒಂದು ಕಳ್ಳಸಾಗಾಣಿಕೆ ನಿಂತು ಹೋಗುತ್ತದೆ. ಇನ್ನು ಈ ಕಟ್ಟಿಗೆಯನ್ನು ಕೊಂಡುಕೊಂಡು ಬದುಕತಕ್ಕ ಸಾಮಾನ್ಯವರ್ಗದ ಜನರಿಗೆ ತೊಂದರೆಯಾಗದ ರೀತಿಯಲ್ಲಿ, ಮತ್ತೆ ಈ ಒಂದು 5 ಪರಸೆಂಟ್ ಟ್ಯಾಕ್ಸ್ ಏನು ಇದೆ, ಇದು ವಿನಾಯ್ತಿ ಸಿಕ್ಕುವ ರೀತಿಯಲ್ಲಿ ಕಾನೂನಿನಲ್ಲಿ ಮಾಡಬೇಕೆಂದು ನನಗನಿಸುತ್ತದೆ, ಅದನ್ನು ಮಾನ್ಯ ಮಂತ್ರಿಗಳು ಈಗಲಾದರೂ ಯೋಚನೆ ಮಾಡಿ ಈ ಚಿಲ್ಲರೆ ಬಿಕರಿ ಕೊಡತಕ್ಕ ಕಟ್ಟಿಗೆಯನ್ನು ಕಾನೂನಿನ ವ್ಯಾಪ್ತಿಯಿಂದ ಹೊರಗೆ ಇಡಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ) — ಮಾನ್ಯ ಅಧ್ಯಕ್ಷರೇ, ಈಗ ಮಾನ್ಯಸಚಿವರು ಮಂಡಿಸಿರತಕ್ಕ ಮಸೂದೆ ವಿಷಯದಲ್ಲಿ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರುವುದು ಒಳ್ಳೆಯದು ಎಂದು ಕಾಣಿಸುತ್ತದೆ. ಈಗ 5 ಪರ್‌ಸೆಂಟ್ ಅರಣ್ಯ ಉತ್ಪತ್ತಿ ಮೇಲೆ ಹಾಕಬೇಕೆಂಬ ಉದ್ದೇಶದಿಂದ ಹೊರಟರೆ ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಕಚ್ಚಾವಸ್ತುಗಳು ಅರಣ್ಯ ಉತ್ಪತ್ತಿ ಬರತಕ್ಕದ್ದರ ಮೇಲೆ ಬಹಳ ಧಕ್ಕೆ ಉಂಟಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಈಗ ಬೆತ್ತ ಮತ್ತು ಅನೇಕ ಸಾಮಾನುಗಳು ಅರಣ್ಯದಿಂದ ಬರಬೇಕಾಗುತ್ತದೆ. ಈಗ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳು ಬಹಳ ಕಷ್ಟದಿಂದ ಅವು ನಡೆಸುತ್ತಾ ಇರುವುದು. ಅಂತಹವುಗಳ ಮೇಲೆ ಈ 5 ಪರ್‌ಸೆಂಟ್ ತೆರಿಗೆ ಹಾಕಿದರೆ, ಈ ಕಚ್ಚಾವಸ್ತುಗಳ ಬೆಲೆ ಜಾಸ್ತಿ ಮಾಡಿದರೆ ಈ ಸಣ್ಣ ಕೈಗಾರಿಕೆ ಬಹಳ ಧಕ್ಕೆ ಉಂಟಾಗುತ್ತದೆ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈಗ ಬೆತ್ತ ಮತ್ತು

ಸಾಮಾನ್ಯವಾದ ಕಡ್ಡಿಗಳಿಗೆ ಒಂದು ರಿಯಾಯಿತಿ ದೊರಕಿಸಬೇಕು. ತಾವು 5 ಪರ್‌ಸೆಂಟ್ ತೆರಿಗೆ ಹಾಕಿದರೆ ಈ ಸಣ್ಣ ಕೈಗಾರಿಕೆಗಳನ್ನು ನಡೆಸುವುದಕ್ಕೆ ಧಕ್ಕೆಯುಂಟಾಗುತ್ತದೆ. ಆದುದರಿಂದ ಈ ಮಸೂದೆಯಲ್ಲಿ ಸಣ್ಣ ಕೈಗಾರಿಕಗಳಿಗೆ ಉಪಯೋಗಿಸತಕ್ಕ ಕಚ್ಚಾ ವಸ್ತುಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ. ಮತ್ತು ಈ 5 ಪರ್‌ಸೆಂಟ್ ತೆರಿಗೆ ಹಾಕುವುದನ್ನು ತಪ್ಪಿಸಬಹುದಿತ್ತು. ಕಾರಣ ಯಾವುದಾದರೂ ಒಂದು ಹಾಕುವಾಗ ಏನೋ ಒಂದು ಸರಿಯಾದ ಉದ್ದೇಶ ಸಫಲವಾಗುತ್ತದೆಯೋ ಇಲ್ಲವೊ ಎನ್ನುವ ಶಂಕೆ ಉಂಟಾಗಿದೆ. ಇವರು ಈಗ ಹಾಕತಕ್ಕ ತೆರಿಗೆಯನ್ನು ಪ್ಲಾಂಟೇಷನ್‌ಗೆ ಉಪಯೋಗಿಸುತ್ತೇವೆ ಎಂದು ಇದೆ. ಅದನ್ನು ಉಪಯೋಗಿಸುತ್ತಾರೋ ಇಲ್ಲವೋ ಬೇರೆ ರೀತಿಯಲ್ಲಿ ಅದನ್ನು ಉಪಯೋಗಿಸುತ್ತಾರೋ ಎನ್ನುವ ಶಂಕೆ ಇರುತ್ತದೆ. ಈಗ ಇರತಕ್ಕ ಲೂಪ್‌ಹೋಲ್ಸನ್ನು, ಸ್ಮಗಲ್ಸನ್ನು ತಪ್ಪಿಸಿದ್ದರೆ ಈ 5 ಪರ್‌ಸೆಂಟ್ ಮತ್ತೆ ಉಳಿಸಿಕೊಳ್ಳಬಹುದಿತ್ತು. ಇವೊತ್ತಿನ ದಿವಸ ಸುಮ್ಮನೆ ಜನರ ಮೇಲೆ ತೆರಿಗೆ ಜಾಸ್ತಿಯಾಗುತ್ತ ಇದೆಯೇ ಹೊರತು ಯಾವ ರೀತಿಯಿಂದ ಪ್ರಯೋಜನವಾಗುವುದಿಲ್ಲ. ಆದುದರಿಂದ ನಾನು ಈಗ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ತೆರಿಗೆ ಹಾಕುವುದನ್ನು ಬಿಟ್ಟು, ಈ ಸ್ಮಗಲ್ ಆಗತಕ್ಕದ್ದನ್ನು ತಪ್ಪಿಸಿದರೆ ಈ 5 ಪರ್‌ಸೆಂಟ್ ಮೇಕ್‌ಅಪ್ ಮಾಡಬಹುದು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ವಿಧಿಸಿ, ಅದಕ್ಕೆ ಒಂದು ಪ್ರತ್ಯೇಕವಾದ ನಿಧಿಯನ್ನು ಸಿದ್ಧಪಡಿಸಿ, ಈ ರಾಜ್ಯದ ಅರಣ್ಯ ಅಭಿವೃದ್ಧಿಪಡಿಸಬೇಕೆಂದು ಕುತೂಹಲದಿಂದ ಈ ವಿಧೇಯಕವನ್ನು ಸರ್ಕಾರದವರು ಮಂಡಿಸಿದ್ದಾರೆ. ಈ ಸರ್ಕಾರದವರು ನಿರೀಕ್ಷೆ ಮಾಡುವಂತೆ ಸುಮಾರು 1 ಕೋಟಿ 25 ಲಕ್ಷ ರೂಪಾಯಿ ಇದಕ್ಕೆಂದು ಸಂಗ್ರಹಣೆ ಆಗಬಹುದು. ಇದನ್ನು ಹೆಚ್ಚು ಕಡಿಮೆ 1976 ರಿಂದ ಹಣವನ್ನು ಅರಣ್ಯದಮೇಲೆ ತೊಡಗಿಸುವುದಕ್ಕೆ ಆಕಾಂಕ್ಷೆ ಇಟ್ಟಂತೆ ಕಾಣುತ್ತದೆ. ಈಗಾಗಲೇ ಇದರ ಬಗ್ಗೆ ಮಾನ್ಯ ಸದಸ್ಯರು ಸಂಶಯ ವ್ಯಕ್ತಪಡಿಸಿದ್ದಾರೆ, ಅದರಂತೆ ಇದರಲ್ಲಿ ಇನ್ನೊಂದು ವಿಷಯ ಸೇರಿಸಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಈಗ ಬರತಕ್ಕ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಗಾರ್ಡ್ಸ್‌ಗಳಿಗ ಇಷ್ಟು, ರೇಂಜರ್ಸ್‌ಗಳಿಗೆ ಇಷ್ಟು, ಡಿ. ಎಫ್ ಓ. ಗಳಿಗೆ ಇಷ್ಟು, ಕಂಸರವೇಟರ್ಸ್‌ಗಳಿಗ ಇಷ್ಟು ಎಂದು ಹೇಳಿ ಒಂದೊಂದು ಇಷ್ಟು ಹಣ ಇಟ್ಟು ಹಂಚಿಕೆ ಮಾಡಿದ್ದರೆ ಬಹಳ ಸುಲಭವಾಗಿ ಹಣ ಖರ್ಚಾಗುತ್ತಿತ್ತು ಎಂದು ಕಾಣುತ್ತದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇವೊತ್ತು ಅರಣ್ಯ ಇಲಾಖೆಯವರು ಅರಣ್ಯ ಅಭಿವೃದ್ಧಿಗೋಸ್ಕರ ಒಂದು ಯೋಜನೆ ಮಾಡಿಕೊಂಡಿದ್ದಾರೆ.

ಅಭಿವೃದ್ಧಿ ಯೋಜನೆ ಎಂದು ಒಂದು ಯೋಜನೆ ಮಾಡಿಕೊಂಡು ಅದರ ಮುಖಾಂತರ ಹಣ ಖರ್ಚು ಮಾಡುತ್ತಿದ್ದಾರೆ. ಆ ಹಣ ಅರಣ್ಯದ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಸದ್ವಿನಿಯೋಗವಾಗಿದೆ. ಯಾವ ಯಾವ ರೇಂಜ್‌ನಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಿ, ಎಷ್ಟು ವಿಸ್ತೀರ್ಣ ಕಾಡನ್ನು ಅಭಿವೃದ್ಧಿ ಮಾಡಿದ್ದಾರೆ. ಎಷ್ಟು ಅರಣ್ಯ ಬಂದಿದೆ; ಎಷ್ಟು ಅರಣ್ಯ ಬಂದಿಲ್ಲ ಎನ್ನುವುದರ ಬಗ್ಗೆ ಯಾರಾದರೂ ಸರ್ವೆ ಮಾಡಿಸಿ, ಅದರ ಬಗ್ಗೆ ಒಂದು ವರದಿಯನ್ನು ಸರ್ಕಾರದವರಿಗಾಗಲೀ, ಸಾರ್ವಜನಿಕಗಾಗಲೀ ಸಲ್ಲಿಸಿದ್ದಾರೆಯೇ ಎಂಬುದನ್ನು ಕೇಳುತ್ತೇನೆ. ನಾವು ಮಲನಾಡು ಪ್ರದೇಶದಿಂದ ಬಂದಿದ್ದೇವೆ. ಅರಣ್ಯ ಪ್ರದೇಶದಲ್ಲಿರತಕ್ಕ ನಾವು ಅರಣ್ಯಾಭಿವೃದ್ಧಿ ಯಾವ ರೀತಿ ಆಗುತ್ತಿದೆ ಎನ್ನುವುದನ್ನು ದಿನನಿತ್ಯ ನೋಡುತ್ತಿದ್ದೇವೆ. ಪ್ಲಾಂಟೇಷನ್ ಮಾಡುವ ಉದ್ದೇಶದಿಂದ, ನೀಲಗಿರಿ ಮತ್ತು ತ್ಯಾಗದ ಮರ ಬೆಳೆಸುವ ಉದ್ದೇಶದಿಂದ ಹೆಚ್ಚು ಕಡಿಮೆ ಮಲೆನಾಡಿನ ಪ್ರದೇಶದಲ್ಲಿರತಕ್ಕ ಅಚ್ಚಹೊಸ, ಬಹಳ ಕಾಲದಿಂದಲೂ, ಶತಶತಮಾನಗಳಿಂದ ಬೆಳೆದು ಬಂದಂಥ ದೊಡ್ಡ ವನಪ್ರದೇಶಗಳನ್ನು ಬಹಳ ಚೊಕ್ಕಟವಾಗಿ ಕತ್ತರಿಸುತ್ತಾರೆ. ಪಾಪ; ಅವರ ಕೈಗುಣ ಎಂಥ ದೊಡ್ಡ;— ಗಿಡ ನೆಡುತ್ತಾರೆ. ನೆಟ್ಟ ಗಿಡ ಹುಟ್ಟುವುದೇ ಇಲ್ಲ. ಇದರಲ್ಲಿ ಏನು ದೋಷ ಇದೆಯೋ ಏನೋ ನಮಗೆ ಸಂಶಯ ಬಂದಿದೆ. ಈಗ ಬೆಳೆದಿರುವುದೆಲ್ಲಾ ನಾವು ಹಾಕಿರುವುದು. ಆದರೆ, ಇವರು ಹಾಕಿದ್ದೆಲ್ಲಾ ಹಾಳಾಗಿ ಹೋಗಿದೆ. ಅರಣ್ಯ ನಶಿಸಿ ಹೋಗುತ್ತಿರುವುದರಿಂದ ಮಲೆನಾಡು ಪ್ರದೇಶದಲ್ಲಿ ಮಳೆ ಎಷ್ಟು ಕಡಿಮೆಯಾಗಿದೆ, ಅದನ್ನವಲಂಬಿಸಿರುವ ಕೃಷಿಯು ಹಾಡೇನಾಗಿದೆ ಎಂಬುದನ್ನು ನಾವು ಪ್ರತ್ಯಕ್ಷ ಅನುಭವಿಸುತ್ತಿದ್ದೇವೆ. ಕಾಡು; ಅದಕ್ಕೆ ಹೊಂದಿಕೊಂಡಂತೆ ಭೂಮಿ; ಆ ಭೂಮಿಯಲ್ಲಿ ಕೃಷಿ—ಇವೆಲ್ಲಾ ಸೃಷ್ಟಿಯ ವಾತಾವರಣದಲ್ಲಿ ನಿರ್ಮಾಣಗೊಂಡಿವೆ. ಇವೆಲ್ಲಾ ಸೃಷ್ಟಿಯಲ್ಲಿ ಹೀಗೇ ಇರಬೇಕೆಂದು ಇದೆ.

ಆದರೆ, ಇವತ್ತು ಕಾಡು ನಶಿಸಿ ಹೋಗುತ್ತಿದೆ; ಅನೇಕ ಎಕರೆ ಕೃಷಿ ಪ್ರದೇಶ ಪ್ಲಾಂಟೇಷನ್ ಮಾಡುವ ಉದ್ದೇಶದಿಂದ ಮುಳುಗಡೆಯಾಗುತ್ತವೆ. ಹೀಗೆ; ಬಹಳ ವೈಜ್ಞಾನಿಕವಾದ ರೀತಿಯಲ್ಲಿ ಪರಿಣಾಮಕಾರಿಯಾಗಿ ಕಾಡನ್ನು ನಾಶ ಮಾಡತಕ್ಕ ಯೋಜನೆ ಇದೆಯಲ್ಲಾ ಇದು ನಮಗೆ ಭಾದಕವನ್ನುಂಟು ಮಾಡಿದೆ. ಮಾನ್ಯ ಅಧ್ಯಕ್ಷರೇ, ತಾವು ಕಾರವಾರಕ್ಕೆ ಹೋಗುವಾಗ ನೋಡಬಹುದು. 25 ವರ್ಷಗಳ ಹಿಂದೆ ಆ ರಸ್ತೆಯಲ್ಲಿ ಪ್ರವಾಸ ಮಾಡಿದಂಥ ಒಬ್ಬ ವ್ಯಕ್ತಿಯನ್ನು ಇಂದು ಕರೆದುಕೊಂಡು ಹೋಗಿ ನೋಡಿಸಿದರೆ, ಅವನು ಏನು ಹೇಳುತ್ತಾನೆ ಎನ್ನುವುದು ಆಗ ಗೊತ್ತಾಗುತ್ತದೆ. ನಮ್ಮ ಊರಿನ ಮುಂದಕ್ಕೆ ಮಾವಿನ ಜೋಗ ಎಂಬ ಊರಿದೆ; ಅದನ್ನು ದಾಟಿದ ಮೇಲೆ ಮಾವಿನ ಕುಂಟೆ ಎಂಬ ಊರು ಬರುತ್ತದೆ; ಅದನ್ನು ದಾಟಿದ ಮೇಲೆ ಕರಡಿ ಕಾಡು ಎಂಬುದು ಬರುತ್ತದೆ. ನಾವು ಹುಡುಗರಾಗಿದ್ದಾಗ ಸಿದ್ದಾಪುರಕ್ಕೆ ಹೋಗ ಬೇಕಾಗಿದ್ದರೆ ಈ ಮಾರ್ಗದಲ್ಲೇ ಹೋಗಿ ಬರುತ್ತಿದ್ದೆವು. ಆ ಕಾಡಿನಲ್ಲಿ ಹಗಲು ಹೊತ್ತಿನಲ್ಲೇ ಕತ್ತಲು ರೂಪವನ್ನು ನಾವು ಕಾಣಬಹುದಿತ್ತು; ಹಗಲಿನಲ್ಲಿ ನಾವು ಏನನ್ನೂ ಅಲ್ಲಿ ಕಾಣುವುದಕ್ಕೆ ಆಗುತ್ತಿರಲಿಲ್ಲ. ಯಾರೂ ಕೂಡ ಒಳಗೆ ಹೋಗಿ ನೋಡುವುದಕ್ಕೆ ಆಗುತ್ತಿರಲಿಲ್ಲ. ಕರಡಿಯ ಮೈಯಲ್ಲಿನ ಕಪ್ಪು ಕೂದಲಿನಂತೆ ಆ ಕಾಡು ಕೂಡ ಯಾವಾಗಲೂ ಕತ್ತಲಿನಿಂದ ಆವರಿಸಿತ್ತು. ಅಷ್ಟು ದಟ್ಟವಾಗಿ ಬೆಳೆದಿತ್ತು ಆ ಕಾಡು ಆದಕೊಸ್ಕರವೇ ಆ ಕಾಡನ್ನು ಕರಡಿ ಕಾಡು ಎಂದು ಕರೆಯುತ್ತಿದ್ದರು, ಅದರೆ, ಇವತ್ತು, ಅರಣ್ಯಾಭಿವೃದ್ಧಿ ಎಂದು ಹೇಳಿಕೊಂಡು, ನೀಲಗಿರಿ ಮರವನ್ನು ಬೆಳೆಸುವ ಯೋಜನೆಯನ್ವಯ ಆ ಕರಡಿ ಕಾಡನ್ನು ಚೆನ್ನಾಗಿ ಕ್ಲೀನ್ ಮಾಡಿದರು. ಕಾಡಿನಲ್ಲಿ ಏನನ್ನೂ ಉಳಿಸಲಿಲ್ಲ. ಈಗ ಅಲ್ಲಿ ನೀಲಗಿರಿ ಮರಗಳನ್ನು ಹಾಕಿದ್ದಾರೆ. ಅವೂ ಕೂಡ ಬೆಳೆದಿಲ್ಲ; ಕಾಡು ಉಳಿಯಲಿದೆ. ಪ್ಲಾಂಟೇಷನ್ ಹಾಕುವ ನೆಪದಲ್ಲಿ ದಟ್ಟವಾದ ಕಾಡುಗಳನ್ನೆಲ್ಲಾ ನಾಶ ಮಾಡುತ್ತಿದ್ದಾರೆ. ಅದರೆ, ಕಾರವಾರ ಜಿಲ್ಲೆಯಲ್ಲಿ ನೀಲಗಿರಿ ಮರಗಳಿಗೆ ಒಂದು ರೀತಿಯ ರೋಗ ಬಂದು ಅವೆಲ್ಲಾ ಒಣಗಿ ಹೋಗುತ್ತಲಿವೆ ಎಂದು ಕೇಳಿದ್ದೇವೆ. ನೀಲಗಿರಿ ಮರಗಳನ್ನು ಬೆಳೆಸುವ ಉದ್ದೇಶದಿಂದ ದಟ್ಟವಾದ ಕಾಡನ್ನು ಕಡಿದರು. ಅದರೆ; ನೀಲಗಿರಿ ಮರವೂ ಬೆಳೆಯಲಿಲ್ಲ; ಕಾಡೂ ಉಳಿಯಲಿಲ್ಲ. ಇದು ನಮ್ಮ ದೇಶಕ್ಕೆ ಒಂದು ದೊಡ್ಡ ಅನಾಹುತವಾಗಿದೆ. ಅರಣ್ಯಗಳು ನಾಶವಾಗುವವರೆಗೂ ನಮ್ಮ ಕೆಲಸಗಳು ಹೋಗುತ್ತಿವೆ. 'ಈ ವರ್ಷ ಸರ್ಕಾರದವರು ಸಾವಿರ ಎಕರೆ ಕಾಡನ್ನು ಬೆಳೆಸುವ ಯೋಜನೆ ಹಾಕಿದರೆ. ಅಲ್ಲಿನ ಗಾರ್ಡನ್ಸ್‌ಗಳು ಇದನ್ನೇ ಕಾಯುತ್ತಾ ಇರುತ್ತಾರೆ; ಗಾರ್ಡನ್‌ಗಳು ಹೇಗೆ ಎಂದರೆ:– ಮಾರಿ ಕಣ್ಣು ಹೋತನ ಮೇಲೆ ಎನ್ನುವ ಹಾಗಿದೆ. ಆ ಗಾರ್ಡನ್‌ಗಳು ಎಲ್ಲ ದಟ್ಟವಾದ ಕಾಡು ಇದ ಆದನ್ನೇ ಹುಡುಕುತ್ತಾರೆ. ಅವರು ಇದನ್ನು ಗರುಡಗಳು ಕಾಯುವ ಹಾಗೆ ಕಾಯುತ್ತಿರುತ್ತಾರೆ ಅಲ್ಲಿನ ರೇಂಜ್‌ನವರು ಹೊಸ ಕಾಡು ಆಲ್ಲಿ ಆಗಬೇಕೆಂದು ಹೇಳುತ್ತಾರೆ. ಇಂಥಾ ಒಂದು ಸೂಕ್ಷ್ಮ ಪ್ರಕರಣ ನನ್ನ ಗಮನಕ್ಕೆ ಬಂದಿದೆ ಅದೇನೆಂದರೆ.—ಒಂದು ಸೌದೆ ಲೋಡ್ ತೆಗೆದುಕೊಂಡರೆ; ಅ ಗಾರ್ಡನ್‌ಗೆ ಐದು ರೂಪಾಯಿ ಕೊಡಬೇಕು. ಹೀಗೆ ಒಂದು ಎಕರೆ ಕಾಡು ಕಡಿಯುವುದಾದರೆ, ಸುಮಾರು 50 ಲೋಡ್ ಕಟ್ಟಿಗೆ ಸಿಕ್ಕುತ್ತದೆ. ಇದರಿಂದ ಆ ಗಾರ್ಡನ್‌ಗೂ ಸುಮಾರು 250 ರೂಪಾಯಿಗಳ ಹತ್ತಿಹತ್ತಿರ ಸಿಕ್ಕುತ್ತದೆ. ಹೀಗಿರುವಾಗ, ದಟ್ಟವಾದ ಕಾಡೊಂದನ್ನು ಬಿಟ್ಟು ಕುರುಚಲು ಗಿಡ ಬೆಳದ ಪ್ರದೇಶವನ್ನು ಪ್ಲಾಂಟೇಷನ್ ಮಾಡುವುದಕ್ಕೆ ಅವಕಾಶ ಕೊಡುತ್ತಾರೆಯೇ ? ಅವನಿಗೆ ಕೂತಲ್ಲೇ 250 ರೂಪಾಯಿ ಸಿಕ್ಕಬೇಕಾದರೆ, ಕಾಡಿನ ರಕ್ಷಣೆ ಹೇಗೆ ಅಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು, ಇಲ್ಲಿ ಕುಳಿತಂಥ ಜನರಿಗೆ ಸಾಮಾನ್ಯವಾಗಿ ಇದೆಲ್ಲಾ ಗೊತ್ತಾಗುವುದಿಲ್ಲ; ಮತ್ತು ಕುಳಿತು ಯೋಜನೆಗಳನ್ನು ತಯಾರಿಸುವ ಜನರಿಗೂ ಇದು ಸ್ವಾಭಾವಿಕವಾಗಿ ಗೊತ್ತಾಗುವುದಿಲ್ಲ. ಕಂಟ್ರಾಕ್ಟರುಗಳ ಜೊತೆಗೆ ಷರೀಕಾಗಿ ದಟ್ಟವಾಗಿ ಬೆಳೆದ ಕಾಡುಗಳನ್ನು ಕಡಿಯತಕ್ಕ ಪ್ರವೃತ್ತಿಯನ್ನು ಪನು ಅಧಿಕಾರಿಗಳು ನಡೆಸಿಕೊಂಡು ಬರುತ್ತಿದ್ದಾರೆ, ಅದರಿಂದ ಮಲೆನಾಡಿನ ಕಾಡು ಸಂಪೂರ್ಣವಾಗಿ ನಾಶವಾಗುತ್ತಿದೆ ಎಂದು ಹೇಳುತ್ತೇನೆ. ಇದನ್ನೆಲ್ಲಾ ನೋಡಲು ಮಾನ್ಯ ಮಂತ್ರಿಗಳು ಮಲೆನಾಡು ಪ್ರದೇಶಕ್ಕೆ ಭೇಟಿಕೊಡಬೇಕು, ನಮ್ಮಲ್ಲಿ 10–12 ತಾಲ್ಲೂಕುಗಳು ಇವೆ. ಸುಮಾರು 8 ದಿವಸದ ಕಾರ್ಯಕ್ರಮವೊಂದನ್ನು ಹಾಕಿಕೊಂಡು ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದರೆ ನಾನು ಅವರನ್ನು ಮಲೆನಾಡಿನ ಒಳಪ್ರದೇಶಗಳಿಗೆಲ್ಲಾ ಕರೆದು ಕೊಂಡು ಹೋಗಿ ನೋಡಿಸುತ್ತೇನೆ ತಮಗೆ ನಿಜವಾಗಲೂ ಕಾಡು ಪ್ರದೇಶವನ್ನು ಬೆಳೆಸಬೇಕೆಂಬ ಕಳಕಳಿಯಿದೆಯಲ್ಲಾ; ಅದಕ್ಕೆ ಸೂಕ್ತ ಪ್ರದೇಶವನ್ನು ನಮ್ಮ ಮಲೆನಾಡಿನ ಪ್ರದೇಶದಲ್ಲಿ ತಮಗೆ ತೋರಿಸುತ್ತೇನೆ ಆ ಜಮೀನುಗಳು ಗೋಮಾಳಕ್ಕೂ ಬರುವುದಿಲ್ಲ; ಕೃಷಿಗೂ ಯೋಗ್ಯವಾದುವುಗಳಲ್ಲ; ಅಂಥಾ ಜಮೀನುಗಳು ಅಲ್ಲಿ ಇವೆ

ಅದು ಬಿಟ್ಟು, ಬಯಲು ನಾಡಿನಲ್ಲಿ, ಕೃಷಿ ಮಾಡುವ ಜಮೀನಿನಲ್ಲಿ ಕಾಡು ಬೆಳೆಯಲು, ಹೋದರೆ, ಅಲ್ಲಿ ಹೇಗೆ ಕಾಡು ಬೆಳೆಯುತ್ತದೆ ಹೇರಳವಾಗಿ ಮಳೆ ಬರತಕ್ಕ ಭಾಗದಲ್ಲಿರುವ ಕುರುಚಲು ಗಿಡದ ಪ್ರದೇಶದಲ್ಲಿ ಕಾಡು ಬೆಳೆದರೆ ಏತಕ್ಕೆ ಕಾಡು ಬೆಳೆಯುವುದಿಲ್ಲ ? ಇಂಥಾ ಪ್ರದೇಶಗಳಲ್ಲಿ ಕಾಡುಗಳು ಬಹಳ ಚೆನ್ನಾಗಿ ಬೆಳೆಯುತ್ತವೆ. ಮಲೆನಾಡು ಪ್ರದೇಶದಲ್ಲಿರತಕ್ಕ ಆರಣ್ಯ ನಾಶವಾಗುತ್ತಿರುವುದನು ನೋಡಿದರೆ, ಮತ್ತೆ ಹೊಸದಾಗಿ ತೆರಿಗೆ ಕೊಟ್ಟು, ಪುನಃ ಇನ್ನೊಂದಷ್ಟು ತೆರಿಗೆ ಹಾಕಿ, ಇದರಿಂದ ಅಲ್ಲಿರತಕ್ಕ ಜನರನ್ನು ಲೂಟಿ ಹೊಡೆಯುವುದಕ್ಕೆ ಅವಕಾಶವಾದೀತೇನೊ ಎಂಬ ಅನುಮಾನ ನಮ್ಮನ್ನು ಭಾದಿಸುತ್ತಿದೆ; ಅರಣ್ಯ ಬೆಳೆಸುವುದಕ್ಕೆ ಸರ್ಕಾರದವರು ಹಣ ಖರ್ಚು ಮಾಡುವುದು ಒಳ್ಳೆಯದು; ಇದಕ್ಕೆ ನನ್ನ ವಿರೋಧವಿಲ್ಲ. ಆದರೆ, ಇಲ್ಲಿ ಕುಳಿತುಕೊಂಡು, ವರದಿಯನ್ನು ನೋಡಿ ಒಂದು ತೀರ್ಮಾನಕ್ಕೆ ಬರುವುದು ಬೇಡ. ಈ ಮನೆಯ ಮಾನ್ಯ ಸದಸ್ಯರಾದ ಶ್ರೀ ಎನ್. ವೀರಪ್ಪ ಗೌಡ ಅವರಪ್ರದೇಶಕ್ಕೆ ಕೆಲವರು ಕೇರಳದವರು ಬಂದಿದ್ದಾರೆ. ಅವರು ಒಳಗೆ ನುಸುಳಿದರು ಎಂದರ ಕಬ್ಬಿನ ಗದ್ದೆಗೆ ಹಂದಿ ನುಗ್ಗಿದ ಹಾಗಾಗುತ್ತದೆ. ಕಬ್ಬಿನ ಗದ್ದೆಗೆ ಹಂದಿ ನುಗ್ಗಿ ಹೇಗೆ ಕಬ್ಬಿನ ಬೆಳೆಯನ್ನು ನಿರ್ನಾಮ ಮಾಡುತ್ತದೆ. ಹಾಗೆ ಅವರೂ ಮಾಡುತ್ತಾರೆ. ಇದರಿಂದ ಏನಾಗಿದೆ ಎಂದರೆ, ಸುಮಾರು 10-20 ವರ್ಷಗಳ ಹಿಂದೆ ಕಾಣುತ್ತಿದ್ದ ದಟ್ಟವಾದ ಕಾಡನ್ನು ನಾವು ಇವತ್ತಿನ ದಿವಸ ನೋಡುವುದಕ್ಕಾಗುವುದಿಲ್ಲ. ಮಂತ್ರಿಗಳಾಗಿರತಕ್ಕವರು ಮತ್ತು ರಾಜ್ಯದ ಉನ್ನತ ಅಧಿಕಾರಿಗಳು ಬಾಯಲ್ಲಿ ಲೆಕ್ಚಾಚಾರ ಹಾಕುತ್ತಾರೆಯೇ ವಿನಹ, ಚೀಫ್ ಕನ್ಸರ್ವೇಟರುಗಳು ಅಲ್ಲಿನ ಜನಗಳ ಹತ್ತಿರ ಆರಣ್ಯಾಭಿವೃದ್ಧಿ ಬಗ್ಗೆ ವಿಚಾರ ಮಾಡಿ ಚರ್ಚೆ ಮಾಡಿ, ಎಲ್ಲ ಕಾಡನ್ನು ಅಭಿವೃದ್ಧಿ ಮಾಡಬೇಕು; ಎಷ್ಟು ಎಕರೆ ಪ್ಲಾಂಟೇಷನ್ ಆಗಿದೆ; ಆಗಿರುವ ಪ್ಲಾಂಟೇಷನ್ ಚೆನ್ನಾಗಿ ಆಗಿದೆಯೇ ಎಂಬುದನ್ನು ಯಾರಾದರು ವಿಚಾರ ಮಾಡಿದ್ದಾರೆಯೇ ? ನಮ್ಮ ತಾಲ್ಲೂಕಿನಲ್ಲಿ ಯಾವ ರೀತಿ ಅರಣ್ಯಾಭಿವೃದ್ಧಿ ಆಗುತ್ತಿದೆ ಎಂಬುದನ್ನು ಬನ್ನಿ ತೋರಿಸುತ್ತೇನೆ. ಆದರೆ ಸರ್ಕಾರಕ್ಕೆ ಅಲ್ಲಿಂದ ವರದಿ ಬರಬಹುದು. ಸ್ಥಳದಲ್ಲೇ ವಿಚಾರ ಮಾಡೋಣ ಬನ್ನಿ ಎಂದು ನಾನು ಚೀಫ್ ಕನ್ಸರ್ವೇಟರನ್ನು ಕರೆದರೆ, ಅವರು ಬರುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ:-- ಸರ್ಕಾರದ ಅಧಿಕಾರಿಗಳು ಗ್ರಾಮಾಂತರ ಪ್ರದೇಶದ ಜನರ ಹತ್ತಿರ ಹೋಗಿ ಅವರೊಂದಿಗೆ ನೇರ ಸಂಪರ್ಕ ಇಟ್ಟುಕೊಂಡು ಅವರ ಕುಂದುಕೊರತೆಗಳ ಬಗ್ಗೆ ಸರ್ಕಾರಕ್ಕೆ ವರದಿ ಮಾಡಬೇಕೆಂದು ನಿಯಮ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.— ಹೌದು ಪ್ರವಾಸ ಹೋಗುತ್ತಾರೆ ಇಲ್ಲಿಂದ ಜೋಗಗೆ ಹೋಗುತ್ತಾರೆ ಅಲ್ಲಿಗೆ ಹೋದಮೇಲೆ ಲಂಚ್; ಅಮೇಲೆ ಸ್ವಲ್ಪ ರೆಸ್ಟ್ ನಂತರ ಫ್ರೀ ರೈಡ್ ಇಷ್ಟು ಅವರ ಕಾರ್ಯಕ್ರಮಗಳು ಅಷ್ಟೆ.

4-00 P.M.

ಶ್ರೀ ಕಾಗೋಡು ತಿಮ್ಮಪ್ಪ.— ಅಧ್ಯಕ್ಷರೇ ಇವತ್ತು ವಿಮ್ಕೋ ಕಂಪನಿ ಮತ್ತು ಪ್ಲೇವುಡ್ ಫ್ಯಾಕ್ಟರಿಗೆ ಹೇರಳ ವಾಗಿ ಸಾಫ್ಟ್ ಮರಗಳನ್ನು ಕೊಡುತ್ತಿದ್ದಾರೆ. ಇವತ್ತು ವಿಮ್ಕೋ ಕಂಪನಿಗೆ ರಾಜ್ಯದಲ್ಲಿ ಮಾರಾಟ ಮಾಡಿಕೊಳ್ಳಲಿಕ್ಕೆ ಅಧಿಕಾರ ಕೊಟ್ಟಿದ್ದೀರಾ ? ಪ್ಲೇವುಡ್ ಫ್ಯಾಕ್ಟರಿಯವರು ಟಿಂಬರ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಅದಕ್ಕೆ ಪರವಾನಿಗಿ ಇದೆಯೇ ? ತಾಳಕೆಪ್ಪದಲ್ಲಿ ಸಾಮಿಲ್ಸ್ ಇದೆ, ಅವರು ಪ್ಲೇಮತ್ ಕಾರ್‌ನಲ್ಲಿ ಬರುತ್ತಾರೆ. ಹಲೋ ಸಾರ್ ಎಂದು, ಅವರಿಗೆ ಚಾ ಕೊಟ್ಟು ಕಳುಹಿಸುತ್ತಾರೆ. ನಾವು ಹೋದರೆ ಚೀಟಿ ಇಟ್ಟುಕೊಂಡು ನಿಂತುಕೊಳ್ಳಬೇಕು. ಪ್ಲೇವುಡ್ ಫ್ಯಾಕ್ಟರಿಗೋಸ್ಕರ ಎಷ್ಟೋ ಮರಗಳು ಹಾಳಾಗುತ್ತಿವೆ. ಒಂದು ಮರ ಕಡಿದರೆ ಒಂದು ಎಕರೆ ಪ್ರದೇಶದ ಮರಗಳು ನಷ್ಟವಾಗುತ್ತದೆ. ಕಮರ್ಷಿಯಲ್ ಯೂನಿಯನ್‌ಗೆ ಮಾವಿನ ಮರಗಳನ್ನು ಕೊಟ್ಟುಬಿಟ್ಟರು. 100-200 ವರ್ಷದ ಮರಗಳನ್ನು ಕಡಿದು ಅದರ ಕೊಂಬೆಗಳನ್ನೆಲ್ಲಾ ಅಲ್ಲಿಯೇ ಬಿಟ್ಟುಬಿಡುತ್ತಾರೆ. ಬೇಸಿಗೆಯಲ್ಲಿ ಅಕಸ್ಮಾತ್ತಾಗಿ ಬೆಂಕಿ ಬಿದ್ದರೆ, 5 ಎಕರೆ ಪ್ರದೇಶ ಸುಟ್ಟು ಹೋಗುತ್ತದೆ. ತಾವು ಒಂದು ಭಾರಿ ಬಂದು ಕಾಡನ್ನು ನೋಡಿ ಎಷ್ಟು ಮರ ಸುಟ್ಟು ಹೋಗಿದೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಬರೀ ಚರ್ಚೆ ಮಾಡಿದರೆ ಏನು ಆಗುವುದಿಲ್ಲ, ಆದುದರಿಂದ ಏನು ಅರಣ್ಯದಲ್ಲಿ ಹಾನಿಯಾಗಿದೆಯೋ, ಅದನ್ನು ಸರಿಪಡಿಸತಕ್ಕ ಬಗ್ಗೆ ಅನೇಕ ಅಧಿಕಾರಿಗಳು ಹಲವಾರು ಯೋಜನೆಗಳನ್ನು ಮಾಡಿದ್ದಾರೆ. ಈಗ ಫಂಡ್ ನಿಧಿ ಎಂದು ಮಾಡಿ

ದ್ದೀರಿ, ಇದರಲ್ಲಿ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಹೋಗುವುದು ಯಾವುದು ಪ್ಲಾಂಟೇಷನ ಕಾರ್ಪೊರೇಷನ್‌ಗೆ ಹೋಗುವುದು ಯಾವುದು, ಎನ್ನುವುದು ಗೊತ್ತಾಗುವುದಿಲ್ಲ. ನಮ್ಮ ಊರಿನ ಪಕ್ಕದಲ್ಲಿಯೇ ಕಾರ್ಯಕ್ರಮ ಮಾಡುತ್ತಿದ್ದಾರೆ. ಅವರು ಮಾಡುತ್ತಾ ಇರುವುದನ್ನು ಊರಲೆಲ್ಲಾ ಹೇಳುತ್ತಿದ್ದಾರೆ. ಈ ಎಲ್ಲಾ ಕಾರ್ಪೊರೇಷನ್‌ಗಳಿಗಿಂತ ಕಾಡನ್ನು ಬೆಳೆಸುವುದೇ ಒಂದು ಕೆಲಸ ಎಂದು ಮಾಡಿ, ಹಲವಾರು ಏಜನ್ಸಿಗಳ ಮೂಲಕ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಇವತ್ತು ಏನು ಹಣ ಖರ್ಚು ಮಾಡುತ್ತಾರೆ, ಪ್ರತಿ ವರ್ಷ ಒಂದು ತಾಲ್ಲೂಕಿನಲ್ಲಿ ಇಷ್ಟು ಎಕರೆ ಎಂದು ಗೊತ್ತುಮಾಡಿ ಅದನ್ನು ಬೆಳೆಸುವುದಕ್ಕೆ ಯೋಚನೆ ಮಾಡಿ. ಗುರಿ ಪ್ರಕಾರ ಇಷ್ಟು ಎಕರೆ ಮಾಡಬೇಕು ಎಂದು ಹೇಳುತ್ತೀರಾ ಅದರಂತೆ ಹೇರೋಲ ತಯಾರು ಮಾಡಿ. ಇಷ್ಟು ಎಕರೆಯೊಳಗೆ ಇಷ್ಟು ಗಿಡ ನಟ್ಟೆ ಎಂದು ಸುಸೂತ್ರವಾಗಿ ಲೆಕ್ಕ ಕೊಡುತ್ತಾನೆ. ತಿನ್ನುವ ಜನಕ್ಕೆ ಹಣ ಕೊಟ್ಟು ಹಾಳುಮಾಡ ಬೇಡಿ. ಜನರ ಮೇಲೆ ತೆರಿಗೆ ಹಾಕಿ ಅರಣ್ಯ ಅಭಿವೃದ್ಧಿ ಪಡಿಸುವುದಕ್ಕೆ ಹೊರಟಿದ್ದೀರಿ, ತಮ್ಮಲ್ಲಿ ಅತ್ಯಂತ ಕಳಕಳಿ ಏನು ಎಂದರೆ, ಇದಕ್ಕಾಗಿ ಯಾರನ್ನಾದರೂ ಒಬ್ಬರನ್ನು ಹೊಣೆಗಾರನ್ನಾಗಿ ಮಾಡಿ, ಆಯಾ ಪ್ರದೇಶದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಅರಣ್ಯವನ್ನು ವ್ಯವಸ್ಥಿತವಾಗಿ ಬೆಳೆಸುವುದಕ್ಕೆ ಸಾಧ್ಯ ಎನ್ನತಕ್ಕ ಯೋಜನೆಯನ್ನು ಸಿದ್ಧಪಡಿಸಿ, ಜವಾಬ್ದಾರಿ ಅಧಿಕಾರಿಯ ಮುಖಾಂತರ ರಾಜ್ಯದಲ್ಲಿರತಕ್ಕ ಅರಣ್ಯವನ್ನು ಉಳಿಸುವುದಕ್ಕೆ ಮತ್ತು ಬೆಳೆಸುವುದಕ್ಕೆ ಪ್ರಯತ್ನ ಮಾಡಿ. ಏಕ ಕಾಲದಲ್ಲಿ ಈ ಎರಡು ಕೆಲಸಗಳನ್ನು ಮಾಡಬೇಕೆಂದು ಕಳಕಳಿಯಿಂದ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ.ಎಫ್ ಪಾಟೀಲ್ (ಬ್ಯಾಡಗಿ).— ಮಾನ್ಯ ಅಧ್ಯಕ್ಷರೇ, ಈ ಅರಣ್ಯ ವಸ್ತುಗಳನ್ನು ಮಾರಾಟ ಮಾಡುವುದರ ಬಿಲ್‌ನ ಚರ್ಚೆಯನ್ನು ನಾನು ಕೇಳಿದ್ದೇನೆ. ಕಳೆದ ಒಂದೂವರೆ ವರ್ಷದಿಂದ ಈಚೆಗೆ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ನಿನ ಚೇರ್ಮನ್ನಾಗಿ ನನಗೆ ಬಂದ ಎರಡು ಅನುಭವದ ಮಾತುಗಳನ್ನು ಮಾತ್ರ ಹೇಳುತ್ತೇನೆ. ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ವಿಚಾರದಲ್ಲಿ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಹೇಳಿದ ಮಾತುಗಳನ್ನು ನಾನು ಗಮನಿಸಿದ ಮೇಲೆ ಅವಕ್ಕೆ ಒಂದು ವಿವರಣೆ ನೀಡಬೇಕು ಎಂದು ಅನಿಸಿತು, ವಿವರಣೆ ಅಷ್ಟಕ್ಕೆ ಆರ್ಥಿಕ ದೃಷ್ಟಿಯಿಂದ ಎರಡು ಮಾತು ಹೇಳುತ್ತೇನೆ. ಅರಣ್ಯ ಸಂಪತ್ತು ಹೆಚ್ಚಬೇಕು, ಅರಣ್ಯ ಅಭಿವೃದ್ಧಿಯಾಗಬೇಕು ಎನ್ನುವ ವಿಷಯದಲ್ಲಿ ಯಾವ ಸದಸ್ಯರು ವಿರೋಧ ಮಾಡಲಿಲ್ಲ. ತೆರಿಗೆ ಹಾಕುವುದೋ ಬಿಡುವುದೋ ಎನ್ನುವ ವಿಷಯದಲ್ಲೂ ಭಿನ್ನಾಭಿಪ್ರಾಯ ಇಲ್ಲ ; ಆದರೆ, ಅರಣ್ಯ ಅಭಿವೃದ್ಧಿ ಮಾಡಬೇಕಾದರೆ ಹಣ ಬೇಕು, ಹಣ ಎಲ್ಲಿಂದ ತರಬೇಕು ? ನಾಲ್ಕು ಪಂಚವಾರ್ಷಿಕ ಯೋಜನೆಗಳು ಕಳೆದು ಹೋದರೂ ಪಂಚವಾರ್ಷಿಕ ಯೋಜನೆಗಳಲ್ಲಿ ಅರಣ್ಯ ಇಲಾಖೆಗೆ ಹಣ ಒದಗಿಸುವ ಪ್ರಯತ್ನ ಮಾಡಿಲ್ಲ, ಇದು ಬಜೆಟ್ ಸಿಸ್ಟಮ್‌ನಲ್ಲಿರತಕ್ಕ ದೋಷ. 24 ಕೋಟಿ ರೂಪಾಯಿ ಉತ್ಪನ್ನ ಪ್ರತಿ ವರ್ಷ ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಬರುತ್ತಿದೆ ಆದರೆ ಫಾರೆಸ್ಟ್ ಡೆವಲಪ್‌ಮೆಂಟ್‌ಗೆ ಎಷ್ಟು ಹಣ ಹೋಗುತ್ತಿದೆ ಎಂದು ಲೆಕ್ಕ ತೆಗೆದುಕೊಂಡರೆ ಅತ್ಯಲ್ಪ, ಬಜೆಟ್ ಸಿಸ್ಟಂ ಪ್ರಕಾರ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಹೆಚ್ಚಿಗೆ ಹಣವನ್ನು ಒದಗಿಸುವ ಪ್ರಯತ್ನವನ್ನು ಭರತಖಂಡದಲ್ಲಿ ಯಾವ ರಾಜ್ಯವೂ ಮಾಡಿಲ್ಲ, ಅಭಿವೃದ್ಧಿ ಮಾತ್ರ ಆಗಬೇಕು, ಹಣ ದೊರಕಿಸುವುದಕ್ಕೆ ಒಂದು ಉಪಾಯ ತಿಳಿದುಕೊಂಡು ಸೆಂಟ್ರಲ್ ಗವರ್ನಮೆಂಟ್ ನೇಮಿಸಿದಂತ ನ್ಯಾಷನಲ್ ಕಮೀಷನ್ ಸಮಿತಿಯವರು ಕೂಲಂಕಷವಾಗಿ ಅಭ್ಯಾಸ ಮಾಡಿ, ಫಾರೆಸ್ಟ್ ಅಭಿವೃದ್ಧಿಗೆ ಹಣವನ್ನು ಸಾಲ ತೆಗೆದುಕೊಂಡಾದರೂ ಬರಬೇಕೆಂದು ಹೇಳಿದ್ದಾರೆ. ಸಾಲಕ್ಕೆ ಬಡ್ಡಿ, ಚಕ್ರ ಬಡ್ಡಿ ಕೊಟ್ಟು ತರಬೇಕಾಗುತ್ತದೆ. ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ವಗೈರೆ ಮಾಡುವ ವಿಚಾರ ಹೇಳಿದರು. ಈ ವಿಚಾರ ಕಮೀಷನ್‌ನಿಂದ ಬಂದ ಕೂಡಲೇ ನಮ್ಮ ರಾಜ್ಯದಲ್ಲಿ ಮೊದಲನೆಯದಾಗಿ ಈ ಕಾರ್ಪೊರೇಷನ್ ಪ್ರಾರಂಭವಾಯಿತು. ಇವತ್ತಿನ ದಿವಸ ಒಂದು ಪೈಸೆ ಸಾಲ ದೊರಕಿಸುವುದಕ್ಕೆ ಸಾಧ್ಯವಾಗಿಲ್ಲ, ಕೆಲವು ಏಜನ್ಸಿಗಳ ಮುಖಾಂತರ ಸಾಲಕ್ಕೆ ವ್ಯವಸ್ಥೆ ಮಾಡಬಹುದು. ಅಲ್ಲಿ 7 ಪರ್ಸೆಂಟ್ ಬಡ್ಡಿ ಬ್ಯಾಂಕುಗಳ ಮುಖಾಂತರ 2 ಪರ್ಸೆಂಟ್ ಬಡ್ಡಿ ತೆಗೆದುಕೊಂಡು ಮಾಡುವ ವಿಚಾರ ಇತ್ತು. ಈಗ 11-50 ಪೈಸೆ ಆಯಿತು.

ಈ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್‌ಗೆ ನಾವು ಏನು ಹಣ ಕೊಡುತ್ತೇವೋ ಆ ಹಣ ಎಲ್ಲವೂ ಇದಕ್ಕೆ ಮುಟ್ಟುತ್ತದೆಯೇ ಎನ್ನುವುದು ಈ ಪ್ರಶ್ನೆಯಿಂದ ಉದ್ಭವವಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತು ಹೇಳಿದರು ಡಿಪಾರ್ಟ್‌ಮೆಂಟ್‌ನಿಂದಲೇ ಇದನ್ನು

ಅಫಾರ್‌ಸ್ಟೇಷನ್ ಮಾಡಿದರೆ ಇದಕ್ಕೆ ಹೆಚ್ಚು ಖರ್ಚು ಬೀಳುವುದಿಲ್ಲ, ಈ ಕೆಲಸವನ್ನು ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್‌ನಿಂದ ಮಾಡುವುದಾದರೆ ಹೆಚ್ಚು ಖರ್ಚು ಬೀಳುತ್ತದೆ ಅನ್ನುವುದನ್ನು ಹೇಳಿದರು. ಇದರ ಬಗ್ಗೆ ಮೆರಿಟ್ ಮತ್ತು ಡೀಮೆರಿಟ್ ವಿಚಾರದಲ್ಲಿ ನಾನು ಮಾತನಾಡುವುದಿಲ್ಲ. ಇದರ ಬಗ್ಗೆ ಸ್ಪಷ್ಟೀಕರಣ ಹೇಳುವುದಾದರೆ ಮಾನ್ಯ ಮಂತ್ರಿಗಳು ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಅಂದರೆ ಏನು, ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಅಂದರೆ ಏನು ಅನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬಹುದಾಗಿತ್ತು. ನಾನು ಈ ಬಗ್ಗೆ ಎರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಈವೊತ್ತು ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಏನು ಇದೆ ಇದರ ಜೊತೆಗೆ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ ರಬ್ಬರ್ ಕಾರ್ಪೊರೇಷನ್ ಅಂತ ಇದೆ ಇನ್ನು ಇದೇ ರೀತಿಯಾಗಿ ನಮ್ಮ ರಾಜ್ಯದಲ್ಲಿ 42 ಕಾರ್ಪೊರೇಷನ್ಸ್‌ಗಳು ಇವೆ. ಸರ್ಕಾರಕ್ಕೆ ಇದರ ಹಣದ ವೆಚ್ಚ ಎಷ್ಟಾಗುತ್ತದೆ ಅನ್ನುವುದನ್ನು ನೋಡುವುದಾದರೆ, ಈಗ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ತೆಗೆದುಕೊಂಡರೆ ಇದರ ಹಣದ ವೆಚ್ಚ ಈ ಅನ್ಯಾಯವೇ ಕೊಡುತ್ತದೆ. ಇದಕ್ಕೆ ಬೇಕಾದಂಥಾ ಸಿಬ್ಬಂದಿ ಖರ್ಚು ಬಗ್ಗೆ ಹೇಳುವುದಾದರೆ ಫಾರಿನ್ ಸರ್ವಿಸ್ ಪ್ರಕಾರ ಆ ಜನರನ್ನು ಆಂಟ್ ಆಗಿ ತೆಗೆದುಕೊಳ್ಳುವುದರಿಂದ ಅವರಿಗೆ ಡೆಪ್ಯೂಟೇಷನ್ ಅಲೋಯನ್ಸ್ ಕೊಡಬೇಕಾಗುತ್ತದೆ ಅಲ್ಲದೆ ಇದಕ್ಕೆ ತೆಗೆದುಕೊಂಡಿರತಕ್ಕಂಥ ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ ಇವೆಲ್ಲಾ ಸೇರಿಸಿದರೆ 50 ಸಾವಿರಕ್ಕಿಂತ ಹೆಚ್ಚು ಖರ್ಚಾಗುವುದಿಲ್ಲ. ಅದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು ಇದನ್ನು ಡಿಪಾರ್ಟ್‌ಮೆಂಟಿನಿಂದಲೇ ಅಫಾರ್‌ಸ್ಟೇಷನ್ ಮಾಡಿಸಿದರೆ ಇನ್ನು ಕಡಿಮೆ ಖರ್ಚು ಬೀಳುತ್ತದೆ ಎಂದು. ಅದಕ್ಕೆ ನಾನು ಹೇಳುವುದಾದರೆ ಈಗ ಈ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಏನು ಇದೆಯೋ ಇದು ಇರುವುದು ಅನಾವಶ್ಯಕ ಎಂದು ಹೇಳುತ್ತೇನೆ. ಅಲ್ಲದೆ ಇದನ್ನು ದೊಡ್ಡ ಪ್ರಮಾಣದಲ್ಲಿ ಮಾಡುವುದಾದರೆ ಈ ಫಾರೆಸ್ಟ್ ಪ್ಲಾಂಟೇಷನ್ ಅಭಿವೃದ್ಧಿ ಕೆಲಸ ಚೆನ್ನಾಗಿ ಆಗುತ್ತದೆ. ಹಾಗೇನಾದರೂ ಇದನ್ನು ದೊಡ್ಡ ಪ್ರಮಾಣದಲ್ಲಿ ಮಾಡುವುದಕ್ಕೆ ಆಗದೇಹೋದರೆ, ಈ ಕಾರ್ಪೊರೇಷನ್ ಮಂತ್ರಿಗಳನ್ನೇ ಅಧ್ಯಕ್ಷರನ್ನಾಗಿ ಮಾಡಿ ಡಿಪಾರ್ಟ್‌ಮೆಂಟ್ ಮುಖಾಂತರವೇ ನೋಡಿಸಿದರೆ ಖರ್ಚು ಕಡಿಮೆಯಾಗುತ್ತದೆ ಹೆಚ್ಚಿಗೆ ಖರ್ಚು ಆಗುವುದಿಲ್ಲ. ವಿರೋಧಪಕ್ಷದ ನಾಯಕರು ಹೇಳಿದರು ಡಿಪಾರ್ಟ್‌ಮೆಂಟಿನವರು ಯಾವ ರೇಟ್ ಪ್ರಕಾರ ಪ್ರತಿ ಎಕರೆಗೆ ಖರ್ಚು ಮಾಡುತ್ತಾರೋ ಅದಕ್ಕಿಂತಲೂ ಇದರಲ್ಲಿ ಹೆಚ್ಚು ಖರ್ಚಾಗುತ್ತದೆ ಎಂದು. ಮತ್ತು ಇದರಲ್ಲಿ ಸಿಬ್ಬಂದಿ ಖರ್ಚು ಇನ್ನು ಇತರ ಖರ್ಚುಗಳು ನಮ್ಮ ರಾಜ್ಯದ ಬೊಕ್ಕಸಕ್ಕೆ ಬೀಳುವುದರಿಂದ ಇದರಲ್ಲಿ ಹೆಚ್ಚು ಖರ್ಚಾಗುತ್ತದೆ ಅಂತ ಹೇಳಿದರು. ಮತ್ತು ಈ ರೀತಿಯಾಗಿ ಸಣ್ಣಪುಟ್ಟ ಪ್ರಮಾಣದಲ್ಲಿ ಕಾರ್ಪೊರೇಷನ್ ಮಾಡಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರಿಂದ ಈ ಬಗ್ಗೆ ಟೀಕೆ ಮಾಡಿಸಿಕೊಳ್ಳುವುದು ಸರಿಯಲ್ಲ. ಇದರ ಬಗ್ಗೆ ನಾನು ಹೇಳುವುದು ಇಷ್ಟೇ ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದವರು ಟೀಕೆ ಮಾಡುವುದಕ್ಕೆ ಅಸ್ಪದ ಇರಬೇಕು. ಈಗ ಇದರಿಂದ 1½ ಕೋಟಿ ರೂಪಾಯಿ ಉತ್ಪನ್ನ ತೆಗೆಯುತ್ತೇವೆ. ಈಗ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಏನು ಇದೆಯೋ ಅದನ್ನು ವಜಾ ಮಾಡಿ ಡಿಪಾರ್ಟ್‌ಮೆಂಟ್ ಮುಖಾಂತರವೇ ಈ ಕೆಲಸ ಮಾಡಿಸಲು ಅಸ್ತು ವಹಿಸಿದರೆ ಒಳ್ಳೆಯದು. ಆಗ ಅದರಲ್ಲಿರತಕ್ಕಂಥಾ ಲೋಪದೋಷಗಳನ್ನು ಎತ್ತಿ ತೋರಿಸದಂತೆ ಕೆಲಸ ಮಾಡಬಹುದು. ಅವಾಗ ಇಂತಹ ಟೀಕೆಗಳು ಉದ್ಭವವಾಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಯಾರೋ ಒಬ್ಬ ಅಧಿಕಾರಿ ಹೀಗೆ ಹೇಳಿದರು ಅಂತ ಅವರು ಈ ರೀತಿ ಮಾತನಾಡಿದ್ದು ಅಂದರೆ ಈ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್‌ಗೆ ಈಗ ಹೆಚ್ಚು ಹಣ ಖರ್ಚಾಗುತ್ತೆ, ಇದರ ಕೆಲಸವನ್ನು ಡಿಪಾರ್ಟ್‌ಮೆಂಟ್ ಮುಖಾಂತರವೇ ಮಾಡಿಸಿದ್ದರೆ ಖರ್ಚು ಇನ್ನೂ ಕಡಿಮೆಯಾಗುತ್ತದೆ ಅಂತ ಹೇಳಿದ್ದು ಸರಿಯಲ್ಲ. ಅವರು ಈ ಮನೆಯ ಸದಸ್ಯರಾಗಿದ್ದಾರೆ ಅಲ್ಲದೆ ಜವಾಬ್ದಾರಿ ಸ್ಥಾನದಲ್ಲಿದ್ದಾರೆ, ಅಂಥಾವರು ಈ ರೀತಿ ಮಾತನಾಡಿದ್ದು ಸರಿಯಲ್ಲ. ಇನ್ನು ಉಳಿದ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಇದಕ್ಕೆ ಒಂದು ಕೋಟಿ ಸಾಕಾಗುವುದಿಲ್ಲ ಎಂದರೆ ಇನ್ನೂ 10 ಕೋಟಿ ಬೇಕಾದರೂ ಖರ್ಚು ಮಾಡಿ. ವಿರೋಧಪಕ್ಷದ ನಾಯಕರು ಈಗ ಏನೊಂದು ಮಾತನಾಡಿದ್ದಾರೆ ಅದಕ್ಕೆ ಅವಕಾಶ ಇಲ್ಲದೇ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಈಗ ಇದಕ್ಕೆ ಹಣ ಸಾಕಾಗದೇ ಹೋದರೆ ಹಣಕಾಸಿನ ಮಂತ್ರಿಯವರೊಂದಿಗೆ ಸಮಾಲೋಚನೆ ಮಾಡಿ, ಒತ್ತಾಯ ಪಡಿಸಿ ಇದಕ್ಕೆ ಹೆಚ್ಚು ಹಣ ಖರ್ಚು ಮಾಡಿ ಮುಂದೆ ಇದರ ಬಗ್ಗೆ ಯಾವುದೆ

ಒಂದು ಲೋಪದೋಷ ಕಂಡುಬರದೇ ಇರುವ ರೀತಿಯಲ್ಲಿ ಕೆಲಸ ಮಾಡುವ ಒಂದು ವ್ಯವಸ್ಥೆ ಮಾಡಿಸಿ ಇವರಿಂದ ನಮ್ಮ ನಾಡಿನ ಅಭಿವೃದ್ಧಿಯೂ ಕೂಡ ಆಗುತ್ತದೆ ಎಂದು ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎನ್. ಪಾಟೀಲ್.—(ಅರಣ್ಯಶಾಖೆಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರುಗಳಾದ ಶ್ರೀ ಬಂಗಾರಪ್ಪನವರು, ಶ್ರೀ ಶೀರನಾಳಿ ಚಂದ್ರಶೇಖರ್‌ರವರು, ಶ್ರೀ ಕೆ. ಹೆಚ್. ಹನುಮೇಗೌಡರು' ಶ್ರೀ ವಿ.ಎನ್. ಪಾಟೀಲರು ಇನ್ನೂ ಇತರರು ಇದರ ಬಗ್ಗೆ ಮಾತನಾಡಿದರು, ಕೆಲವೊಂದು ವಿಷಯಗಳ ಬಗ್ಗೆ ಲಘುವಾಗಿ ಹಾಗೂ ಗುರುತರವಾದ ಟೀಕೆಗಳನ್ನು ಮಾಡಿ ಈ ಅರಣ್ಯ ಇಲಾಖೆಯ ಕಾರ್ಯದ ನ್ಯೂನತೆಗಳ ಮೇಲೆ ಕೆಲವೊಂದು ಬೆಳಕು ಚೆಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ ಈ ಅರಣ್ಯವನ್ನು ಯಾವರೀತಿ ಬೆಳೆಸಬೇಕು ಮತ್ತು ಈಗ ಇದರಲ್ಲಿ ಏನು ಪೋಲಾಗುತ್ತಿದೆ ಮತ್ತು ಅಡ್ಮಿನಿಸ್ಟ್ರೇಷನ್ ಚಾಕಚಕ್ಯತೆಯಿಂದ ಮೇಲಾಗುವುದನ್ನು ತೆಗೆಗಟ್ಟಿ ರಾಷ್ಟ್ರದ ಸಂಪತ್ತನ್ನು ಬೆಳೆಸಬೇಕು ಎನ್ನುವ ದೃಷ್ಟಿಯಿಂದಲೂ ಒಬ್ಬೊಬ್ಬರು ತಮ್ಮ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಶ್ರೀ ಬಂಗಾರಪ್ಪನವರು ಮತ್ತು ಶ್ರೀ ಶೀರನಾಳಿ ಚಂದ್ರಶೇಖರ್‌ರವರು ಮಾತನಾಡುವಾಗ ಈ ಒಂದು ಅರಣ್ಯದ ಉತ್ಪಾದನೆಗಳ ಬಗ್ಗೆ ಮಾತನಾಡುತ್ತಾ ಹೇಳಿದರು. ಈ ಅಮೆಂಡ್‌ಮೆಂಟ್ ಮೂಲಕ ಕೆಲವೊಂದಕ್ಕೆ ಆ ಟ್ಯಾಕ್ಸನ್ನು ಹಾಕುತ್ತಾ ಇದ್ದಾರೆ ಎಂದು. ಮತ್ತು ಈಗ ಚರ್ಚೆ ಫೈರ್‌ವುಡ್ ಏನು ಇದೆ ಇದು ಬಡವನರ ಕೆಲವೊಂದು ಬೇಡಿಕೆಗಳಿಗೆ ಮರ ಬೇಕು ಅದನ್ನು ಹೊರತು ಪಡಿಸಿ ಟ್ಯಾಕ್ಸ್ ಹಾಕಬೇಕು ಅಂತ ಒಂದು ಮಾನವಿಯನ್ನು ಸರ್ಕಾರದ ಮುಂದೆ ಅಧ್ಯಕ್ಷರು ಮೂಲಕ ಕೊಟ್ಟಿದ್ದಾರೆ. ಈ ಬಗ್ಗೆ ನಾನು ಹೇಳುವುದಾದರೆ ಈ ಫೈರ್‌ವುಡ್‌ನಿಂದ ರಾಜ್ಯದ ಬೊಕ್ಕಸಕ್ಕೆ ಬರತಕ್ಕಂಥಾ ಉತ್ಪನ್ನ ಬಹಳ ಕಡಿಮೆ. ಅಲ್ಲದೆ ಮಲೆನಾಡಿನ ರೈತರಿಗೆ ಒಂದು ಉರವಲ ಕಟ್ಟಿಗೆಗೋಸ್ಕರ ಅಂದರೆ ಒಂದು ಬಂಡಿ ಕಟ್ಟಿಗೆಗೆ ಏನೊಂದು ಮಾಫಿ ಪಾಸ್ ಕೊಡುತ್ತೇವೋ ಅದಕ್ಕೆ 2½—ಯಿಂದ 5 ರೂಪಾಯಿ ಏನು ಛಾರ್ಜು ಮಾಡುತ್ತಿದ್ದೇವೋ ಅದರ ಮೇಲೆ 5 ಪರ್ಸೆಂಟ್ ಟ್ಯಾಕ್ಸ್ ಬೀಳುತ್ತದೆ. ಇದರಿಂದ ಒಂದು ಉರವಲು ಕಟ್ಟಿಗೆಗೆ 25 ಪೈಸೆ ಜಾಸ್ತಿ ಯಾಗುತ್ತದೆ. ಮಲೆನಾಡಿನಿಂದ ಹೊರಗಡೆಯಿಂದ ಬಂದರೆ ಸರ್ಕಾರೀ ಡಿಪೋನಲ್ಲಿ ಏನು ಮಾರಾಟ ಮಾಡುತ್ತಾರೆ? ಒಂದು ಟನ್‌ಗೆ 25 ರೂಪಾಯಿ ಇದ್ದರೆ ಜಾಸ್ತಿ 1 ರೂಪಾಯಿ 25 ಪೈಸೇ ಬೀಳುತ್ತದೆ. ಮಾನ್ಯ ಸದಸ್ಯರ ಭಾವನೆಗಳನ್ನು ನಾವು ಪೂರ್ತಾ ತಿಳಿದುಕೊಂಡು ಈ ಟ್ಯಾಕ್ಸನ್ನು ಹಾಕುತ್ತಾ ಇದ್ದೇವೆ. ಇದೇನೂ ಅಷ್ಟು ದೊಡ್ಡ ಪ್ರಮಾಣದ್ದಲ್ಲ. ಈವೊತ್ತು ಅಧ್ಯಕ್ಷರ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಮುಂದೆ ಏನಾದರೂ ಒಂದು ಗಂಭೀರವಾದ ಪರಿಣಾಮ ಕಂಡುಬಂದಲ್ಲಿ ಆ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ ಎಂದು ತಿಳಿಸುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದಾದರೆ ಮಾನ್ಯ ಬಂಗಾರಪ್ಪನವರು ಮರ ಕಡಿಯುವುದನ್ನೇ ಬೇಡ ಎಂದು ಹೇಳಿದರು. ಮನುಷ್ಯ ಹುಟ್ಟಿದ ಮೇಲೆ ಸಾವು ಹೇಗೆ ಶತಸಿದ್ಧವೋ ಮರ ಹುಟ್ಟಿದ ಮೇಲೇ ಆ ಮರಕ್ಕೂ ಕೂಡ ಒಂದು ಸಾವು ಇದ್ದೇ ಇದೆ. ಈವೊತ್ತು ನಾವು ಮರವನ್ನು ಕಡಿಯದೇ ಹೋದರೆ ಆ ಮರದ ಒಂದು ಅವಶ್ಯಕತೆ ಮನುಷ್ಯನಿಗೆ, ಆಗಲಿ ಆ ಸಮಾಜಕ್ಕೆ ಆಗಲಿ ಏನು ಉಂಟು ಅದನ್ನು ಯಾರು ಪೂರೈಸಿಕೊಳ್ಳಬೇಕು ಹೇಳಿ. ಆರೀತಿ ಮರವನ್ನು ಬೆಳೆಸಲೇ ಬೇಕು, ಅದನ್ನು ಚೆನ್ನಾಗಿ ಬೆಳೆಸಿದ ಮೇಲೆ ಮುಂದಿನ ಉಪಯೋಗಕ್ಕೆ ಬಾಳುವ ರೀತಿಯಲ್ಲಿ ಉಪಯೋಗಿಸಿಕೊಂಡು ಆ ಕಾಡನ್ನು ಸಂರಕ್ಷಣೆ ಮಾಡಬೇಕು. ಈ ಒಂದು ವಿಚಾರವನ್ನು ತಮಗೆ ಹೇಳಿದರೆ ಈ ಮಸೂದೆಗೆ ಎಲ್ಲರೂ ಬೆಂಬಲ ಕೊಡುತ್ತಾರೆಂದು ಭಾವಿಸುತ್ತೇನೆ. ಮಗು ಹುಟ್ಟಿದ ಕೂಡಲೆ ಅದನ್ನು ಮಲಗಿಸಲು ಬೇಕಾಗುವಂತಹ ತೊಟ್ಟಿಲನ್ನು ಮಾಡಲಾಗುತ್ತದೆ ಮಾನ್ಯ ಸದಸ್ಯರು ಕುಳಿತಿರುವ ಕುರ್ಚಿಗಳನ್ನು ಸಹ ಕಟ್ಟಿಗೆಯಿಂದಲೇ ಮಾಡಲಾಗಿದೆ; ಕೊನೆಗೆ ಮನುಷ್ಯ ಸತ್ತ ಮೇಲೆ ಆತನ ಅಂತಿಮಯಾತ್ರೆಗೆ ಸಹ ಕಟ್ಟಿಗೆಯನ್ನು ಉಪಯೋಗ ಮಾಡಲಾಗುತ್ತದೆ. ಈ ರೀತಿ ಕಟ್ಟಿಗೆ ಇಲ್ಲದೆ ನಮ್ಮ ಜೀವನ ನಡೆಯುವುದಿಲ್ಲ; ನಾವು ಅಡಿಗೆ ಮಾಡುವುದು ಸಹ ಕಟ್ಟಿಗೆಯಿಂದಲೇ ಇಂದು ನಾವು ಕಾಡನ್ನು ಬೆಳೆಸುವುದಕಿಂತ ಹೆಚ್ಚಾಗಿ ಕಾಡನ್ನು ಕಡಿಯುತ್ತೇದ್ದೇವೆಂದು ಭಾವನೆಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದರು. ಇದೇರೀತಿ ನಾವು ಕಾಡನ್ನು ಕಡಿಯುತ್ತಾ ಹೋದರೆ ಮುಂದೆ ಒಂದು ದಿವಸ ನಮ್ಮ ನಾಡಿನಲ್ಲಿದ್ದ ಕಾಡನ್ನು ಕಳೆದುಕೊಂಡು ಬಂಜೆಯಾಗು

ತ್ತದೆಂಬ ಭಾವನೆಯನ್ನು ಏನು ಮಾನ್ಯ ಸದಸ್ಯರು ವ್ಯಕ್ತಪಡಿಸಿದರು, ಅದರಲ್ಲಿ ನಾನೂ ಸಹ ಪಾಲುದಾರನಾಗುವುದರಲ್ಲಿ ಹಿಂದೆಮುಂದೆ ನೋಡುವುದಿಲ್ಲ ; ನಮ್ಮ ರಾಜ್ಯಸರ್ಕಾರದ ಬಡ್ಜೆಟ್‌ನಲ್ಲಿ 50 ರಿಂದ 60 ಸಾವಿರ ಎಕರೆಯಲ್ಲಿ ಹೊಸದಾಗಿ ಪ್ಲಾನ್‌ಟೇಷನ್ ಮಾಡಲು ಹಣ ಒದಗಿಸಲಾಗುತ್ತಿದೆ : ಅದರಂತೆ ನಾವು ಟಿಂಬರ್ ವುಡ್‌ನ್ನು 15 ಸಾವಿರ ಎಕರೆಗಳಲ್ಲಿ, ಫ್ಯೆರ್-ವುಡನ್ನು 18 ಸಾವಿರ ಎಕರೆಯಲ್ಲಿ, ನೀಲಗಿರಿ ಮರಗಳನ್ನು ಹತ್ತು ಸಾವಿರ ಎಕರೆಗಳಲ್ಲಿ ಮತ್ತು ಬಂದು ಮರಗಳನ್ನು ಹತ್ತು ಸಾವಿರ ಎಕರೆಯಲ್ಲಿ, ಹೀಗೆ ವಿವಿಧ ಜಾತಿಯ ಮರಗಳನ್ನು ನಾವು ಪ್ಲಾನ್‌ಟೇಷನ್ ಮಾಡುತ್ತೀದ್ದೇವೆ. ಇಷ್ಟು ಎಕರೆಯಲ್ಲಿ ಬೆಳೆಸಿದರೆ, ಅದು ನಮ್ಮ ಮುಂದಿನ ಪೀಳಿಗೆಗೆ ಸಾಕಾಗುವುದಿಲ್ಲವೆಂದು ಮಾನ್ಯ ಕೆ.ಎಫ್. ಪಾಟೀಲರು ತಿಳಿಸಿದರು, ಈ ಕಾರಣದಿಂದಲೇ ನಾವು ಹೆಚ್ಚು ಹೆಚ್ಚು ಪ್ಲಾನ್‌ಟೇಷನ್ ಬೆಳೆಸಬೇಕು, ಎರಡರಿಂದ 3 ಸಾವಿರ ಎಕರೆಯಲ್ಲಿಯಾದರೂ ಹೊಸದಾಗಿ ಬೆಳೆಸಬೇಕೆಂಬ ದೃಷ್ಟಿಯಿಂದಲೇ ತೆರಿಗೆಯನ್ನು ನಾವು ಈ ಹಾಕುತ್ತಿರುವುದು ; ಈ ರೀತಿ ಹಾಕಿದ ತೆರಿಗೆ ಹಣದಲ್ಲಿ ಫಾರೆಸ್ಟ್ ಕಾರ್ಪೋರೇಷನ್‌ಗೆ ಎಷ್ಟು ಕೊಡುತ್ತೀರಿ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ವಿವರಣೆ ಕೇಳಿದರು, ಮತ್ತು ಈ ಹಣವನ್ನು ಇನ್ನಿತರ ಯಾವ ಯಾವ ಬಾಬುಗಳಿಗೆ ವೆಚ್ಚ ಮಾಡುತ್ತೀರಿ ಎಂದು ಕೇಳಿದರು, ಜೊತೆಗೆ ಈ ಹಣ ಅಪವ್ಯಯವಾಗುವುದಕ್ಕೆ ಅವಕಾಶವಿಲ್ಲವೇ ಎಂಬ ಬಗ್ಗೆ ಸಹ ತಮ್ಮ ಒಂದು ಶಂಕೆಯನ್ನು ವ್ಯಕ್ತಪಡಿಸಿದರು, ಆ ಒಂದು ಶಂಕೆ ಅವರಿಗೆ ಬರುವುದು ಬೇಡ, ನಾವು ಈ ಹಣವನ್ನು ಕೇವಲ ಹೊಸದಾಗಿ ಪ್ಲಾನ್‌ಟೇಷನ್ ಮಾಡುವುದಕ್ಕೋಸ್ಕರ ಮತ್ತು ಮಾಡಿದ ಪ್ಲಾನ್‌ಟೇಷನನ್ನು ರಕ್ಷಣೆ ಮಾಡುವುದಕ್ಕೋಸ್ಕರ ಉಪಯೋಗ ಮಾಡುತ್ತೇವೆ. ಈ ಹಣವನ್ನು ಯಾವುದೇ ಕಾರ್ಪೊರೇಷನ್‌ಗೆ ಕೊಡಲಾಗುತ್ತದೆಂಬ ಬಗ್ಗೆ ಇದರಲ್ಲಿ ಏನೂ ನಮೂದು ಮಾಡಿಲ್ಲ , ಈ ಒಂದು ಕಾರ್ಪೊರೇಷನನ್ನು ಯಾವ ಒಂದು ಉದ್ದೇಶಕ್ಕಾಗಿ ಅಸ್ತಿತ್ವದಲ್ಲಿ ತರಲಾಯಿತೆಂದು ಮಾನ್ಯ ಸದಸ್ಯರು ಕೇಳಿದರು, ಅದಕ್ಕೆ ವಿವರಣೆ ಕೊಡಬೇಕೆಂದರೆ, ಸರ್ಕಾರದಿಂದ ಇದಕ್ಕೆ ಹಣ ಕೊಟ್ಟಿಲ್ಲವಾ ಕಾರಣ, ಬೇರೆ ಬೇರೆ ಸಂಸ್ಥೆಗಳಿಂದ ಹಣ ಪಡೆದುಕೊಳ್ಳುವುದಕ್ಕೆ ಅವಕಾಶವಾಗಲೀ ಎಂಬ ಕಾರಣದಿಂದ ಇದನ್ನು ಸ್ಥಾಪನೆ ಮಾಡಲಾಯಿತು, ಎರಡು ವರ್ಷಗಳ ಹಿಂದೆ ಇದನ್ನು ಸ್ಥಾಪನೆ ಮಾಡಲಾಯಿತು, ಅದರ ಸ್ಥಾಪನೆಯ ಉದ್ದೇಶ ಸಫಲವಾಗಿದೆಯೇ ಎಂದು ಮಾನ್ಯ ಸದಸ್ಯರು ಕೇಳಿ ಅದರ ಬಗ್ಗೆ ತಮ್ಮ ಸಂಶಯವನ್ನು ವ್ಯಕ್ತಪಡಿಸಿದರು, ಅದರ ಉದ್ದೇಶ ಅಷ್ಟೊಂದು ಸಫಲವಾಗಿಲ್ಲವೆಂದು ಹೇಳಬಹುದು,

ಶ್ರೀ ಎನ್. ಬಂಗಾರಪ್ಪ.—ಹಾಗಿದ್ದಮೇಲೆ ಅದನ್ನು ರದ್ದು ಮಾಡಿಬಿಡಿ,

ಶ್ರೀ ಸಿ. ಎನ್. ಪಾಟೀಲ್—ಈಗ ನೀಲಗಿರಿ ಮರಗಳನ್ನು ಬೆಳೆಸುವ ಬಗ್ಗೆ ಸರ್ಕಾರದವರು ಎರಡು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಸರ್ಕಾರದವರು ಇದಕ್ಕೆ ಹೆಚ್ಚು ಗಮನ ಕೊಡುತ್ತಿದ್ದಾರೆಂಬ ವಿಚಾರದಲ್ಲಿ ಮಾನ್ಯ ಸದಸ್ಯರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು ; ಆದರೆ ಅದನ್ನು ಬೆಳೆಸುವುದು ಅನಿವಾರ್ಯವಾಗಿದೆ ; ಆದರಲ್ಲಿ ಫೈಬರ್ ಕಂಟೆಂಟ್ ಜಾಸ್ತಿಯಿರುವುದರಿಂದ ಕಾಗದ ತಯಾರು ಮಾಡುವುದಕ್ಕೆ ಉಪಯೋಗಿಸಬಹುದಾಗಿದೆ; ಮತ್ತು ಬಟ್ಟೆಯ ತಯಾರಿಕೆಗೂ ಸಹ ಇದನ್ನು ಉಪಯೋಗ ಮಾಡಲಾಗುತ್ತಿದೆ ; ಮಾನ್ಯ ಬಂಗಾರಪ್ಪನವರ ಷರಟು ಕೂಡ ಅದರಿಂದಲೇ ತಯಾರಾಗಿರಬಹುದು : ಈ ಕಾರಣದಿಂದಲೇ ನಾವು ಅದನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುತ್ತಿದ್ದೇವೆ. ಕೇಂದ್ರ ಸರ್ಕಾರದವರು ಇದನ್ನು ಬೆಳೆಸಲು ಆರ್ಥಿಕ ಸಹಾಯ ಮಾಡುತ್ತಿದ್ದಾರೆ. ಈ ಹಿಂದೆ ಈ ಮರಗಳನ್ನು ಬೆಳೆಸುವ ವಿಚಾರದಲ್ಲಿ ಹಿಂದಿನ ಸರ್ಕಾರದವರಾಗಲೀ ಅಥವಾ ನಾವಾಗಲೀ ತಪ್ಪು ಮಾಡಿರಬಹುದು ; ಏನೆಂದರೆ, ಮೊದಲು ಈ ಮರಗಳನ್ನು 100 ಅಥವಾ 200 ಇಂಚು ಮಳೆ ಬೀಳುವ ಜಾಗಗಳಲ್ಲಿ ಬೆಳೆಸಲಾಗುತ್ತಿತ್ತು ; ಆದರೆ ಈಗ ಮಳೆ ಕಡಿಮೆ ಬೀಳುವ ಕೋಲಾರ, ಕುಲ್ಬರ್ಗ, ಬೀದರ್‌ನಲ್ಲಿ ಅಂದರೆ ಎಲ್ಲಿ 30 ರಿಂದ 40 ಇಂಚು ಮಳೆಯಾಗುತ್ತದೋ ಅಂತಹ ಕಡೆಗಳಲ್ಲಿ ಮಾತ್ರ ಕಳೆದ ಆರೆಂಟು ವರ್ಷಗಳಿಂದ ಬೆಳೆಸುತ್ತಾ ಬಂದಿದ್ದೇವೆ. ಮಳೆ ಜಾಸ್ತಿ ಬರುವ ಕಡೆ ಇದನ್ನು ಬೆಳೆಯದೆ, ಕಡಿಮೆ ಮಳೆ ಬೀಳುವ ಕಡೆ ಮಾತ್ರ ಇದನ್ನು ಬೆಳೆಸುತ್ತಿದ್ದೇವೆ. ಇನ್ನು ಮುಂದೆ 30 ಅಥವಾ 40 ಇಂಚಿಗಿಂತ ಕಡಿಮೆ ಮಳೆ ಬೀಳುವ ಜಾಗದಲ್ಲಿ ಸಹ ಇದನ್ನು ಬೆಳೆಸುವ ವಿಚಾರದಲ್ಲಿ ಎಕ್ಸ್‌ಪರಿಮೆಂಟ್ ನಡೆಯುತ್ತಿದೆ. ಅಲ್ಲಿಯೂ ಬೆಳೆಸುವುದು ಸರಿ ಎಂದು ಕಂಡುಬಂದರೆ, ಅಲ್ಲಿಯೂ ಸಹ ಬೆಳೆಸುತ್ತೇವೆ. ಕೆಲವು ಮಾನ್ಯ

ಸದಸ್ಯರು ಈ ಬಿಲ್‌ಗೆ ಸಂಬಂಧಪಡದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಅನಧಿಕೃತ ಸಾಗುವಳಿ ಮಾಡುತ್ತಿರುವವರ ವಿಚಾರವನ್ನು ಪ್ರಸ್ತಾಪ ಮಾಡಿದರು ; ಆದರೆ ಅದು ಈ ಬಿಲ್‌ಗೆ ಸಂಬಂಧಪಡದ ಕಾರಣ ಅದಕ್ಕೆ ಉತ್ತರ ಕೊಡುವುದು ಅನಾವಶ್ಯಕವೆಂದು ನಾನು ತಿಳಿದಿದ್ದೇನೆ.

ಇನ್ನು ಕೆಲವು ಮೇಜರ್ ಇಂಡಸ್ಟ್ರಿಗಳಿಗೆ ರಿಯಾಯಿತಿ ದರದಲ್ಲಿ ಈಗಿನ ಸರ್ಕಾರ ಇರಬಹುದು] ಇಲ್ಲವೇ ಹಿಂದಿನ ಸರ್ಕಾರ ಇರಬಹುದು, ಕಚ್ಚಾ ಮಾಲನ್ನು ಒದಗಿಸಲಾಗುತ್ತಿದೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನಷ್ಟವಾಗುತ್ತಿದೆ ಎಂಬುದಾಗಿ ಮಾನ್ಯ ಸದಸ್ಯರು ಕೆಲವರು ತಮ್ಮ ಸಂಶಯ ವ್ಯಕ್ತಪಡಿಸಿದರು. ಈ ಅಂಶದಲ್ಲಿ ಕೂಡ ಸ್ವಲ್ಪ ಮಟ್ಟಿಗೆ ನಿಜವಿದೆ ಎಂದು ಹೇಳಬಹುದು : ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನ್ನು 1956ಕ್ಕೆ ಮುಂಚೆ ಅಂದರೆ ಹಿಂದಿನ ಮುಂಬೈ ಸರ್ಕಾರದ ಆಡಳಿತವಿದ್ದಾಗ ಸ್ಥಾಪನೆ ಮಾಡಬೇಕೆಂಬ ವಿಚಾರ ಬಂದಾಗ, ಆ ಮಿಲ್‌ಗೆ ಬೇಕಾದ ಬಿದಿರನ್ನು ಕಾಡಿನಿಂದ ಟನ್‌ಗೆ 8 ಆಣೆ ಪ್ರಕಾರ ತೆಗೆದುಕೊಂಡು ಹೋಗಲು ಅನುಮತಿ ಕೊಡಲಾಯಿತು ; ಆಗ ಬಿದಿರನ್ನು ಯಾರು ಉಪಯೋಗ ಮಾಡುತ್ತಿರಲಿಲ್ಲವಾದ ಕಾರಣ, ಒಣಗಿದ ಬಿದಿರಿಗೆ ಬೆಂಕಿ ಬಿದ್ದು ಕಾಡೆಲ್ಲಾ ಹಾಳಾಗುತ್ತಿತ್ತು ; ಆ ಕಾರಣದಿಂದ ಬಿದಿರನ್ನು ಯಾರಾದರು ತೆಗೆದುಕೊಂಡು ಹೋದರೆ ಸಾಕು ಎಂದುಕೊಂಡು ಇಷ್ಟೊಂದು ರಿಯಾಯಿತಿ ದರದಲ್ಲಿ ಅಂದರೆ ಒಂದು ಟ್ರಕ್ ಲೋಡ್‌ಗೆ 4—5 ರೂ. ಪ್ರಕಾರ ತೆಗೆದುಕೊಂಡು ಹೋಗಲು ಅವಕಾಶ ಕೊಡಲಾಗಿತು ; ಈಗ ಆ ದರವನ್ನು ಪುನರ್ವಿಮರ್ಷೆ ಮಾಡಲಾಗಿದೆ. 1972ನೇ ಇಸವಿಯವರೆಗೂ ಹಳೆಯ ದರವಿತ್ತು ; 1972ರಲ್ಲಿ ಅದನ್ನು ಪುನರ್ವಿಮರ್ಷೆ ಮಾಡಲಾಯಿತು ; ಈ ಒಂದು ಅಗ್ರಿಮೆಂಟ್‌ನಲ್ಲಿ ದರವನ್ನು ಮತ್ತೆ ಹೆಚ್ಚು ಮಾಡಲು ಅವಕಾಶವಿದೆ. ಅದೇ ರೀತಿ ಹರಿಹರದಲ್ಲಿರುವ ಫಾಲಿಫೈಬರ್ಸ್‌ನವರಿಗೆ 2000ದ ಇಸವಿಯವರೆಗೆ ರಿಯಾಯಿತಿ ದರದಲ್ಲಿ ಕೊಡುವ ಬಗ್ಗೆ ಅಗ್ರಿಮೆಂಟ್ ಆಗಿದೆ. ಈ ರೀತಿ ರಿಯಾಯಿತಿ ದರದಲ್ಲಿ ಅವರಿಗೆ ಕೊಡಲು ಸರ್ಕಾರಕ್ಕೆ ಮನಸ್ಸು ಇಲ್ಲವಾದರೂ ಸಹ, ಅದನ್ನು ಹೆಚ್ಚು ಮಾಡುವ ಬಗ್ಗೆ ಒಂದು ತಿದ್ದುಪಡಿ ಮಾಡಲು ಬರುವುದಿಲ್ಲ ; ಆ ರೀತಿ ಏನಾದರು ಮಾಡಿದರೆ ಅದು ಕೋರ್ಟಿನಲ್ಲಿ ನಿಲ್ಲುವುದಿಲ್ಲ ; ಅವರಿಗೆ ಕೊಟ್ಟಿರುವ ರಿಯಾಯಿತಿಯನ್ನು ವಾಪಸ್ ತೆಗೆದುಕೊಳ್ಳಲು ಈಗ ಇರತಕ್ಕಂಥ ಒಂದು ದಾರಿ ಏನೆಂದರೆ ಮಾನ್ಯ ಸದಸ್ಯರು ಕೆಲವರು ಹೇಳಿದಂತೆ, ಅದನ್ನು ರಾಷ್ಟ್ರೀಕರಣ ಮಾಡುವುದು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಏತಕ್ಕೆ ಮಾಡಬಾರದು ?

ಶ್ರೀ ಸಿ. ಎನ್. ಪಾಟೀಲ್.– ಅದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಎಫ್. ಪಾಟೀಲ್.—ಹೊಸದಾಗಿ ಪ್ಲಾನ್‌ಟೇಷನ್ ಮಾಡಿದ್ದನ್ನು ಅವರಿಗೆ ರಿಯಾಯಿತಿ ದರದಲ್ಲಿ ಕೊಡಬೇಕೆಂಬ ಬಂಧನ ಮೇಲೆ ಇಲ್ಲ. ಏನಿದ್ದರೂ 1960ನೇ ಇಸವಿಗಿಂತ ಮುಂಚೆ ಬೆಳೆದಿದ್ದನ್ನು ಮಾತ್ರ ರಿಯಾಯಿತಿದರದಲ್ಲಿ ಕೊಡುವುದಕ್ಕೆ ಅವಕಾಶವಿದೆ. ಈಗ ಮಾರ್ಕೆಟ್ ರೇಟ್ ಟನ್ ಒಂದಕ್ಕೆ 50-60 ರೂ ಇದ್ದರೂ ಸಹ ಅವರಿಗೆ 24ರೂ. ಇದ್ದರೂ ಸಹ ಅವರಿಗೆ 24 ರೂ. ಪ್ರಕಾರ ಕೊಡಲಾಗುತ್ತಿದೆ. ಇದನ್ನು ತಪ್ಪಿಸಿದರೆ ಸರ್ಕಾರದ ಬೊಕ್ಕಸಕ್ಕೆ ಇನ್ನೂ ಹೆಚ್ಚಿನ ಆದಾಯ ಬರುವುದಿಲ್ಲವೇ ?

ಶ್ರೀ ಸಿ. ಎನ್. ಪಾಟೀಲ್.—1967-68ರವರೆಗೆ ಪ್ಲಾನ್‌ಟೇಷನ್ ಮಾಡಿದ್ದನ್ನು ಮಾತ್ರ ಹಳೆಯ ದರದಲ್ಲಿ ಕೊಡಲಾಗುತ್ತಿದೆ. ಅಲ್ಲಿಂದೀಚೆಗೆ ಪ್ಲಾನ್‌ಟೇಷನ್ ಮಾಡಿದ್ದನ್ನು ಹಳೆಯ ದರದಲ್ಲಿ ಕೊಟ್ಟಿಲ್ಲ.

ಇಂಡಸ್ಟ್ರೀಸ್ ಬೆಳೆಸುವ ದೃಷ್ಟಿಯಿಂದ ಸಾಕಷ್ಟು ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯ. ಉದಾಹರಣೆಗೆ ಹೇಳಬೇಕಾದರೆ ನಾವು ಕೈಗಾರಿಕೆಗೆ ಅಷ್ಟು ಪ್ರೋತ್ಸಾಹ ಕೊಡದೆ ಹೋದರೆ ಕೈಗಾರಿಕೆಗಳಿಂದ ಉತ್ಪತ್ತಿಯಾಗುತ್ತಿರುವ ಕಾಗದದ ಕೊರತೆ ಬಂದರೆ ಆಗ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಇಂಡಸ್ಟ್ರೀಸನ್ನು ಪ್ರೊಟೆಕ್ಟ್ ಮಾಡುವ ಉದ್ದೇಶ ಇಟ್ಟುಕೊಂಡಿರುವುದರಿಂದ ಸ್ವಲ್ಪ ರಿಯಾಯಿತಿ ಕೊಡುತ್ತಾ ಇದ್ದೇವೆ. ಅದನ್ನು ಕೂಡ 5 ವರ್ಷಕ್ಕಿಂಥ ಹೆಚ್ಚಾಗಿ ಕೊಡುವುದಿಲ್ಲ. ಯಾವುದು ಯೋಗ್ಯವಾಗಿ ಕಂಡುಬಂದರೆ ಅದಕ್ಕೆ ಮಾತ್ರ ಕೊಡುತ್ತೇವೆ.

4-30 P.M.

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳಿದಿರಿ ಕಾಗದದ ಕೊರತೆ ಬೀಳುತ್ತದೆಂದು ನಾವು ಕೇಳುವುದು ಫಾರೆಸ್ಟ್ ಪ್ರೊಡ್ಯೂಸ್‌ನಿಂದ ಅಗತ್ಯ ಏನು ಕೈಗಾರಿಕೆಗಳು ಇವೆ ಅವನ್ನು ನ್ಯಾಷನಲೈಸ್ ಮಾಡಿ ಉದಾಹರಣೆಗೆ ವೇಸ್‌ಕೋಶ್ಟ್ ಪೇಪರ್ ಮಿಲ್ ನ್ಯಾಷನಲೈಸ್ ಮಾಡಿ.

ಶ್ರೀ ಸಿ. ಎನ್, ಪಾಟೀಲ್—ಅದು ನಮಗೆ ಸಂಬಂಧಿಸಿದುದು ಅಲ್ಲ. ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದು ಹೇಗೆ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು ಎಂದು ಹೇಳುತ್ತೀರಿ ? ಅದಕ್ಕೆ ಸಮರ್ಥನೆ ಕೊಡಿ.

ಶ್ರೀ ಸಿ. ಎನ್. ಪಾಟೀಲ್.—ಅಷ್ಟು ದೊಡ್ಡ ಕೆಲಸ ನಮ್ಮ ಸ್ಟೇಟ್ ಗೌರ್ನಮೆಂಟ್ ಮಾಡುವುದಕ್ಕೆ ಬರುವುದಿಲ್ಲ. ಇನ್ನು ಕೆಲವೊಂದು ಅರಣ್ಯದ ಉತ್ಪತ್ತಿಗೆ ಹಾನಿ ಬರತಕ್ಕಂಥ ದರ ಬಗ್ಗೆ ಮಾನ್ಯ ಗುರುಸಿದ್ದಪ್ಪನವರು ಮತ್ತು ಇತರೇ ಸದಸ್ಯರು ಹೇಳಿದರು. ಅದು ಕಳ್ಳಸಾಗಾಣಿಕೆ ಮೇಲೆ ನಿರ್ಬಂಧಗಳನ್ನು ಹಾಕಿ ಎಂದು. ನಾವು ಈಗಾಗಲೇ ವಾಚ್ ಅಂಡ್ ವಾರ್ಡ್ ಹಾಕಿ ಅವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿದ್ದೇವೆ. ಬಂದೂಕು ಮತ್ತು ಗುಂಡುಗಳನ್ನು ಕೊಟ್ಟಿದ್ದೇವೆ. ಎಷ್ಟೋ ಕಡೆ ಷೂಟ್ ಕೂಡ ಮಾಡಿದ್ದಾರೆ. ಇಂಥ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಲಾ ಡಿಪಾರ್ಟ್‌ಮೆಂಟ್ ಒಪೀನಿಯನ್, ಕೇಳಬೇಕಾಗುತ್ತದೆ. ಈ ವಿಷಯದಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಭರವಸೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

SRI H. T. KRISHNAPPA —I don't mind seizure. If the person is found guilty ultimately, the vehicle in which the forest produce was transported should also be confiscated.

SRI C. N. PATIL.—If it is legally permissible, I will move an amendment. ಇನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು ಬಯಲು ಸೀಮೆಯಲ್ಲಿ ಕಾಡನ್ನು ಬೆಳೆಸಬೇಕು ಮಲೆನಾಡು ಪ್ರದೇಶದಲ್ಲಿಯೇ ಬೆಳೆಸುತ್ತಾ ಹೋದರೆ ಬಯಲು ಸೀಮೆಯ ಅಭಿವೃದ್ಧಿಯಾಗುವುದಿಲ್ಲವೆಂದು. ಮಲೆನಾಡು ಪ್ರದೇಶದಲ್ಲಿ ಏನು ಕಾಡು ಇತ್ತು ಅದು ಪೂರ್ಣವಾಗಿ ಹಾಳಾಗಿ ಹೋಗಿದೆ. ಇನ್ನು ಬಿಜಾಪುರ ಜಿಲ್ಲೆಯಲ್ಲಿ ವರ್ಲ್ಡ್ ಬ್ಯಾಂಕ್ ಸ್ಕೀಮಿನಲ್ಲಿ ಬೇಕಾದಷ್ಟು ಫಾರೆಸ್ಟನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಇನ್ನು ಕೆಲವು ಸದಸ್ಯರು ಹೇಳಿದ್ದಾರೆ ಈಗ ಏನು ಟ್ಯಾಕ್ಸ್ ಹಾಕುತಿದ್ದೇವೆ ಅದರಲ್ಲಿ ಬರತಕ್ಕಂಥ ಆದಾಯವನ್ನು ಕಾಡಿನ ಅಭಿವೃದ್ಧಿಗೆ ಉಪಯೋಗಿಸಬೇಕು ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರೂ ಹಾಗೂ ಬಂಗಾರಪ್ಪನವರು ಏನು ನಾವು ಬದ್ರಾವತಿ ಕಾರ್ಖಾನೆಗೆ ಚಾರ್‌ಕೋಲ್ ಮತ್ತು ಬೊಂಬನ್ನು ಒದಗಿಸುತ್ತಿದ್ದೇವೆ. ಎನ್ನುವುದನ್ನು ಬಹಳ ಹೃದಯಂಗಮವಾಗಿ ವರ್ಣಿಸಿದರು. ಇನ್ನು ವ್ಯಾಲ್ಯೂಬಲ್ ಸ್ಪೀಸೀಸ್ ಕವರ್ ಮಾಡುವುದಕ್ಕೆ ಹೇಳಿದ್ದಾರೆ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಾಡಿದ್ದೇವೆ. ಅಲ್ಲಿಗೆ ಜಾಸ್ತಿ ಉತ್ಪನ್ನ ಕೊಡಬೇಕು ಎನ್ನುವ ಉದ್ದೇಶ್ಯದಿಂದ ಮಲೆನಾಡು ಪ್ರದೇಶಕ್ಕೆ ಬಹಳ ಪ್ರಾಶಸ್ತ್ಯ ಕೊಟ್ಟಿದ್ದೇವೆ. ಇನ್ನು ಮಲೆನಾಡು ಮತ್ತು ಹೊರನಾಡು ಬಗ್ಗೆ ಸಾಕಷ್ಟು ಏನು ಪ್ರಾಮುಖ್ಯತೆ ಕೊಡಬೇಕೋ ಅದನ್ನು ಕೊಡಲು ಸರ್ಕಾರ ಯಾವಾಗಲೂ ತಯಾರಿದೆ. ಪ್ರತಿಯೊಂದು ಭಾಗಕ್ಕೂ ಏನು ಗೋಮಾಳ ಜಮೀನು ಇದೆ ಅಲ್ಲಿ ಫಾರೆಸ್ಟನ್ನು ಬೆಳೆಸಿ ಸ್ಥಳೀಯವಾಗಿ ಯಾವುದು ಉಪಯೋಗಕ್ಕೆ ಬರುತ್ತದೆ ಅದನ್ನು ಮಾಡಬೇಕೆಂದು ತಿಳಿಸಿದ್ದಾರೆ. ಅದೇ ರೀತಿ ಬಳ್ಳಾರಿ ಜಿಲ್ಲೆಯಲ್ಲಿ ಹೇಳುವುದಾದರೆ ನೀಲಗಿರಿ ಗಿಡಗಳು ಬಹಳವಾಗಿ ಬೆಳೆಯುತ್ತವೆ. ಅವಕ್ಕೆ ಬೇರೆ ಗಿಡಗಳ ಹಾಗೆ ಜಾಸ್ತಿ ಪ್ರೊಟೆಕ್ಷನ್ ಬೇಕಾಗಿಲ್ಲ. ಕಾರಣವಾದರೂ ಇಷ್ಟೆ. ಯಾವುದನ್ನು ಆಡು ಮುಟ್ಟುವುದಿಲ್ಲ ಅದಕ್ಕೆ ಜಾಸ್ತಿ ಪ್ರೊಟೆಕ್ಷನ್ ಕೊಡಬೇಕಾಗುವುದಿಲ್ಲ. ಆದ್ದರಿಂದ ಅಂತಹ ಸಸಿ ಯಾವುದಾದರೂ ಕೂಡ ಬೆಳೆಸುವುದಕ್ಕೆ ತೊಂದರೆಯಿರುವುದಿಲ್ಲ. ಈ ಆಡು ಏನು ಇದೆ ಇದು ತಿನ್ನುವ ಯಾವುದೇ ಗಿಡವಾಗಲಿ ಅದನ್ನು ಬೆಳೆಸುವುದು ಬಹಳ ಕಷ್ಟ ಅದು ಆಡು ಗಿಡಗಳಿಗೆ ವೈರಿ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಈಗ ಕೆಲವೊಂದು ಸ್ಪೀಸೀಸ್

ಬಂದಿವೆ. ಅವು ಬೆಂಗಾಲ್ ಸ್ಪೀಸಿಸ್ ಎಂದು. ಅವನ್ನು ಬೆಳೆಸುವುವಕ್ಕೆ ಪ್ರಯತ್ನ ಮಾಡುತ್ತೇವೆ ಇನ್ನು ಫಾರೆಸ್ಟ್ ಇಲಾಖೆಯ ಹಣದಿಂದ ಸಸಿ ನಡೆಸುವುದಕ್ಕೆಂದು ಗುಂಡಿಗಳನ್ನು ಹೊಡೆಸಿ ಸರ್ಕಾರದ ಹಣವನ್ನು ಪೋಲು ಮಾಡಿದ್ದಾರೆಂದು, ಅದು ಗೌರ್ನರ್ ರಿಜಿಮ್‌ನಲ್ಲಿ ಮಾಡಿದ್ದು. ಮೊದಲು ಲೋಕೋಪಯೋಗಿ ಇಲಾಖೆ ಸೇರಿದ್ದು ಆಮೇಲೆ ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಬಂದಿತು. ಈಗ ಅದಕ್ಕೆ ಸರಿಯಾದ ಟೈಂ ಬಂದಿದೆ. ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಂಡು ಅದನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳುವುದರಲ್ಲಿದೆ. ಇನ್ನು ಕಂಪಲ್ಸರಿ ಅಪರ್‌ಸ್ಟೇಷನ್ ಮಾಡುವ ಬಗ್ಗೆ ಫಾರಂ ಫಾರೆಸ್ಟರಿ ಪ್ರಕಾರ ರೈತ ತನ್ನ ಜಮೀನಿನಲ್ಲಿ ಒಕ್ಕಲುತನಕ್ಕೆ ಬೇಕಾದ ಮರಗಳನ್ನು ಬೆಳೆದುಕೊಳ್ಳಬೇಕು ಎಂದು ಅಗ್ರಿಕಲ್ಚರಲ್ ಅಡ್ವೈಸರ್ಸ್ ಒಂದು ಯೋಜನೆಯನ್ನು ಹಾಕಿದ್ದಾರೆ. ಒಬ್ಬ ರೈತನಿಗೆ ಒಂದು ಎಕರೆ ಭೂಮಿ ಇದ್ದರೆ 2 ಮರಗಳನ್ನು ಹೊಂದಿರಬೇಕು. ಅಂಥ ಮರಗಳು ಅರಣ್ಯದಲ್ಲಿದ್ದರೆ ಅರಣ್ಯದ ಸಂಪತ್ತು ಎಂದು ಅದಕ್ಕೆ ಸಹಾಯ ಕೊಡುತ್ತೇವೆ. ಇದನ್ನು ಕಡ್ಡಾಯವಾಗಿ ಬೆಳೆಸಬೇಕು ಇದಕ್ಕೆ ಒಂದು ತಿದ್ದುಪಡಿಯನ್ನು ತರಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮುಂದಿನ ಬಡ್ಜೆಟ್ ಸೆಷನ್‌ನಲ್ಲಿ ಇಂಟರ್‌ಡ್ಯೂಸ್ ಮಾಡಬೇಕೆಂದು ಒಂದು ಅಭಿಲಾಷೆಯನ್ನು ಹೊಂದಿದ್ದೇವೆ. ಮಾನ್ಯ ಸದಸ್ಯರು ಫಾರೆಸ್ಟ್ ಅಫೆಂಡರ್ಸ್ ಬಗ್ಗೆ ಒಂದು ಕಠಿಣವಾದ ಕಾನೂನನ್ನು ಮಾಡಬೇಕು ಎಂದು ಹೇಳಿದ್ದಾರೆ. ಯಾರು ಅರಣ್ಯವನ್ನು ದುರುಪಯೋಗ ಮಾಡುಕೊಳ್ಳುತ್ತಾರೆ ಅವರ ಬಗ್ಗೆ ಯಾರು ಖೂನಿ ಅಥವಾ ಕೊಲೆ ಮಾಡುತ್ತಾರೋ ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಆ ರೀತಿ ಅವರಿಗೆ ಫನಿಷ್‌ಮೆಂಟ್ ಕೊಡುವ ರೀತಿ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಇಂತಹವರ ಮೇಲೆ ಕ್ರಮ ತೆಗೆದುಕೊಂಡ ಇವರನ್ನು ಏತಕ್ಕೆ ಮೀಸಾ ಪ್ರಕಾರ ಜೈಲಿಗೆ ಕಳುಹಿಸಬಾರದು ಎಂದು ಹೇಳಿದ್ದಾರೆ. ಆದರೆ ಆ ರೀತಿ ಮಾಡಬೇಕಾದರೆ ಕಾನೂನಿನ ಪ್ರತಿಬಂಧಕ ಇರುತ್ತದೆ ನಾವು ಲಾ ಪರಿಣತರನ್ನು ಕೇಳಿದಾಗ ಅವರು ಆ ರೀತಿ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ ಮೇಲೆ ಅದನ್ನು ಉಪಯೋಗ ಮಾಲಿಡಲ್ಲ. ಮಾನ್ಯ ಅಧ್ಯಕ್ಷರ ಮೂಲಕ ಈ ಸದನಕ್ಕೆ ತಿಳಿಸಬಯುಸುತ್ತೇನೆ. ಯಾವ ರೀತಿಯಿಂದಲಾದರೂ ಫಾರೆಸ್ಟ್ ಅಭಿವೃದ್ಧಿಯ ಬಗ್ಗೆ ನಾವು ಎಂದು ಹಿಂದೆ ಹೋಗುವುದಿಲ್ಲ. ಅದರ ಅಭಿವೃದ್ಧಿಯ ಬಗ್ಗೆ ಮಾನ್ಯ ಸದಸ್ಯರಿಗಿರುವಷ್ಟೆ ಆಸಕ್ತಿ ಸರ್ಕಾರಕ್ಕೂ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಮೈದಾನ ಪ್ರದೇಶದಲ್ಲಿ ಗೋಮಾಳ ಇರುವ ಕಡೆಗಳಲ್ಲಿ ಯೂಕಲಿಪ್ಟಸ್ ಬೆಳೆಯನ್ನು ಹಾಕುವುದರಿಂದ ಅಲ್ಲಿ ಹುಲ್ಲು ಬೆಳೆಯುವುದಿಲ್ಲ. ಏಕೆಂದರೆ ಅಲ್ಲಿನ ಜನರು ತಕರಾರು ಮಾಡುತ್ತಾರೆ. ಅಂತಹ ಪ್ರದೇಶಗಳಲ್ಲ ಬೇರೆ ಜಾತಿ ಮರಗಳನ್ನು ಬೆಳೆಸಿದರೆ ಬಹಳ ಉಪಯೋಗವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಸಲಹೆಮಾಡುತ್ತೇನೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಸಿ. ಎನ್. ಪಾಟೀಲ್.—ಯೂಕಲಿಪ್ಟಸ್ ಮರದ ಕೆಳಗೆ ಹುಲ್ಲು ಬೆಳೆಯುವುದಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದು ಸ್ವಲ್ಪಮಟ್ಟಿಗೆ ನಿಜ. ಆದರೆ ಈ ಮರವನ್ನು ಎಲ್ಲ ಹಾಕುತ್ತಾರೋ ಅಲ್ಲಿ ಹೆಚ್ಚಿಗೆ ನೀರು ತೆಗೆದುಕೊಂಡು ಜಮೀನನ್ನು ಬರಡು ಮಾಡುತ್ತದ ಎಂಬುದಾಗಿ ಹೇಳಿದ್ದು ತಪ್ಪು. ಪೂರ್ತಿಯಾಗಿ ಯೂಕಲಿಪ್ಟಸ್ ಮರವನ್ನು ಹಾಕಿದರೆ ಪಶುಸಂಪತ್ತಿಗೆ ತೊಂದರೆ ಯಾಗುತ್ತದೆ. ಏಕೆಂದರೆ ಪಶುಗಳಿಗೆ ಹುಲ್ಲು ಯಥೇಚ್ಛವಾಗಿ ಬೇಕಾಗುತ್ತದೆ. ಹುಲ್ಲಿಗೆ ಬರ ಬಂದೀತೆಂಬ ವಿವೇಚನೆಯಿಂದ ಕನಿಷ್ಟಪಕ್ಷ ಇರುವ ಜಮೀನಿನಲ್ಲಿ ಅರ್ಧಭಾಗದಲ್ಲ ಕೆಲವು ಜಾತೀಯ ಮರಗಳನ್ನು ಅಂದರೆ ಅದರಲ್ಲಿಯೂ ರೈತರಿಗೆ ಉಪಯೋಗವಾಗುವ ಸ್ಪೀಸೀಸ್‌ಗಳನ್ನು ಹಾಕಬೇಕೆಂದೂ, ಇನ್ನುಳಿದ ಅರ್ಧಭಾಗದಲ್ಲಿ ಯೂಕಲಿಪ್ಟಸ್ ಮರಗಳನ್ನೂ ಹಾಕುವ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಯೋಗ್ಯ ನಿರ್ಣಯವನ್ನು ಕೈಗೊಳ್ಳುತ್ತೇವೆಂದು ನಾನು ಈ ಸಭೆಗೆ ತಿಳಿಸುತ್ತೇನೆ.

ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್.—ತಾವು ಮಾತನಾಡುವಾಗ ಒಂದು ಎಕರೆಗೆ ಎರಡು ಜಾತಿಯ ಮರಗಳನ್ನು ಬೆಳೆಸಬೇಕೆಂದು ಅಭಿಪ್ರಾಯ ಕೊಟ್ಟಿದ್ದೀರಿ. ಕೇವಲ ಒಂದು ಎಕರೆಯಲ್ಲಿ ಎರಡು ಜಾತಿಯ ಮರಗಳನ್ನು ರೈತನಾದವನು ಹೇಗೆ ಬೆಳೆಸುವುದಕ್ಕೆ ಸಾಧ್ಯ.

ಶ್ರೀ ಸಿ. ಎನ್. ಪಾಟೀಲ್.—ಎರಡು ಮರಗಳು ಅಂದರೆ, ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಪ್ರಕಾರ ಐದು ಎಕರೆಯಲ್ಲಿ ಬರೀ ಪ್ಲೈವುಡ್ ಮರಗಳನ್ನು ಮಾತ್ರ ಆ ಸ್ಪೀಸೀಸ್ ಬೆಳೆಸಬೇಕೆಂದರೆ ಸಾಧ್ಯವಾಗುವುದೇ ಇಲ್ಲ. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಮುಖ್ಯವಾಗಿ ರೈತರಿಗೆ ಅದರಿಂದ ಉಪಯೋಗವಾಗಬೇಕು. ಅಲ್ಲಿ ಒಂದು ಸಾರಿ ಬೆಳೆದ ಮರ ಕಡಿದು ಹಾಕಿದ ಮೇಲೆ ಮತ್ತೆ ಅದೇ ಜಮೀನಿನಲ್ಲಿ ಹೇಗಾದರೂ ಮಾಡಿ ಸಾಗುವಳಿ ಮಾಡಬೇಕು. ಅಂತಹ ಮರಗಳನ್ನು ಬೆಳೆಸಬೇಕು. ಏಕೆಂದರೆ ಆಹಾರ ಪದಾರ್ಥಗಳನ್ನು ಬೆಳೆಯುವುದು ರೈತರ ಮೂಲ ಕರ್ತವ್ಯ.

ಇನ್ನೊಂದು ವಿಷಯ. ಕೆಲವು ಮಾನ್ಯ ಸದಸ್ಯರು ಎನ್‌ಕ್ರೋಚ್‌ಮೆಂಟ್ ಬಗ್ಗೆ ಕೆಲವು ಕಡೆಗಳಲ್ಲಿ 5—10 ವರ್ಷಗಳಿಂದಲೂ ಒಂದೇ ಸಮನೆ ಅನ್ ಆತರೈಜ್ಡ್ ಕಲ್ಟಿವೇಷನನ್ನು ಅನೇಕರು ಮಾಡುತ್ತಿದ್ದರೂ ಸರ್ಕಾರ ಏನೂ ಗಮನ ತೆಗೆದುಕೊಂಡಿಲ್ಲವೆಂದು ಹೇಳಿದರು. ಅದನ್ನು ರೆಗ್ಯುಲರೈಜ್ ಮಾಡಬೇಕೆಂದು ಅನೇಕರು ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿ ಹೇಳುವುದಕ್ಕೆ ಬದಲಾಗಿ ಈಗ ಬಹು ಮುಖ್ಯವಾಗಿ ಫಾರೆಸ್ಟ್ ಬೆಳೆಸುವುದಕ್ಕೆ ಕೆಲವಾರು ಸಲಹೆಗಳನ್ನು ಕೊಟ್ಟಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಎನ್‌ಕ್ರೋಚ್‌ಮೆಂಟ್ ಬಗ್ಗೆ ನಾನು ಹೇಳಬೇಕೆಂದರೆ ಅಂತಹ ರೀತಿ ಎನ್‌ಕ್ರೋಚ್ ಮಾಡುವವರನ್ನು ಮರ್ಸಿಲೆಸ್ಸಾಗಿ ಹೊರಗೆ ಹಾಕಬಹುದು. ನಮ್ಮ ವಿಶಾಲ ಕರ್ನಾಟಕ ಆದಮೇಲೆ 1956ರ ನಂತರ ಫಾರೆಸ್ಟ್ ಇಲಾಖೆಯಿಂದ ಸುಮಾರು 5 ಲಕ್ಷ ಎಕರೆ ಜಮೀನು ಕೈಬಿಡಲಾಗಿದೆ. ಅದು ಮುಳುಗಡೆಯಾದ ರೈತರಿಗೆ ರಿಹ್ಯಾಬಿಲಿಟೇಷನ್‌ಗೋಸ್ಕರ ಇಂಡಸ್ಟ್ರಿಯಲ್ ಎಸ್ಟಾಬ್ಲಿಷ್‌ಮೆಂಟ್‌ಗೋಸ್ಕರ ಹಾಗೂ ವ್ಯವಸಾಯ ಅಭಿವೃದ್ಧಿಗೋಸ್ಕರ ಹೋಗಿದೆ. ಇನ್ನೂ ಇತರ ದೊಡ್ಡ ದೊಡ್ಡ ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇ ಕಾಳೀ ನದಿಯ ಯೋಜನೆಯಿಂದ ಸುಮಾರು 50—60 ಸಾವಿರ ಎಕರೆಗಳಷ್ಟು ಮುಳುಗಡೆಯಾಗುವುದರಿಂದ ರಿಹ್ಯಾಬಿಲಿಟೇಷನ್‌ಗೋಸ್ಕರ 12 ಸಾವಿರ ಎಕರೆಗಳಷ್ಟು ಕೈಬಿಡಬೇಕಾಗಿವೆ. ನಮ್ಮಲ್ಲಿ ವರಾಹಿ, ಬ್ಯಾಡತಿ ಮುಂತಾದ ನದಿಗಳು ಸಾಕಷ್ಟು ಜೀವನದಿಗಳು ನಮ್ಮ ಫಾರೆಸ್ಟ್‌ನಲ್ಲಿ ಹುಟ್ಟಿ ಸಮುದ್ರಕ್ಕೆ ಸೇರುತ್ತವೆ. 20ನೇ ಶತಮಾನದಿಂದೀಚೆಗೆ ನೋಡಿದರೆ ಸುಮಾರು 104 ಯೋಜನೆಗಳನ್ನು ಕೈಗೊಂಡಿದ್ದರಿಂದ ಸುಮಾರು 2 ಲಕ್ಷ ಎಕರೆ ಜಮೀನು ಫಾರೆಸ್ಟ್ ಇಲಾಖೆಯಿಂದ ಮಿನರಲ್ ವೆಲ್ತ್ ಎಕ್ಸ್‌ಪ್ಲಾಯಿಟೇಷನ್‌ಗೋಸ್ಕರ ಹೋಗಬೇಕಾಗುತ್ತದೆ. ಅದಕ್ಕೋಸ್ಕರ ಇದ್ದ ಜಮೀನನ್ನು ಅರಿಯಾಗಿ ಉಪಯೋಗಿಸಿಕೊಂಡು ಆಹಾರೋತ್ಪತ್ತಿ ಹಾಗೂ ಕೃಷಿ ಉತ್ಪನ್ನವನ್ನು ಅಭಿವೃದ್ಧಿ ಮಾಡಿದರೆ ನಮಗೆ ಹೆಚ್ಚಿನ ಉಪಯೋಗವಾಗುತ್ತದೆ. ಅಗ ಈಗ ಇರತಕ್ಕ ಜಮೀನು ಸಾಕಾಗಬಹುದು. ಅನೇಕ ಯೋಜನೆಗಳನ್ನು ಪೂರ್ತಿಯಾಗಿ ಜಾರಿಗೆ ತರುವುದಕ್ಕೋಸ್ಕರ ಒಕ್ಕಲುತನದ ಬೇಡಿಕೆ. ಹಸಿವು ಅಷ್ಟಾಗಿ ತೃಪ್ತಿಯಾಗುವುದಿಲ್ಲ. ಈಗ ಅಗ್ರಿಕಲ್ಚರ್‌ಗೋಸ್ಕರ ಇರತಕ್ಕ ಜಮೀನು ರಿಲೀಫ್ ಮಾಡಿಸಬೇಕಾದರೆ ಮಾನ್ಯ ಸದಸ್ಯರು ಸೂಚಿಸಿರುವ ಹಾಗೆ ಫಾರೆಸ್ಟ್‌ನಲ್ಲಿ ಟಿಂಬರ್ ಕೊರತೆ ಬಂದಾಗ್ಗೆ ಅದು ಒಂದು ಸಾರಿ ಕೈಬಿಟ್ಟು ಹೋದಮೇಲೆ ಮತ್ತೇ ಜಮೀನನ್ನು ಅಕ್ವೈರು ಮಾಡುತ್ತೇವೆಂದು ಹೇಳಿ ಅಲ್ಲಿ ಪುನಃ ಫಾರೆಸ್ಟ್ ಬೆಳೆಸುತ್ತೇವೆಂದು ಹೇಳಿದರೆ ಅದು ಖಂಡಿತವಾಗಿ ಸಾಧ್ಯವಾಗುವುದಿಲ್ಲ. ಅರಣ್ಯ ದೇಶದ ಸಂಪತ್ತು. ಇದನ್ನು ಹೆಚ್ಚಿಗೆ ಬೆಳೆಸುವುದಕ್ಕೆ ಮಾನ್ಯ ಸದಸ್ಯರು ಅನೇಕ ಟೀಕೆಟಿಪ್ಪಣಿ ಹಾಗೂ ಸಲಹೆಗಳ ಮೂಲಕ ಮಾರ್ಗದರ್ಶನ ಮಾಡಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರಿಗೂ ಅಧ್ಯಕ್ಷರ ಮೂಲಕ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅರಣ್ಯ ಸಚಿವರು ಉತ್ತರದಲ್ಲಿ ಕಾಡು ಹಾಳಾಗಬಾರದು ಅದನ್ನು ಉಳಿಸಬೇಕೆಂದು ಹೇಳಿದರು. ಅದು ಸರ್ಕಾರದ ಮೊದಲನೆಯ ಕರ್ತವ್ಯವೇನೋ ಸರಿ. ಆದರೆ ಈಗ ಮಲೆನಾಡು ಭಾಗಗಳಲ್ಲಿ ಏನು ಮರಗಳನ್ನು ಕಡಿದು ಹಾಕುತ್ತಿದ್ದಾರೋ ಅದು ತತ್‌ಕ್ಷಣ ಈಗಲೇ ನಿಲ್ಲಿಸಬೇಕು. ನಮ್ಮಲ್ಲಿ ಅಪೂರ್ವವಾದ ದೊಡ್ಡ ದೊಡ್ಡ ಕಾಡುಗಳಿವೆ. ಇನ್ನೂ ಹೆಚ್ಚು ಹೆಚ್ಚು ಕಾಡು ಬೆಳೆಯುತ್ತಾ ಇದೆ. ಅದಕ್ಕೋಸ್ಕರವಾಗಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಡಿನಲ್ಲಿ ಮರಗಳನ್ನು ಕಡಿದು ಹಾಕತಕ್ಕ ಕೆಲಸವನ್ನು ನಿಲ್ಲಿಸಬೇಕೆಂದು ಆದೇಶವನ್ನು ಕೊಡುತ್ತೀರಾ ಇಂಥದ್ದನ್ನು ನೀವು ಮಾಡಿದರೆ ನಿಮ್ಮ ಒಂದು ಹೇಳಿಕೆಯಿಂದ ಅನೇಕ ಕಡೆಗಳಲ್ಲಿ ಕಾಡಿನ ಸಂಪತ್ತನ್ನು ಉಳಿಸಿದಂತಾಗುತ್ತದೆ. ಇದು ಅನೇಕ ಜಿಲ್ಲೆಗಳಿಗೆ ಸಂಬಂಧಪಟ್ಟದ್ದಾಗಿದೆ

ಶ್ರೀ ಸಿ. ಎನ್. ಪಾಟೀಲ್.—ಕುರುಕ್ಷೇತ್ರದಲ್ಲಿ ಅಭಿಮನ್ಯುವಿನ ಪಾರ್ಟ್ ಮಾಡಿದ ಹಾಗೆ ಮಾಡಿದರೆ ಹೇಗೆ ? ಫಾರೆಸ್ಟ್ ಪ್ರಿನ್ಸಿಪಲ್ಸ್ ಪ್ರಕಾರ ಕಾಡನ್ನುಳ್ಳಂಥ ಪ್ರದೇಶಗಳಲ್ಲಿ ಹಳೇ ಮರಗಳನ್ನು ಕಡಿದುಹಾಕಲೇಬೇಕು. ಹುಟ್ಟಿದ ಮನುಷ್ಯನಿಗೆ ಸಾವು ಹೇಗೋ ಹಾಗೆ ಇವಕ್ಕೂ ಅಂತಹ ಒಂದು ಹಂತವಿದೆ. ಆದ್ದರಿಂದ ಫಾರೆಸ್ಟ್ ಪ್ರಿನ್ಸಿಪಲ್ಸ್ ಪ್ರಕಾರ ಅಲ್ಲಿ ಅಂತಹ ಮರಗಳನ್ನು ಕಡಿಯಲೇ ಬೇಕಾಗುತ್ತದೆ.

SRI KAGODU THIMMAPPA.—We have no objection to remove the old species or the matured species.

ಶ್ರೀ ಸಿ. ಎನ್. ಪಾಟೀಲ್.—ಅಂತಹ ಸ್ಪೀಸೀಸ್ ನಮ್ಮಲ್ಲಿ ಅನೇಕ ವರ್ಷಗಳಿಂದಲೂ ಇವೆ. ಅವುಗಳಲ್ಲಿ ಒಂದನ್ನೂ ಸಹ ಮುಟ್ಟಬೇಡಿ ಎಂದು ಹೇಳಿದರೆ ಹೇಗೆ ? ರೂಲ್ಸ್ ಪ್ರಕಾರ ಕಾಡುಗಳಲ್ಲಿರತಕ್ಕ ಇಂತಿಂಥ ಮರಗಳನ್ನು ಕಡಿಯಬೇಕೆಂದಿರುವಾಗ, ಅದರಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

MR. DEPUTY SPEAKER.—The question is :

"That the Karnataka Forest (Amendment) Bill, 1976, be ta en into consideration."

The motion was adopted.

CLAUSES 2 AND 3

MR. DEPUTY SPEAKER.—As there are no amendments I will put to the vote of the house. The question is

"That Clauses 2 and 3 both inclusive. do stand part of the bill"

The motion was adopted

Clauses 2 and 3 both inclusive were added to the Bill

CLAUSE 1 ETC

MR. DEPUTY SPEAKER.— The question is

"That clause 1, the long title and the preamble and the enacting formula do stand part of the bill.

The motion was adopted

Clause 1 of the title and preamble and the enacting formula were added to the bill

Motion to Pass

SRI C. N. PATIL —Sir, I beg to move :

"That the Karnataka Forest (Amendment) Bill, 1976 be passed."

MR. DEPUTY SPEAKER.—The question is :

"That the Karnataka Forest (Amendment) Bill 1975 be passed."

The motion was adopted and the bill was passed